11. ಶಾಸನರಚನೆ

(ಅ) ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ 1999

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ಈ ಸುಗ್ರೀವಾಜ್ಞೆಯನ್ನು ರಿಪ್ಲೇಸ್ ಮಾಡುವುದಕ್ಕೆ ಈ ಮಸೂದೆಯನ್ನು ತಂದಿರತಕ್ಕಂಥದ್ದು. ಆದರೆ ಮಸೂದೆ ತರುವಾಗ ಸುಗ್ರೀವಾಜ್ಞೆಯಲ್ಲಿ ಇಲ್ಲದೆ ಇರತಕ್ಕಂತಹ ಅಂಶಗಳನ್ನು ಇದರಲ್ಲಿ ಅಳವಡಿಸಿಕೊಂಡದ್ದೀರಿ. ಈ ರೀತಿ ಸುಗ್ರೀವಾಜ್ಞೆಯಲ್ಲಿ ಇಲ್ಲದೆ ಇರತಕ್ಕಂತಹ ಅಂಶಗಳನ್ನು ಮಸೂದೆಯಲ್ಲಿ ಅಳವಡಿಸಿಕೊಂಡು ಒಂದು ಮಸೂದೆಯನ್ನು ಸದನದಲ್ಲಿ ಮಂಡಿಸುವಾಗ, ಆ ಮಸೂದೆಯಲ್ಲಿ ನೀವು ಹೇಳಬೇಕಾಗುತ್ತದೆ. ಈ ಕಾರಣಕ್ಕಾಗಿ ಹೊಸ ವಿಷಯಗಳನ್ನು ಮಸೂದೆಯಲ್ಲಿ ಸೇರಿಸಿದ್ದೇವೆ ಎನ್ನುವುದನ್ನು ನೀವು ಹೇಳಬೇಕಾಗುತ್ತದೆ. ಅದನ್ನು ನೀವು ಹೇಳಲಿಲ್ಲ. ಹೇಳದೇ ಇರುವುದರಿಂದ ನೀವು ತಂದಿರತಕ್ಕಂತಹ ಮಸೂದೆ ಅನರ್ಹವಾಗಿದೆ, ಅಸಿಂಧುವಾಗಿದೆ. ಆದ್ದರಿಂದ ದಯವಿಟ್ಟು ಮಸೂದೆಯನ್ನು ಮಂಡಿಸುವುದನ್ನು ತಡೆಹಿಡಿದು, ಯಾವ ಕಾರಣಕ್ಕಾಗಿ ನೀವು ಹೊಸ ವಿಷಯವನ್ನು ಸೇರಿಸಿ ತಂದಿದ್ದೀರಿ ಎನ್ನುವುದನ್ನು ರೀಸನ್ ಅಂಡ್ ಅಬ್ಜೆಕ್ಷನ್‌ನಲ್ಲಿ ಹೇಳಿ, ಹೊಸದಾಗಿ ಮಂಡಿಸುವುದಕ್ಕೆ ಪ್ರಯತ್ನ ಮಾಡಿ. ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ (ಪಂಚಾಯತ್ ರಾಜ್ ಸಚಿವರು) : ಈಗಾಗಲೇ ಮಸೂದೆ ಮಂಡನೆಯಾಗಿದೆ. ಮಂಡನೆಯಾಗಿರತಕ್ಕಂತಹ ಸಂದರ್ಭದಲ್ಲಿ ತಾವು ಕೆಲವು ವಿಚಾರಗಳನ್ನು ಆಕ್ಷೇಪ ಮಾಡಿದ್ದೀರಿ. ಆದರೆ ಅದು ಈಗಾಗಲೇ ಮಂಡನೆಯಾದ ಮೇಲೆ ಪರ್ಯಾಲೋಚನೆಗೆ ತೆಗೆದುಕೊಳ್ಳುವಂತಹ ಸ್ಟೇಜ್. ಪರ್ಯಾಲೋಚನೆಗೆ ತೆಗೆದುಕೊಳ್ಳತಕ್ಕಂತಹ ಸಂದರ್ಭದಲ್ಲಿ ಆರ್ಡಿನೆನ್ಸ್‌ನಲ್ಲಿ ಇಲ್ಲದೆ ಇರತಕ್ಕಂಥದ್ದನ್ನು ತಾವು ಮಸೂದೆಯಲ್ಲಿ ತಂದಿದ್ದೀರಿ ಎಂಬ ಮಾತನ್ನು ಹೇಳಿದ್ದೀರಿ. ಅದು ಕೇವಲ ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್‌ಗೆ ಸಂಬಂಧಪಟ್ಟ ವಿಚಾರ ಮಾತ್ರ. ನಾವು ಅಧ್ಯಾದೇಪನ ತಂದ ಮೇಲೆ ಯಾವುದೇ ತರಹದ ಕೆಲವು ಸಂಕಷ್ಟಗಳನ್ನು ಅಲ್ಲಿ ಇಡುವುದಕ್ಕೆ ಬರುವುದಿಲ್ಲ. ಪಂಚಾಯಿತಿ ರಾಜ್ ವ್ಯವಸ್ಥೆಯಲ್ಲಿ ಇರತಕ್ಕಂತಹ ಆಸ್ತಿಪಾಸ್ತಿ ವಿಚಾರದಲ್ಲಾಗಲಿ, ಅಲ್ಲಿರುವಂತಹ ಸಿಬ್ಬಂದಿಯ ವರ್ಗದ ವಿಚಾರವಾಗಲಿ, ಅಥವಾ ಅದನ್ನು ಯಾವ ರೀತಿ ರೂಪಗೊಳಿಸಬೇಕೆನ್ನುವ ವಿಷಯಕ್ಕೆ ಮಧ್ಯಂತರವಾಗಿರತಕ್ಕಂತಹ ಟ್ರಾನ್ಸಿಟ್ಟರಿ ಪ್ರಾವಿಷನ್‌ಗಳನ್ನು ಇರತಕ್ಕಂಥದ್ದು, ಯಾವಾಗಲೂ ನಡೆದು ಬಂದಿರತಕ್ಕಂಥದ್ದು. ತಾವು ಹೇಳಬಹುದು, ಆ ಮೆಮರಾಂಡಂನ್ನು ಏಕೆ ಇದರಲ್ಲಿ ಅಟ್ಯಾಚ್ ಮಾಡಲಿಲ್ಲವೆಂದು. ಪರ್ಯಾಲೋಚನೆ ಸಂದರ್ಭದಲ್ಲಿಯೂ ಕೂಡ ಆ ವಿಚಾರವನ್ನು ಹೇಳಬೇಕಾಗುತ್ತದೆ. ಅದಕ್ಕೆ ಒಂದು ಫಾರ್ಮೇಟ್ ಕೂಡ ಇದೆ. ತಾವೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿದ್ದೀರಿ. ಆ ಫಾರ್ಮೇಟಿನ ಪ್ರಕಾರವಾಗಿ ಏನು ಟ್ರಾನ್ಸಿಟರಿ ಪ್ರಾವಿಷನ್ ಇದೆ, ಅದು ಅಧ್ಯಾದೇಪನದಲ್ಲಿರತಕ್ಕಂಥದ್ದಲ್ಲದ್ದು ಇಂತಹ ಕಾರಣಗಳಿಗಾಗಿ ಎನ್ನುವಂಥದ್ದು ಇದೆಯೇ ವಿನಃ ಸಬ್‌ಸ್ಟ್ಯಾನ್‌ಷಿಯೇಟಿವ್ ಕ್ಲಾಸಸ್ ಆಗಿರತಕ್ಕಂಥದ್ದು ಏನಿದೆ. ಅದ್ಯಾದೇಪನದಲ್ಲಿರತಕ್ಕಂಥದ್ದೇ ಇಲ್ಲಿ ಪುನರಾವರ್ತನೆಯಾಗಿದೆ. ಇದು ನಾವು ಅಧ್ಯಾದೇಪನವನ್ನು

ತರಲೇಬೇಕಾಗಿರುವಂಥದ್ದು ಏಕೆ ಆಗಿದೆ ಎಂದರೆ ಭಾರತ ಸಂವಿಧಾನದ ಆರ್ಟಿಕಲ್ 213ರ ಕೆಳಗೆ ಪ್ರಾವಿಷೋ 2 (ಎ)ರ ಕೆಳಗೆ ಏನಾಗುತ್ತದೆ ಎಂದರೆ ' an ordinance promulgated under this Article shall have the same force and effect as an Act of Legislature of a State assented to by the Governor, but every such ordinance.

. a) shall be laid before the legislative Assembly of the State or where there is Legislative council in the State, before both the House and shall cease to operate at the expiry of six weeks from the re-assembly of the Legislature or, if before expiry of that period, a resolution disapproving it is passed in the Legislative Assembly and agreed to by the legislative council if any, upon passing of the resolution or as the case may be on the resolution being agreed to by the council." ಈ ಕಾರಣ ಇರುವುದರಿಂದ ನಾವು ರಿಪ್ಲೇಸ್ ಮಾಡಲೇಬೇಕಾಗುತ್ತದೆ. ರಿಪ್ಲೇಸ್ ಮಾಡದೇ ಇದ್ದರೆ ಈ ಕಡೆ ನಮ್ಮ ಅಧ್ಯಾದೇಪನವೂ ಉಳಿಯುವುದಿಲ್ಲ ಮತ್ತು ಕಾಯಿದೆಯೂ ಇರುವುದಿಲ್ಲ ಈ ವಿಚಾರವನ್ನು ಏಕೆ ನಿಮಗೆ ಹೇಳುತ್ತಿದ್ದೇನೆಂದರೆ, ನಿಮಗೆ ಈ ವಿಚಾರ ಗೊತ್ತಿಲ್ಲವೆಂದು ಅಲ್ಲ. ನಾನು ಇದಕ್ಕೆ ಮಂಡನೆ ಮಾಡುವಂತಹ ಸಂದರ್ಭದಲ್ಲಿ ತಾವು ಆಕ್ಷೇಪಣೆಯನ್ನು ಎತ್ತಿದ್ದೀರಿ. ಇದನ್ನು ಮಂಡನೆ ಮಾಡುವ ಸಂದರ್ಭದಲ್ಲಿ ಮಾನ್ಯ ಘೋರ್ಪಡೆಯವರು ಇದನ್ನು ಮಂಡನೆ ಮಾಡುವ ಅಗತ್ಯವಿಲ್ಲವೆಂದು ಹೇಳಿದರು. ಮಂಡನೆ ಮಾಡುವ ಸಂದರ್ಭದಲ್ಲಿ ಅಲ್ಲ ಪರ್ಯಾಲೋಚನೆ ಮಾಡುವ ಸಂದರ್ಭದಲ್ಲಿ ತಾವು ಏನು ಹೇಳಬೇಕೋ ಅದನ್ನು ಹೇಳಿ. ತಮ್ಮನ್ನು ನಾನು ಕನ್‌ವಿನ್ಸ್ ಮಾಡುವಂತಹ ಪ್ರಯತ್ನ ಮಾಡತ್ತೇನೆ. ಹಾಗೆಂದು ಹೇಳಿದ ಮೇಲೆ ಮಾನ್ಯ ಅಧ್ಯಕ್ಷರು ಅದನ್ನು ಮಂಡನೆ ಮಾಡುವುದಕ್ಕೆ ಅವಕಾಶ ಕೊಟ್ಟರು. ಆದ್ದರಿಂದ ಮಂಡನೆಯಾಗಿದೆ. ಟ್ರಾನ್ಸಿಟರಿ ಪ್ರಾವಿಷನ್ ಇರತಕ್ಕಂಥದ್ದು ಏನಿದೆ, ಅದರ ವಿಚಾರವಾಗಿ ತಾವು ತಾಂತ್ರಿಕವಾಗಿ ಹೊಗತಕ್ಕಂತಹ ಅಗತ್ಯವಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ರಿಪ್ಲೇಸ್ ಮಾಡುವುದಕ್ಕೆ ಒಂದು ಮಸೂದೆಯನ್ನು ಸದನದಲ್ಲಿ ಮಂಡಿಸುವುದಕ್ಕೆ ಸಂಪೂರ್ಣ ಅಧಿಕಾರವಿದೆ, ಆ ಕೆಲಸವನ್ನು ನೀವು ಮಾಡಿದ್ದೀರಿ.

SRI J. C. MADHAU SWAMY : There can be additions and deletions for the ordinance.

ಶ್ರೀ ಕಾಗೋಡು ತಿಮ್ಮಪ್ಪ : ಅವರು ಅಡಿಷನ್ಸ್ ಹೆಚ್ಚೂ ಮಾಡಬಹುದು, ಕಡಿಮೆ ಮಾಡಬಹುದು, ಇಲ್ಲದೇ ಇರುವುದನ್ನು ಸೇರಿಸಬಹುದು. ಆದರೆ ಆ ಮಸೂದೆಯಲ್ಲಿ ಮೆಮೋರ್‍ಯಾಂಡಮ್ ನಲ್ಲಿ ರೀಸನ್ಸ್‌ನ್ನು ಹೇಳಬೇಕಾಗುತ್ತದೆ. ನೀವು ಯಥಾವತ್ತಾಗಿ ಮಸೂದೆಯನ್ನು ಮಂಡಿಸಿದರೆ ಹೇಳಬೇಕಾದ ಅಗತ್ಯವಿಲ್ಲ.

ಅಧ್ಯಕ್ಷರು : ತಾವು ಅನುಭವಸ್ಥರಿದ್ದೀರಿ. ಆರ್ಡಿನೆನ್ಸ್‌ನ್ನು ರಿಪ್ಲೇಸ್ ಮಾಡುವುದಕ್ಕೆ ಅವರು ಸಭೆಯ ಮುಂದೆ ಬಂದಿದ್ದಾರೆ. ಆರ್ಡಿನೆನ್ಸ್‌ಲ್ಲಿ ಏನೆಲ್ಲಾ ಮೆನ್‌ಷನ್ ಮಾಡಬೇಕು, ಟ್ರಾನ್ಸಿಟರಿ ಅರೇಂಜ್‌ಮೆಂಟ್ ಏನು ಬೇಕಾಗಿತ್ತು ಅದನ್ನೆಲ್ಲಾ ಹೇಳಿದ್ದಾರೆ. ಬೇರೆ ಕೆಲವು ತಿದ್ದುಪಡಿಗಳಿದ್ದರೆ

ಮಾಡಿಕೊಡತಕ್ಕಂತಹ ಹಕ್ಕು ಈ ಸಭೆಗೆ ಇದೆ. ಸದನದ ಮುಂದೆ ಅದನ್ನೂ ಕೂಡ ಸೇರಿಸಿ ತಂದಿದ್ದಾರೆ. ಪರ್ಯಾಲೋಚನೆಗೆ ಅವರು ಇಟ್ಟಾಗ ಪ್ರಸ್ತಾಪವನ್ನು ಪರ್ಯಾಲೋಚನೆಗೆ ಮಂಡಿಸಿ ವಿವರಣೆ ಕೊಡುತ್ತಾರೆ. ಈ ಸಭೆಯಿಂದ ಏನು ಬೇಡುತ್ತಾರೆ ಎನ್ನತಕ್ಕಂಥದ್ದನ್ನು ತಿಳಿಸುತ್ತಾರೆ. ನಾನು ತಮ್ಮಲ್ಲಿ ಏನು ವಿನಂತಿ ಮಾಡುತ್ತೇನೆಂದರೆ when he pleads the co-operation of the House for considering what he is moving, you can come forward and explain your objects and reasons.

SRI KAGODU THIMMAPPA : There is an error on the part of the Government. How they are going to rectify the mistake it is upto them. They have to plead before you and get the assent. But I pointed out that there is a mistake. Memorandum should have been appended to. That is the mistake I raised

ಅಧ್ಯಕ್ಷರು : ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ಸ್ ಅಂಡ್ ರೀಸನ್ಸ್‌ನಲ್ಲಿ ಬರಬೇಕಾಗಿತ್ತು.

ಶ್ರೀ ಕಾಗೋಡು ತಿಮ್ಮಪ್ಪ : ಬರಬೇಕಾಗಿತ್ತು ಅದು ಅಲ್ಲ How they are going to rectify the mistake ;

MR SPEAKER : it is a lacuna.

ಶ್ರೀ ಎಂ. ಪಿ. ಪ್ರಕಾಶ್ : ಟ್ರಾನ್ಸಿಟರಿ ಪ್ರಾವಿಷನ್ಸ್ ಇದ್ದಾಗ ನಾವು ಅದನ್ನು ಇಲ್ಲಿ ಮೆಮೋರ್‍ಯಾಂಡಮ್ ಮೂಲಕವಾಗಿ ಹೇಳಬೇಕಾದ ಅಗತ್ಯ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅಧ್ಯಕ್ಷರೆ, they should have complied with that.

ಅಧ್ಯಕ್ಷರು : ಮಾನ್ಯ ತಿಮ್ಮಪ್ಪನವರು ಹೇಳಿದಂತಹ ವಿಚಾರ, ಅವರೇನು ವಿಚಾರ ಪ್ರಸ್ತಾಪ ಮಾಡಿದ್ದಾರೆ, ಅದನ್ನು ಸಮರ್ಥಿಸುತ್ತಾ, ನಾರ್ಮಲ್ ಕೋರ್ಸ್‌ನಲ್ಲಿ ತಾವು ಅದನ್ನು ಮೆಮೋರ್‍ಯಾಂಡಮ್‌ನಲ್ಲಿ ಕೊಡಬೇಕಾಗಿತ್ತು. ಕೊಟ್ಟಿಲ್ಲ. ಆದರೂ ಕೂಡ ನೀವು ಈ ಸನ್ನಿವೇಶದಲ್ಲಿ ಪರ್ಯಾಲೋಚನೆಗೆ ನಿಂತಿದ್ದೀರಿ. ಈಗ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ಸ್‌ನಲ್ಲಿ ನೀವು ಏನು ಡೆಮಾನ್‌ಸ್ಟ್ರೇಟ್ ಮಾಡಿದ್ದೀರಿ, ಅದರ ಜೊತೆಗೆ ಅದನ್ನೂ ಕೂಡ ಸೇರಿಸಿ ತಾವು ಹೇಳಿ. It is admitted that it is a lapse, But I have asked the Government to explain the stand even in relation to those aspects which have not been appended to in the Memorandum.

ಶ್ರೀ ಎಂ. ಪಿ. ಪ್ರಕಾಶ್ : ಟ್ರಾನ್ಸಿಟರಿ ಪ್ರಾವಿಷನ್ಸ್ ಆಗಿರುವುದರಿಂದ ಮೆಮೋರ್‍ಯಾಂಡಮ್‌ನಲ್ಲಿ ಬರಬೇಕೆಂದೇನೂ ಇಲ್ಲ. ನಾನು ಅದನ್ನು ಕನ್‌ವಿನ್ಸ್ ಮಾಡುತ್ತೇನೆ. ತಾವು ನಮ್ಮ ನೆರವಿಗೆ ಬಂದಿದ್ದಕ್ಕೆ ಧನ್ಯವಾದಗಳು.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 1ನೇ ಏಪ್ರಿಲ್ 1999 ರಂದು ನಡೆದ ಕಾರ್ಯಕಲಾಪಗಳ ಸಲಹಾ ಸಮಿತಿ

ಸಭೆಯಲ್ಲಿ ವಿಧಾನಸಭೆ ಶನಿವಾರ ದಿನಾಂಕ 3ನೇ ಏಪ್ರಿಲ್ 1999ರಂದು ಸೇರಿ ಕಲಾಪಗಳನ್ನು ನಡೆಸಲು ತೀರ್ಮಾನಿಸಿದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

ಶ್ರೀ ಜೆ. ಸಿ. ಮಧುಸ್ವಾಮಿ : ನಾಳೆ ಮಾಡಬಹುದಿತ್ತು.

ಶ್ರೀ ಎಂ. ವೀರಪ್ಪ ಮೊಯಲಿ : ನಾನು ಒಂದು ಪ್ರೊಸೀಜರ್ ವಿಚಾರ ಹೇಳುತ್ತೇನೆ. ಕೌಲ್ ಅಂಡ್ ಶಕ್ದರ್‌ನ ಪೇಜ್ 553ರಲ್ಲಿ ಇರುವ ವಿಚಾರ ಹೇಳುತ್ತೇನೆ. ಮಾನ್ಯ ಹಿರಿಯ ಸದಸ್ಯರಾದಂತಹ ಶ್ರೀ ಕಾಗೋಡು ತಿಮ್ಮಪ್ಪನವರು ಏನು ವಿಚಾರ ಎತ್ತಿದ್ದಾರೆ, ಅದರ ಬಗ್ಗೆ ಒಂದು ಪ್ರಸ್ತಾಪ ಇದೆ. ಏಕೆಂದರೆ ಡಿಫಾಲ್ಟ್‌ಗೆ ಹೋಗಬಾರದು ಎಂದು ಅಷ್ಟೇ ಹೊರತು ಪ್ರಾಕ್ಟಿಕಲ್ ರೀಸನ್ಸ್‌ಗಾಗಿ ನಾನು ವಿಷಯ ಎತ್ತುತ್ತಿಲ್ಲ. ಇಲ್ಲಿ ಬಹಳ ಸ್ಪಷ್ಟವಾಗಿದೆ. whenever a bill seeking to replace ordinance with or without modification - with modification also they can introduce there is no prohibition, is introduced in the House and a statement explaining the circumstances which has necessitated immediate legislation..." In 553 :

"...seeking to replace with modification of provisions of the ordinance is introduced in the House. The Modification contained in the Bill are required to be explained in a Memorandum appended to the Bill". It is mandatroy provision. There is no escape from it.

MR. SPEAKER : Please read out, is it mandatory.

SRI M. VEERAPPA MOILY : .. " are required to be explained in a Memorandum.." It is mandatory.

SRI M. P. PRAKASH : There is also explanation under Sub Rule (1) of Rule 80 of Rules of Procedure & Conduct of Business in the Legislative Assembly. Explanation is also given.

SRI M. VEERAPPA MOILY : What you have said

"Consequent to the proposal of restructuring of Grama Panchayat, it is proposed that each Grama Panchayat Member shall be elected for every one thousand population..." where is it? I am not objecting for introducing transitory provision. Modification can also be introduced. ಅದಕ್ಕೆ ಅಡ್ಡಿ ಬರುತ್ತಿಲ್ಲ. ಆದರೆ ನಿಮ್ಮ ಸ್ಟೇಟ್‌ಮೆಂಟ್ ಆಫ್ ಅಬ್ಜೆಕ್ಷನ್ ಅಂಡ್ ರೀಸನ್ಸ್ ಅಲ್ಲದೇ where is the Memorandum here. Totally absent. He has to come out with the Memorandum. You can't say, statement of objects and reasons should be treated as Memorandum. How can it be ? There should be a separate Memorandum since the modifications have been introduced which is not found place here. No.1 this ordinance replacing bill will be an ordinance Replacing Bill. Some times modifications may have to be done. ಮಾಡಿಫಿಕೇಷನ್ ಮಾಡಬೇಕಾದರೆ ಮೆಮಾರ್‍ಯಾಂಡಂ ಅಫೆಂಡ್ ಮಾಡಬೇಕಾಗುತ್ತದೆ ಅದು ಎಲ್ಲಿದೆ ? which I fnd

totally absent

MR. SPEAKER : ' Are required to be' ಎನ್ನುವ ಪದಗಳು does it constituate a mandatory status ?

SRI M. VEERAPPA MOILY : Are required means requisite. What is the word, let us go through - requisite qualification means necessary qualification.

MR. SPEAKER : Generally ' shall' ಎಂದು ಇದ್ದರೆ it is mandatory ಎಂದು ನಾವು ಟ್ರೀಟ್ ಮಾಡುತ್ತೇವೆ.

SRI M. VEERAPPA MOILY : Not necessary. Required means requisite qualification.

ಅಧ್ಯಕ್ಷರು : ಅದು ಸರಿ. ಅದಕ್ಕೇ ನಾನು ಅವರು ರಿಕ್ವಿಸಿಟ್ ಕ್ವಾಲಿಫಿಕೇಷನ್ ಕೊಡಬೇಕಾಗಿತ್ತು.

It is a lapse, but, however he has stood up to explain I will permit ಎಂದು ಹೇಳಿದೆ. ಆದರೆ ಅದು ಮ್ಯಾಂಡೇಟರಿ ಆಗಲಾರದು.

SRI M. VEERAPPA MOILY : No, no it is mandatory. If a person does not possess a requisite qualification, is he eligible to consider for any appointment - No ; It is a legal requirement.

SRI M. P. PRAKASH : Apart from the observation made by the Hon'ble Speaker when it is connected with only a transitory provision, it need not necessarily go along with the memorandum as such. Apart from that please kindly look at the page 8 also. Explanatory statement as required under sub-rule (1) of the Rule 80 of the Rules of Procedure and Conduct Business in the Legislative Assembly, we have given it also but substantive clause, as such that has not been repeated. To that extent I failed and I also plead before the Hon'ble Members let there not be a shelter under the technicalities as such.

SRI M. VEERAPPA MOILY : Explanatory statement is not a memorandum.

SRI M. P. PRAKASH : That is right. That could also be advanced.

SRI M. VEERAPPA MOILY : You please see Section 80. (1) Whenever a bill seeking to replace an Ordinance with or without modification is introduced in the House, there shall be placed before the House along with the bill, a statement explaining the circumstances which had necessitated immediate legislation by Ordinance.

(2) Whenever an Ordinance which embodies wholly or partly or with modification, the provision of a Bill pending before the House is promul-

gated, a statement explaining the circumstances which necessitated immediate legislation by Ordinance shall be laid on the Table at the commencement of the session following the promulgation of the Ordinance.

SRI M. P. PRAKASH : Sir, I may also be permitted to read rule 81. It reads : Motion for leave to introduce ; Introduction.

(1) On the motion for leave to introduce a Bill, the mover may make a brief explanatory statement. If the motion is opposed, the Speaker may permit a brief explanatory statement from the member who opposes and a brief reply from the mover, and shall then, without further debate, put the question thereon.

Provided that where a motion is opposed on the ground that the Bill initiates legislation outside the legislative competence of the House, the Speaker may permit a full discussion thereon.

So, here is an explanatory note has been given and on the contrary the Hon'ble Speaker has given the permission.

SRI M. VEERAPPA MOILY : Transitory provision you can read it as a memorandum ; but does not contain there ..

SRI M. P. PRAKASH : What I submitted is it is only a transitory provision. Transitory provision need not go with the Memorandum....

MR. SPEAKER : I was particular about two aspects. The competence of this August House to consider, passing of the piece of amendment which has come before this House. I am convinced the House is competent. As pointed out by Hon. Member Sri kagodu Thimmappa, there is a lapse on the part of the Government. However, since the Minister is in the process of explaining the status of the bill to seek the approval, I am permitting him to make that statement. We will advice them to see that such mistake is not allowed in future.

ಶ್ರೀಮತಿ ಪ್ರಮೀಳಾ ನೇಸರ್ಗಿ : ಪ್ರಾವಿಷನ್ ಆದರೆ ಅದು ಬರುತ್ತದೆ. ಪ್ರೊಸೀಜರಲ್ ಲಾ ಇದ್ದಾಗ. even in the courts, it is based on the principle called as excursion jury ; ಪ್ರೊಸೀಜರಲ್ ಡಿಫೆಕ್ಟು ಇದ್ದಾಗ it can always be cured with the aid of a procedure. It is only a procedural defect. The memorandum ought to have been attached. It is only a procedural defect.

MR. SPEAKER : Memorandum has been attached which only refers to the transitory part of the ordinance and not to the additional subjects that have been brought into. That has been rightly raised by Hon.. Member Sri. Kagodu Thimmappa and the Chair has agreed to the point raised.

ಶ್ರೀ ಜೆ. ಸಿ. ಮಾಧು ಸ್ವಾಮಿ : ಇಂಟ್ರಡ್ಯೂಸ್ ಆಗುವುದಕ್ಕೂ ಮೊದಲೇ ಮಾಡಬೇಕಾಗಿತ್ತು.

MR. SPEAKER : He is in his early 70s. You cannot expected to raise earlier than that. I don't expect better results.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, "ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕ, 1999 ಅನ್ನು ಪರ್ಯಾಲೋಚನೆಗೆ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ"

<u>*ಪ್ರಸ್ತಾಪ ಮಂಡಿಸಲ್ಪಟ್ಟಿತು*</u>

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ, ಹಿಂದೆ ನಾವು ಕರ್ನಾಟಕ ಪಂಚಾಯತ್ ರಾಜ್ 1993 ರ ಕಾಯ್ದೆಯಲ್ಲಿ ಇರತಕ್ಕಂಥ 5600 ಗ್ರಾಮ ಪಂಚಾಯಿತಿಗಳ ಹಣಕಾಸಿನ ಮತ್ತು ಸಂಪನ್ಮೂಲಗಳ.....

(ಗೊಂದಲ)

SRI M. P. PRAKSAH : Sir, with your kind permission, though you have come to our rescue, rescue of the Government also and I also thank the Hon.. Members for having consented for the debate. However, just to re-call the point, I may kindly be permitted to bring to your notice Statement in connection with ordinance. 80(1) Whenever a Bill seeking to replace an ordinance with or without modification is introduced in the House, there shall be placed before the House along with the bill, a statement explain-ing the circumstances which had necessitated immediate legislation by Ordinance not by a memorandum. That is precisely what we have done. Certain infirmities always may be there.....

MR. SPEAKER : Technicalities make us function in a perfect manner. When we fail to comply with these technicalities, we learn from past prac-tices and we improve our functioning in course of time. You can go on please ...

ಶ್ರೀ ಎಂ. ಪಿ. ಪ್ರಕಾಶ್ : ತಮಗೆ ಗೊತ್ತಿರುವಂತೆ ಕರ್ನಾಟಕ ಪಂಚಾಯಿತಿ ಕಾಯ್ದೆ 1993ರ ಅಧಿನಿಯಮದ ಕೆಳಗೆ, ಚಿಕ್ಕ ಚಿಕ್ಕ ಪಂಚಾಯಿತಿಗಳಿಗಾಗಿ ಸುಮಾರು 5600 ಗ್ರಾಮಪಂಚಾಯಿತಿಗಳು ಜನಸಂಖ್ಯೆಗೆ ಅನುಗುಣವಾದ ರೀತಿಯಲ್ಲಿ ಬಹಳ ದೊಡ್ಡ ಪ್ರಮಾಣದಲ್ಲಿ ಇರಲಿಲ್ಲ. ಅದರ ಸಂಪನ್ಮೂಲಗಳು ಬಹಳ ಕಡಿಮೆ ಇದ್ದಿದ್ದರಿಂದ ಅದರಲ್ಲಿ ನೂರಕ್ಕೆ ಮೂವತ್ತಕ್ಕಿಂತಲೂ ಹೆಚ್ಚು ಗ್ರಾಮಪಂಚಾಯಿತಿಗಳಿಗೆ ವಾರ್ಷಿಕ ಮೂವತ್ತು ಸಾವಿರಕ್ಕಿಂತ ಹೆಚ್ಚು ಹಣಕಾಸಿನ ಸಂಪನ್ಮೂಲವನ್ನು ಕ್ರೋಡೀಕರಿಸಿ. ಆದ್ದರಿಂದ ಹಿಂದೆ ಇದ್ದ ರೀತಿಯಲ್ಲಿ ದೊಡ್ಡ ಪಂಚಾಯಿತಿಗಳನ್ನು ಮಂಡಲ ಪಂಚಾಯಿತಿಗಳ ವ್ಯಾಪ್ತಿಯಷ್ಟು ಇದ್ದರೆ ಹತ್ತು ಸಾವಿರ ಜನಸಂಖ್ಯೆಗೆ ಒಂದರಂತೆ ಇರತಕ್ಕದ್ದನ್ನು ಈಗ ಗರಿಷ್ಟ ಹದಿನಾರು ಸಾವಿರದವರೆಗೆ ತೆಗೆದುಕೊಂಡು ಹೋಗಿದ್ದೇವೆ. 1987ರಲ್ಲಿ ಮಂಡಲ

ಪಂಚಾಯಿತಿಗಳನ್ನು ತಂದಂಥ ಸಂದರ್ಭದಲ್ಲಿ 1971ರ ಜನಗಣತಿಯ ಆಧಾರದ ಮೇಲೆ ಆ ಜನಸಂಖ್ಯೆಯನ್ನು ನಿರ್ಣಯ ಮಾಡಿದ್ದೆವು. ಅನಂತರ 1971-1981, 1991ರಲ್ಲಿ ಜನಗಣತಿ ಆಗಿರುವುದರಿಂದ ಆ ಜನಗಣತಿಗೆ ಅನುಗುಣವಾದ ಅನುಪಾತದಲ್ಲಿ ಹೆಚ್ಚು ಸಂಖ್ಯೆ ಆಗಬೇಕು ಎಂಬ ಕಾರಣಕ್ಕಾಗಿ ಹತ್ತು ಸಾವಿರದ ಬದಲು ಗರಿಷ್ಟ ಹದಿನಾರು ಸಾವಿರ ಇರತಕ್ಕ ಒಂದು ಮಿತಿಗೆ ಒಂದು ಪಂಚಾಯಿತಿಯನ್ನು ಮಾಡಬೇಕು. ಹಾಗೆಯೇ 400 ಜನರಿಗೆ ಒಬ್ಬರು ಸದಸ್ಯರು ಇರಬೇಕಾಗಿರತಕ್ಕದ್ದನ್ನು ಸಾವಿರ ಜನರಿಗೆ ಒಬ್ಬರು ಸದಸ್ಯರು ಇರಬೇಕು ಎಂಬುದನ್ನು ಮಾಡಲು ಒಂದು ಕಾಯ್ದೆಯನ್ನು ನಾವು ತಂದಿದ್ದೇವೆ.

5. 50 ಪಿ. ಎಂ.

ಈ ವಿಷಯ ಶ್ರೇಷ್ಠ ನ್ಯಾಯಾಲಯದಲ್ಲಿ ಚರ್ಚೆಗೆ ಬಂತು. ಶ್ರೇಷ್ಠ ನ್ಯಾಯಾಲಯ ಅದು ಅಸಿಂಧು ಎನ್ನುವಂತಹ ಮಾತನ್ನೂ ಸಹ ಹೇಳಿಲ್ಲ. ಅವರು ಈ ಸಂದರ್ಭದಲ್ಲಿ ಈ ವಿಚಾರದಲ್ಲಿ ಕೊಟ್ಟಿರತಕ್ಕಂಥ ನಿರ್ಣಯ ಚುನಾವಣಾ ಆಯುಕ್ತರು, ಇಷ್ಟು ದಿವಸಗಳಲ್ಲಿಯೇ ಚುನಾವಣೆ ಮಾಡಬೇಕು ಎಂದು ಆರು ವಾರಗಳ ಗಡುವನ್ನು ಅವರಿಗೆ ಕೊಟ್ಟು ಮಾಡಿದಾಗ ನಾವು ಇದರ ಬಗ್ಗೆ ಸುಪ್ರಿಂ ಕೋರ್ಟಿಗೆ ಮೇಲ್ಮನವಿಯನ್ನು ಮಾಡಿದಾಗ ಸುಪ್ರೀಂ ಕೋರ್ಟ್ ಈ ವಿಚಾರದಲ್ಲಿ ಅವರು ಒಂದು ತಡೆಯಾಜ್ಞೆಯನ್ನು ಕೊಟ್ಟಿದ್ದಾರೆ. ಮಾನ್ಯ ಅಧ್ಯಕ್ಷರೇ, ಅದು ಮಾನ್ಯ ವಿರೋಧಪಕ್ಷದ ನಾಯಕರಿಗೂ ಕೂಡ ಗೊತ್ತಿರತಕ್ಕಂಥಾದ್ದು ನಮಗೆ ಅಲ್ಲಿಂದ ಬಂದಿರತಕ್ಕಂಥ ನಮ್ಮ ಕರ್ನಾಟಕ ಭವನದಿಂದ ನಮ್ಮ ಕಾನೂನು ಕಾರ್ಯದರ್ಶಿಗಳಿಗೆ ಬಂದಿರತಕ್ಕಂಥ ಪತ್ರ. ಅದು ಈ ರೀತಿ ಇದೆ.

'This is to inform you that the above Special Leave Petitions were listed for hearing before the Hon'ble Mr. Justice Barucha and Justice Lahaooji on 31-3-1999 for admission. The learned Advocate General for State of Karnataka Sri S. Vijayashankar appeared on behalf of the State and argued the matter. After hearing, the court was pleased to grant Special Leave to be Appeal and ordered the stay of impugned judgement. The court also issued notices to Respondents on interim relief. Copy of the order has been applied and will be sent immediately to the Government on receipt. This may be brought to the notice of the State Election Commission.'

This is the letter we have received on 31-3-1999. As soon as the stay order was granted by the Supreme Court, immediately the legal cell of the Karnataka Bhaven immediately informed our Secretary, Law Department. So, there is a change in the whole perception your Honour Sir..

ನಮ್ಮಲ್ಲಿರತಕ್ಕಂಥ ಅಂತರ್ಗತವಾದ ಅಧಿಕಾರವನ್ನು ಚಲಾವಣೆ ಮಾಡಬೇಕು ಎನ್ನತಕ್ಕಂಥ ವಿಷಯವನ್ನು ನಮ್ಮ ಶ್ರೇಷ್ಠ ನ್ಯಾಯಾಲಯವೇ ಆಗಲಿ, ಅಥವಾ ಭಾರತ ಸರ್ಕಾರದ ಸರ್ವ ಶ್ರೇಷ್ಟ ನ್ಯಾಯಾಲಯವೇ ಆಗಲಿ, ಇದನ್ನು ಪ್ರಶ್ನೆ ಮಾಡಿಲ್ಲ. ಈಗ ಇರತಕ್ಕಂಥ ಕಾನೂನನ್ನು ತಿದ್ದುಪಡಿ

ಮಾಡಬೇಕಾಗಿರಕ್ಕಂಥಾದ್ದು ನಮ್ಮ ಹಕ್ಕು. ಅದಕ್ಕೆ ಸದನ ಒಪ್ಪಿಗೆಯನ್ನು ಕೂಡ ಕೊಟ್ಟಿದೆ. ಆ ದಿವಸ ನಾವು ಆರ್ಡಿನೆನ್ಸ್ ಮಾಡಬೇಕಾದಂತಹ ಅನಿವಾರ್ಯತೆ ಏನಿತ್ತು ಅಂದರೆ ಬಹಳ ಜರೂರು ಇದ್ದಂತಹ ಕಾರಣ ಇದ್ದುದ್ದರಿಂದ ಮತ್ತು ಕೌನ್ಸಿಲ್ ಕೂಡ ಅಧಿವೇಶನ ಇಲ್ಲದೇ ಇದ್ದಂತಹ ಸಂದರ್ಭ ಆಗಿದ್ದರಿಂದ ನಾವು ಅಧ್ಯಾದ್ಯಾಪನವನ್ನು ತಂದೆವು. ಅಧ್ಯಾಧ್ಯಾಪನವನ್ನು ನಮ್ಮ ರಾಜ್ಯಾಂಗದ ವಿಧಿ ವಿಧಾನಗಳ ಪ್ರಕಾರ ಈ ಕೂಡಲೇ ಅದನ್ನು ತಂದು ಮತ್ತು ಅದನ್ನು ಕಾನೂನು ಮಾಡಿ ಶಾಸನ ಸಭೆಯ ಒಪ್ಪಿಗೆಯನ್ನು ಪಡೆಯಬೇಕು ಎನ್ನುವ ಒಂದು ಕಾರಣಕ್ಕಾಗಿ ಈಗ ನಾವು ಇದನ್ನು ತಂದಿದ್ದೇವೆ. 4ನೇ ಅಧಿನಿಯಮದ ಪ್ರಕಾರ ಆಗಿರತಕ್ಕಂಥಾದ್ದು, ಬದಲಾವಣೆಗಳನ್ನು ಮೂಲಭೂತವಾಗಿರತಕ್ಕಂಥ ಸಣ್ಣ ಸಣ್ಣ ಗ್ರಾಮ ಪಂಚಾಯತಿಗಳನ್ನು ದೊಡ್ಡ ದೊಡ್ಡ ಗ್ರಾಮಪಂಚಾಯತಿಗಳನ್ನಾಗಿ ಮಾಡಿ ಆರ್ಥಿಕ ದೃಷ್ಟಿಯಿಂದ ಸಬಲಗೊಳಿಸತಕ್ಕಂಥಾದ್ದು ಮತ್ತು ಸರ್ವತೋಮುಖವಾಗಿರತಕ್ಕಂಥ ಗ್ರಾಮೀಣ ಅಭಿವೃದ್ಧಿಯ ಕೆಲಸಕಾರ್ಯಗಳನ್ನು ಅವು ಶಕ್ತಿಯುತವಾಗಿ ಕೈಗೊಳ್ಳಬೇಕು ಎನ್ನುವಂತಹ ಒಂದು ಸದುದ್ದೇಶದಿಂದ ಮಾಡಿರತಕ್ಕಂಥಾ ಕಾನೂನೇ ವಿನಾಃ ಹಿಂದೆ ಮಾಡಿರತಕ್ಕಂಥಾ ಕಾನೂನನ್ನು ವಿಕೃತಗೊಳಿಸಬೇಕು ಎನ್ನುವುದೆ ಆಗಲಿ ಅಥವಾ ಅವರು ಹಿಂದೆ ಅವರು ಕಾನೂನು ಮಾಡಿದ್ದರೆ ಆದ್ದರಿಂದ ನಾವು ಬದಲಾಯಿಸಬೇಕು ಎನ್ನುವಂತಹ ಒಂದು ತರಹ ಅದನ್ನು ವೈಕೇರಿಯಸ್ ಪ್ಲೆಷರ್ ಎಂದು ಕರೆಯುತ್ತಾರೆ. ಆ ತರಹದ ಯಾವುದೇ ವಿಧವಾದ ಆತ್ಮ ರತಿಯ ಸುಖವನ್ನು ಅನುಭವಿಸಬೇಕು ಎನ್ನುವಂತಹ ಉದ್ದೇಶ ಏನೂ ಇದರಲ್ಲಿ ಇಲ್ಲ. ಇಲ್ಲಿ ಇರತಕ್ಕಂಥಾದ್ದು ನೇರವಾಗಿ ಈ ಸರ್ಕಾರ ಜನಗಳಿಗೆ ಪಡೆದಿರತಕ್ಕಂಥಾ ಅಧಿಕಾರದ ಮೂಲಕವಾಗಿ ತಾನು ಪರಿಕಲ್ಪಿಸಿದಂತೆ ಮತ್ತು ಭಾವಿಸಿದಂತೆ ಇಲ್ಲಿ ಬರುವಂತಹ ತಿದ್ದುಪಡಿಗಳನ್ನು ಮಾಡಬೇಕು ಎನ್ನುವಂತಹ ಕಾರಣಕ್ಕಾಗಿಯೇ ಈ ಒಂದು ನಿಯಮವನ್ನು ನಾವು ತಂದಿದ್ದೇವೆ. ಮಾನ್ಯ ಅಧ್ಯಕ್ಷರೇ, ಎರಡನೆಯದು ತಮಗೆಲ್ಲರಿಗೂ ವಿದಿತವಾದಂತಹದ್ದೆ. ಪ್ರಾಯಶಃ ವಿರೋಧಪಕ್ಷದ ಎಲ್ಲಾ ನಾಯಕರಿಗೂ ಗೊತ್ತಿರತಕ್ಕಂಥಾದ್ದೇ. ನಮ್ಮ ಅಧಿನಿಯಮ 4ರ ಉಪಬಂಧದ ಕೆಳಗೆ ನಾವು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗೆ ಮೀಸಲಾತಿಯನ್ನು ಕೊಟ್ಟಿದ್ದನ್ನು ಅದು ಪುನರಾವರ್ತನೆಗೊಳ್ಳಬೇಕಾದುದು ಇದೆ. ಪ್ರತಿ ವರ್ಷ 5 ವರ್ಷದ ಅವಧಿಯ ಆಚೆ. ಪ್ರಾಯಶಃ ಅದನ್ನು ಪ್ರಾರಂಭ ಮಾಡಿದಂತಹ ಸಂದರ್ಭದಲ್ಲಿ ಅನುಷ್ಠಾನಗೊಳಿಸವಂತಹ ಪ್ರಶ್ನೆ ಬರುತ್ತಿರಲಿಲ್ಲ. ಪ್ರಾರಂಭದಲ್ಲಿ ಮತ್ತು ಅದರ ನಡುವೆ ಚುನಾವಣೆ ನಡೆದಂತಹ ಸಂದರ್ಭಲ್ಲಿ ಆಯಾಯಾ ಜನಸಂಖ್ಯೆ ಯಾವ ಯಾವ ಪ್ರದೇಶದಲ್ಲಿತ್ತು ಆಯಾಯಾ ಜನಸಂಖ್ಯೆ ಹೆಚ್ಚು ಪ್ರಾತಿನಿಧ್ಯವನ್ನು ಪಡೆದಿರತಕ್ಕಂಥ ಪ್ರದೇಶವಾಗಿತ್ತು. ಅದೇ ಮೀಸಲಾತಿಯ ಕ್ಷೇತ್ರಗಳು ಆಗಿದ್ದವು. ಆದರೆ ಅದು ಪರಿವರ್ತನೆಗೊಂಡು ಮುಂದೆ 5 ವರ್ಷಗಳ ನಂತರ ಬೇರೆ ಕಡೆ ಹೋಗಬೇಕೆಂದು ಬಂದಾಗ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಮತ್ತು ಮಹಿಳೆಯರು ಹೆಚ್ಚು ಇಲ್ಲದಂತಹ ಪ್ರದೇಶಗಳಲ್ಲಿ ಇದು ಪರಾವರ್ತನೆ ಗೊಳ್ಳಬೇಕಾದಂತಾದ್ದು 'There shall be ' ಎನ್ನುವಂತಹ ಶಬ್ದ ಉಪಯೋಗಿಸಿದ್ದರಿಂದ ರಾಜ್ಯಾಂಗದಲ್ಲಿರತಕ್ಕಂಥವಿಧಿ ವಿಧಾನದಲ್ಲಿ ' Shall' ಎನ್ನುವಂತಹ ಶಬ್ಧ ಇರಲಿಲ್ಲ 'may' ಎನ್ನುವಂತಾದ್ದು ಇದೆ. ಆದರೆ ನಮ್ಮ ಕರ್ನಾಟಕ ಪಂಚಾಯತ್ ರಾಜ್ ಕಾನೂನಿನಲ್ಲಿ ' shall' ಎಂದು ಹೇಳಿ ಅದು ನಮಗೆ ಅಗತ್ಯವಾಗಿ ಮಾಡಲೇಬೇಕಾಗಿರುವಂತಹ

ಕರ್ತವ್ಯ ಆಗಿದ್ದರಿಂದ ಜಿಲ್ಲಾಧಿಕಾರಿಗಳು ಚುನಾವಣಾ ಆಯುಕ್ತರ ನೇರನಿರ್ದೇಶನದ ಕೆಳಗೆ ಅದನ್ನು ಮಾಡುವಂತಹ ಸಂದರ್ಭಗಳಲ್ಲಿ ಆ ಪರಾವರ್ತನೆಗೊಳ್ಳುವಂತಹ ಕೆಲಸವನ್ನು ಮಾಡಿದ್ದೇವೆ. ಪರಾವರ್ತನೆಗೊಳಿಸುವಂತಹ ರೀತಿಯಲ್ಲಿ ಯಾವಾಗ ಅಧಿನಿಯಮ ಹೊರಗಡೆಗೆ ಬಿದ್ದಾಗ ಯಾರ ಪರವಾಗಿ ಆ ಕ್ಷೇತ್ರಗಳನ್ನು ಮೀಸಲಾಗಿಟ್ಟಿದ್ದೇವೆ. ಆ ಜನ ಅಲ್ಲಿ ಇಲ್ಲವೇ ಇಲ್ಲ ಎನ್ನುವಂಥಾದ್ದು ಬಯಲಿಗೆ ಬಂತು. ಅದು ಅಷ್ಟೇ ಸತ್ಯ ಸಂಗತಿಯಾದಂತಹ ವಿಷಯವೇ. ಇದು ಒಂದು ದೊಡ್ಡದಾದಂತಹ ತೊಂದರೆಯಾಗಿರುವುದರಿಂದ ಆ ತೊಂದರೆಯನ್ನು ಸರಿಪಡಿಸಬೇಕೆನ್ನುವ ಕಾರಣಕ್ಕಾಗಿಯೇ ನಾವು ಈ ಎರಡೂ ತಿದ್ದುಪಡಿಗಳನ್ನು ಅಧ್ಯಾಧ್ಯಾಪನದ ಮೂಲಕವಾಗಿ ತಂದೆವು. ಆ ಅಧ್ಯಾಧ್ಯಾಪನದಲ್ಲಿ ತಂದಿರತಕ್ಕಂಥಾದ್ದನ್ನು ಕೆಲವರು ಇದನ್ನು ಸಾರ್ವತ್ರಿಕ ಹಿತದೃಷ್ಟಿಯಿಂದ ಆಗಿರುವಂತಹ ಒಂದು ತಕರಾರು ಅರ್ಜಿಯನ್ನು ಮತ್ತು ರಿಟ್ ಪಿಟೀಷನ್ ಅನ್ನು ಹಾಕಿರತಕ್ಕಂಥಾದ್ದು ಮತ್ತು ಅದರ ತೀರ್ಮಾನ ಮತ್ತು ಸುಪ್ರೀಂ ಕೋರ್ಟಿನ ತೀರ್ಮಾನ ಆಗಿರತಕ್ಕಂಥ ಸಂದರ್ಭ ಇರುವುದರಿಂದ ಸನ್ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮೂಲಕವಾಗಿ ಮಾನ್ಯ ಎಲ್ಲಾ ಸದಸ್ಯರನ್ನು ಕೇಳತಕ್ಕಂಥಾದ್ದು ಇಷ್ಟೇ. ಇದು ಬಂದಿರುವಂತಹ ಕಾಯ್ದೆಯಲ್ಲಿ ಯಾವುದೇ ತರಹವಾದ ದುರುದ್ದೇಶ. ಚುನಾವಣೆಯನ್ನು ಮುಂದಕ್ಕೆ ಹಾಕಬೇಕೆನ್ನುವ ದುರುದ್ದೇಶವನ್ನು ತಾವು ಅದರಲ್ಲಿ ಕಂಡು ಹಿಡಿದಿದ್ದೀರಿ. ಆದರೆ ಆ ರೀತಿಯಾದಂತಹ ಯಾವ ಉದ್ದೇಶವೂ ಇಲ್ಲ. ಇದು ಹೆಚ್ಚು ಸತ್ವಶಾಲಿಯಾಗಿ ಹೆಚ್ಚು ಅರ್ಥಪೂರ್ಣವಾಗಿ ಇದನ್ನು ಜಾರಿಗೊಳಿಸಬೇಕೆನ್ನುವಂತಹ ಕಾರಣಕ್ಕಾಗಿ ಅಧಿಕಾರದ ವಿಕೇಂದ್ರೀಕರಣದ ತಾರ್ಕಿಕ ಹರಿತಕ್ಕೆ ತೆಗೆದುಕೊಂಡು ಹೋಗತಕ್ಕಂಥ ಒಂದು ಕಾನೂನು ಇದು ಆಗಿರುವುದರಿಂದ ದಯವಿಟ್ಟು ಸದನ ಈ ಎರಡೂ ತಿದ್ದುಪಡಿಗಳಿಗೆ ಅಂಗೀಕಾರ ಕೊಟ್ಟು ತಮ್ಮ ಮೂಲಕವಾಗಿ ನಾನು ಅರಿಕೆ ಮಾಡಿಕೊಳ್ಳುತ್ತೇನೆ. ತಾವು ಮತ್ತೊಂದು ಒಳ್ಳೆಯ ವಿಚಾರವನ್ನು ಹೇಳಿದಿರಿ. ನಮ್ಮಲ್ಲಿರತಕ್ಕಂಥ ನಿಯಮ 321ರ ವಿಧಿಯ ಕೆಳಗೆ ಯಾವುದಾದರೂ ಇಂತಹ ಊಹಿಸಲಿಕ್ಕೆ ಸಾಧ್ಯವಾಗಲಾರದಂತಹ ತೊಂದರೆಗಳೂ ಕೂಡ ಇರುತ್ತವೆ. ಕಾನೂನು ತಯಾರು ಮಾಡತಕ್ಕಂಥವರು ಮುಂದೆ ಯಾವುದೋ ಒಂದು ದಿವಸ ಅಡ್ಡಿ ಆತಂಕಗಳು ಸೃಷ್ಟಿಯಾಗಬಹುದು ಎಂದು ಹೇಳಿ ಯಾರೂ ಬೃಹಸ್ಪತಿಗಳಾಗಲಿ ಅಥವಾ ಭವಿಷ್ಯಕಾರರಾಗಿ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ಮನುಷ್ಯ ತಯಾರು ಮಾಡಿರತಕ್ಕಂಥ ಎಲ್ಲಾ ಕಾನೂನುಗಳೂ ಕೂಡ ತನ್ನದೇ ಆದಂತಹ ಇತಿಮಿತಿಗಳಲ್ಲಿ ತೊಂದರೆಗಳು ಇರುತ್ತವೆ. ರಾಜ್ಯಾಂಗದಲ್ಲಿ ಪ್ರಾರಂಭದಲ್ಲಿಯೇ ತಾವು ನೋಡಿರಬಹುದು ಅದರಲ್ಲಿ ಈ ರೀತಿ ಹೇಳುತ್ತಾರೆ.

Constitution is read for immodernity if the man made act is to be believed. However, at an hour of folly, or at an hour of negligence, it may perish if the keepers of the Constitution, the people. So in an hour of folly or in an hour of negligence or any other things it may perish also. ಎಂತಹ ರಾಜ್ಯಾಂಗವೇ ಒಂದೊಂದು ಸಲ ಪೆರಿಷ್ ಆಗಬಹುದು. ಏಕೆಂದರೆ ಅಪ್ರಬುದ್ಧವಾಗಿರತಕ್ಕಂಥ ಸಮಾಜ ಅಲ್ಲಿ ಇರತಕ್ಕಂಥ ವಿಧ ವಿಧಾನಗಳನ್ನೂ ಕೂಡ ಅದು ಅರ್ಥೈಸುವುದಕ್ಕೆ ಸಾಧ್ಯವಾಗಬಹುದು. ಎನ್ನುವ ಕಾರಣ ಇರುವಾಗ ನಮ್ಮ ಕಾನೂನಿನಲ್ಲಿ ಎಲ್ಲಾ ಕಡೆಗೂ ಕೂಡ ಎಲ್ಲಾ ರಿಮೂವಲ್ ಆಫ್

ಡಿಪಿಕಲ್ಸ್ ಕ್ಲಾಸ್ ಎನ್ನುವಂತಹ ಒಂದು ಕ್ಲಾಸನ್ನು ಇಟ್ಟಿರುತ್ತಾರೆ. ಯಾವುದೇ ಒಂದು ಸಂದರ್ಭ ಬಂದಾಗ ಈ ರೀತಿಯ 321ನೇ ಸೆಕ್ಷನ್ ಅನ್ನು ನಾವು ವಿವೇಚನೆ ಮಾಡಿದಾಗ ಈ ಅಧಿಕಾರದ ವ್ಯಾಪ್ತಿ ಮುಗಿದು ಹೋದಂತಹ ಸಂದರ್ಭದಲ್ಲಿ 5 ವರ್ಷದ ಅವಧಿಯನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲ. 5 ವರ್ಷದ ಅವಧಿಯನ್ನು ಮುಂದುವರಿಸುವುದಕ್ಕೆ ಸಾಧ್ಯವಿಲ್ಲದೇ ಇದ್ದಾಗ ನಮ್ಮ ಮುಂದೆ ಇದ್ದಂತಾದ್ದು ಎರಡು ಆಯ್ಕೆಗಳು. ಒಂದು ಆಡಳಿತಾಧಿಕಾರಿಯನ್ನು ನೇಮಿಸತಕ್ಕಂಥಾದ್ದು ಅಥವಾ ಸಾಧ್ಯವಾದಷ್ಟು ಮಟ್ಟಿಗೆ ಚುನಾಯಿತರಾಗುವಂತಹ ಅದಕ್ಕೆ ಅರ್ಹತೆಯನ್ನು ಪಡೆದಿರುವಂತ ಸದಸ್ಯರನ್ನು ಅದರ ನಿಕಟ ಪೂರ್ವದಲ್ಲಿರುವಂತಹ ಯಾವ ಚುನಾಯಿತಸದಸ್ಯರು ಇದ್ದಾರೆ, ಅವರನ್ನೇ ಅಧ್ಯಕ್ಷರನ್ನಾಗಿ ಉಪಾಧ್ಯಕ್ಷರನ್ನಾಗಿ ಸದಸ್ಯರನ್ನಾಗಿ ನೇಮಕಾತಿ ಮಾಡತಕ್ಕಂಥಾದ್ದು. ಇವೆರಡೂ ನಮ್ಮ ಮುಂದೆ ಆಯ್ಕೆ ಇದ್ದಾಗ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಅನುಗುಣವಾಗಿ ಈಗಾಗಲೇ ಚುನಾಯಿತರಾಗಿಂ ತಕ್ಕಂಥ ಸದಸ್ಯರು ತಾವೇ ಹೇಳಿದ್ದೀರಿ ಇದು ಪಕ್ಷಾತೀತವಾಗಿ ನಡೆದಿರತಕ್ಕಂಥ ಚುನಾವಣೆ. ಪಕ್ಷಾತೀತವಾಗಿ ನಡೆದಿರತಕ್ಕಂಥ ಚುನಾವಣೆಯಲ್ಲಿ ಎಲ್ಲರೂ ಎಲ್ಲರ ಪರವಾಗಿ ಇರಬಹುದು. ಅಥವಾ ಅವರು ಯಾವ ಯಾವುದೋ ಪಕ್ಷಕ್ಕೆ ನಿಷ್ಟರಾಗಿರತಕ್ಕಂಥಾದ್ದು ಇರಬಹುದು. ಅದು ಯಾವುದನ್ನು ಗಣನೆಗೆ ತೆಗೆದುಕೊಳ್ಳದೇ ಇರತಕ್ಕಂಥ ವಾಸ್ತವಾಂಶದ ನಡುವೆ ನಾವು ಹೆಚ್ಚು ಜನಪರವಾಗಿರತಕ್ಕಂಥ ಕಾರ್ಯಕ್ರಮ ಇದು ಆಗಬಹುದು. ತಾವು ಇದನ್ನು ಒಪ್ಪುತ್ತೀರಿ ಎಂದು ನಾನು ಭಾವಿಸಿಕೊಂಡಿದ್ದೇನೆ. ನಮಗೆ ಆ ಅಧಿಕಾರ ಇತ್ತು. ಚುನಾವಣೆಗೆ ಸಂಬಂಧಪಟ್ಟಿರತಕ್ಕಂಥ ಯಾವುದೇ ಒಂದು ಗ್ರಾಮ ಪಂಚಾಯತಿಗೆ ನಮಗೆ ತಿಳಿದಂತಹವರನ್ನು ನಾಮಕರಣ ಮಾಡುವಂತಹ ಒಂದು ಅಧಿಕಾರ ಇತ್ತು. ಆದರೆ ನಾಮಕರಣ ಮಾಡತಕ್ಕಂಥ ಅಧಿಕಾರವನ್ನು ನಾವೇ ಸ್ವಯಂಘೋಷಿತವಾಗಿ ಬಿಟ್ಟು ಕೊಟ್ಟಿದ್ದೇವೆ. ಅದರಿಂದ ನಮಗೆ ಅಪವಾದ ಬರಬಹುದಾಗಿತ್ತು. ಒಂದು ಅನರ್ಹರಾದವರನ್ನು ತಂದಿರಿ ಎನ್ನುವಂತಹ ಅಪವಾದ. ಎರಡನೆಯದು ಆಡಳಿತ ಪಕ್ಷದವರನ್ನೇ ನೀವು ಅದರಲ್ಲಿ ತಂದು ತುಂಬಿಸಿದ್ದೀರಿ ಎನ್ನುವಂತಹ ಮಾತು ಬರಬಹುದಾಗಿತ್ತು. ಯಾರ್ಯಾರು ಈಗಾಗಲೇ ಆಯ್ಕೆಯಾಗಿದ್ದಾರೆ ಅವರನ್ನೇ ನಾವು ಮತ್ತೆ ಪುನರ್ ನೇಮಕ ಮಾಡಿದ್ದೇವೆ. ಕಾನೂನಿನಲ್ಲಿ ಅವರ ಅವಧಿಯನ್ನು ವಿಸ್ತರಿಸುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಪುನರ್ ನೇಮಕಾತಿಯನ್ನು ಮಾಡತಕ್ಕಂಥಾದ್ದನ್ನು ನಾವು 321ನೇ ವಿಧಿಯ ಪ್ರಕಾರ ಅದನ್ನು ಮಾಡಿರುವುದರಿಂದ ಇದು ಹೆಚ್ಚು ಪ್ರಜಾಸತಾತ್ಮಕವಾಗಿ ಆಗಿದೆ. ದಯವಿಟ್ಟು ತಾವು ಇದನ್ನು ಒಪ್ಪಿ. ಇದನ್ನು ಪರ್ಯಾಲೋಚನೆಗೆ ತೆಗೆದುಕೊಂಡಂತಹ ಈ ಸಂದರ್ಭದಲ್ಲಿ ಸದನ ಒಪ್ಪಿಗೆ ಕೊಡಬೇಕೆಂದು ನಾನು ತಮ್ಮ ಮೂಲಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಕಾಗೋಡು.ತಿಮ್ಮಪ್ಪ : ಅವರ ಮಾತಿನಿಂದ ನನಗೆ ಬೇಕಾಗಿರತಕ್ಕಂಥ ಕೆಲವು ವಿವರಣೆಗಳು ಸಿಗಲಿಲ್ಲ. ಅವರು ಕೊಟ್ಟಿರತಕ್ಕಂಥ ಸ್ಟೇಟ್‌ಮೆಂಟ್‌ನಲ್ಲಿ ಹೇಳುತ್ತಾರೆ. ಈ ತಿದ್ದುಪಡಿಗೆ ಮುಖ್ಯವಾಗಿ ಏನು ಹೇಳುತ್ತಾರೆಂದರೆ The present system which is too large for proper supervision over their functions ಅವರು ಇದನ್ನೆಲ್ಲಾ ಎಕ್ಸ್‌ಪ್ಲೈನ್ ಮಾಡಲಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ಆ ಮೇಲೆ ಮಾಡುತ್ತಾರೆ.

ಶ್ರೀ ಎಂ. ವೈ. ಘೋರ್ಪಡೆ (ಸೊಂಡೂರು) : ಸನ್ಮಾನ್ಯ ಅಧ್ಯಕ್ಷರೆ, ಕರ್ನಾಟಕದ ಪಂಚಾಯತ್ ರಾಜ್ ಇತಿಹಾಸದಲ್ಲಿ ಇದೊಂದು ಕರಾಳವಾದಂತಹ ದಿನವನ್ನು ನಾವು ಎದುರಿಸುತ್ತಿದ್ದೇವೆ. ಸುಪ್ರೀಂ ಕೋರ್ಟ್ ಸ್ಟೇ ಕೊಟ್ಟು ತಕ್ಷಣ ನಮಗೆ ಬೇಕಾದ್ದನ್ನು ಮಾಡಲಿಕ್ಕೆ ಸ್ವಾತಂತ್ರ್ಯ ಇದೆ ಎಂದು ಸರ್ಕಾರ ತಿಳಿದುಕೊಳ್ಳುವುದು ಬಹಳ ತಪ್ಪು. ಹೈಕೋರ್ಟ್‌ನವರು ಆರು ವಾರಗಳಲ್ಲಿ ಚುನಾವಣಾ ಪ್ರಕ್ರಿಯೆಯನ್ನು ಮುಗಿಸಬೇಕೆಂದು ಏನು ತೀರ್ಪುಕೊಟ್ಟಿದ್ದರೋ ಅದಕ್ಕೆ ಮಾತ್ರ ಸುಪ್ರೀಂ ಕೋರ್ಟ್ ಸ್ಟೇ ಕೊಟ್ಟಿದೆ. ಸರ್ಕಾರ ಮಾಡುತ್ತಿರುವುದೆಲ್ಲಾ ಸರಿ ಎಂದು ಅವರು ಹೇಳಲಿಲ್ಲ. ಹೇಳುವುದೂ ಇಲ್ಲವೆಂದು ನಾನು ಸಮಪೂರ್ಣವಾಗಿ ನಂಬಿದ್ದೇನೆ. ಸ್ಟೇ . . . . .

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಘೋರ್ಪಡೆಯವರೇ, ಕೋರ್ಟ್ ಏನನ್ನು ಮಾಡಬಹುದು ಏನನ್ನು ಮಾಡುವುದಿಲ್ಲ ಎಂಬ ಬಗ್ಗೆ ಇಲ್ಲಿ ಚರ್ಚೆ ಮಾಡಬೇಡಿ. ತಾವು ತಮ್ಮ ಅಭಿಪ್ರಾಯವನ್ನು ಹೇಳಬಹುದು. ಆದರೆ ಈ ಸದನದ ಮೂಲಕವಾಗಿ you should not prejudice the judgement. ಈ ರೀತಿ ಮಾಡುವುದಿಲ್ಲ ಎಂದು ನನಗೆ ಗೊತ್ತು ಎಂದು ನೀವು ಹೇಳುವುದು ಸರಿಯಲ್ಲ. ದಯವಿಟ್ಟು ಹಾಗೆ ಹೇಳಬೇಡಿ.

ಶ್ರೀ ಎಂ. ವೈ. ಘೋರ್ಪಡೆ : ನಾನು ನನ್ನ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಇದೆ. ಸುಪ್ರೀಂ ಕೋರ್ಟ್‌ನವರು ಹೈಕೋರ್ಟ್‌ನವರು "State Government should Complete the elections in 4 to 6 weeks" ಎಂದು ಹೇಳಿದರು, ಅದಕ್ಕೆ ಮಾತ್ರ ಅವರು ಸ್ಟೇ ಕೊಟ್ಟಿದ್ದಾರೆ. ಆದ್ದರಿಂದ ನಮಗೆ ಏನು ಬೇಕಾದರೂ ಮಾಡಲಿಕ್ಕೆ ಸ್ವಾತಂತ್ರ್ಯ ಇದೆ ಎಂದು ಸರ್ಕಾರ ತಿಳಿದುಕೊಳ್ಳಲಿಕ್ಕೆ ಸಾಧ್ಯವಿಲ್ಲ.

SRI M. P. PRAKAH : The very fact that the Special Leave Petition has been admitted, it shows there is a prima facie case to be adjudicated. Otherwise, they would have thrown away the Special Leave Petition in limine. They would have done it. On the contrary, when they have admitted the Leave Petition, that shows there is some validity in the argument of the Government.

SHRI M. Y. GHORPADE : That shows that the Supreme Court is prepared to hear your argument and to enable it to hear your argument, it has stayed the stipulation of 4 to 6 weeks. This is the position. ಈಗ Statement of Objects ಬೆಳಿಗ್ಗೆ ಚರ್ಚೆಯಾಯಿತು. ನಾನು ಸುಮ್ಮನೆ ಇದ್ದೆ. Memorandum ಎಂದು ಎಲ್ಲೂ ಬರೆದಿಲ್ಲ. ಇದೊಂದು ಟೆಕ್ನಿಕಲ್ ಲ್ಯಾಪ್ಸ್ ಎಂದು ತಾವೇ ಒಪ್ಪಿಕೊಂಡಿದ್ದೀರಿ. ಆದರೆ ಇದರ ಉದ್ದೇಶವೇನು ಎಂಬುದು Statement of objectsನಲ್ಲಿ ಸಂಪೂರ್ಣವಾಗಿ ಇರಬೇಕಾಗುತ್ತದೆ. ನಾನು ಇವತ್ತು ರಾಜಕೀಯವಾಗಿ ಟೀಕೆ ಮಾಡುವ ಉದ್ದೇಶದಿಂದ ಇಲ್ಲಿ ಭಾಷಣ ಮಾಡುತ್ತಿಲ್ಲ. ತಾವು ಇದನ್ನು ಅರ್ಥ ಮಾಡಿಕೊಳ್ಳಬೇಕು. ಈಗ Statement of Objects & Reasonsನಲ್ಲಿ ಮೊದಲನೇ ಪ್ಯಾರಾದಲ್ಲಿ ನೀವು ನಾವು ಇದರ ಗಾತ್ರ ಜಾಸ್ತಿ ಹೆಚ್ಚಿಸಲಿಕ್ಕೆ ಹೊರಟಿದ್ದೇವೆ, ರೀ-

ಸಕ್ಯುರ್ ಮಾಡಲಿಕ್ಕೆ ಹೊರಟಿದ್ದೇವೆ ಎಂದು ಹೇಳಿದ್ದೀರಿ. ಆದರೆ ಪ್ಯಾರಾ 2ರಲ್ಲಿ ಏನು ಹೇಳಿದ್ದೀರಿ ಎಂಬುದನ್ನು ನೋಡಿ. ನನಗಂತೂ ಇದು ಅರ್ಥವಾಗುವುದಿಲ್ಲ. ಇದರಲ್ಲಿ ಗಂಭೀರವಾದಂತಹ ತಪ್ಪುಗಳಿವೆ ಎಂಬುದು ನನ್ನ ಭಾವನೆಯಾಗಿದೆ. ಏಕೆಂದರೆ ಪ್ಯಾರಾ 2ರಲ್ಲಿ "According to clause (1) of Article 243-D of the constitution, the seats reserved in a panchayat may be allotted by rotation to different constituencies. The provision to sub-section (4) of section (5) of the Karnataka Panchayat Raj Act 1993 requires that the seats reserved shall be allotted by rotation to different constituencies. Thus the proviso is not in conformity with the aforesaid provision of the Constitution." This is a completely wrong statement because both the statements are identical. What is stated in Article 243-D is exactly the same as what is stated in Sub-Section(4) of Section 5. Let the Hon'ble Minister appreciate that there is something wrong here. There is no contradiction. I will once again read for your benefit. Article 243 says : " Seats reserved in a Panchayat may be allotted by rotation to different constituencies." Sub section 4 of Section 5 of our Act also says exactly the same. It requires that the " seats reserved shall be allotted by rotation to different constituencies." Thus the proviso is not in conformity with the aforesaid provision of the Constitution, It is completely a baseless statement. On the face of it, it is baseless. I don't have to argue. That is, our sub-section (4) or section 5 is fully in conformity with Article 243-D of the constitution and admittedly because they have used exactly the same language. Apparently the Minister has not ever carefully read the Statement of Objects and Reasons. Normally he is a very careful person, he reads it. I don't know this lapse has taken place.

SHRI M. P. PRAKASH : There is one word. I will also convince you. I have taken note of your objection.

SHRI M. Y. GHORPADE : In terms of what you have written here in the Statement of Objects and reasons.

SHRI M. P. PRAKASH : I stand by that. The word " shall" has been replaced. The word "will" was there.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಈ ಕಾನ್ಸ್ಟಿಟ್ಯೂಷನ್‌ನಲ್ಲಿ ಎರಡು ವಿಷಯ ಬಹಳ ಸ್ಪಷ್ಟವಾಗಿ ಇದೆ. ಅದೇನೆಂದರೆ ರಿಸರ್ವೇಷನ್ಸ್ ಮಾಡುವಾಗ ಎಸ್‌ಸಿ:ಎಸ್‌ಟಿ ಇದ್ದರೆ ಅವರ ಜನಸಂಖ್ಯೆ ಪ್ರಕಾರ ಈ ಯೂನಿಟ್‌ಗೆ ಸಂಬಂಧಪಟ್ಟ ಹಾಗೆ ಮಾಡಬೇಕು. ಓಬಿಸಿ ಇದ್ದರೆ ಮಾಡಬಹುದು ಎಂದು ಇದೆ. ಓಬಿಸಿಗೆ "may" ಎಂದು ಇದೆ "shall" ಎಂದು ಇಲ್ಲ. "Women one-third shall be" ಎಂದು ಇದೆ. ಇದು ಒಂದು ಭಾಗ. ಇನ್ನೊಂದು ಭಾಗ, ಇದನ್ನು ರೊಟೇಷನ್ ಆಗಲೇಬೇಕೆಂದು ಹೇಳಿ ಕಡ್ಡಾಯವಾಗಿ ಆರ್ಟಿಕಲ್ 243 (ಡಿ) ನಲ್ಲಿ ಇದೆ. If you read Article

243-D, there is no option, Sir. As you know when the word " shall" " may" and all that are used in a particular section, the spirit of it should be taken. It does not mean very often " may" means " shall" If you read the Section as a whole, there is no doubt atleast in my mind although I am a lay person, that it is mandatory to have reservations and to have rotation.

MR. SPEAKER : On many occasions, it is laymen who know law better.

SHRI M. Y. GHORPADE : Sir, because it is common sense.

SHRI M. P. PRAKASH : Laws are framed by laymen only.

MR SPEAKER : Law is ultimately the codified common sense.

SHRI M. P. PRAKASH : What could not be understood by laymen is not law at all.

MR. SPEAKER : That is right.

SHRI M. Y. GHORPADE : So there is no contradiction between Sub-section (4) of Section (5) of the Karnataka Panchayat Raj Act 1993 and Article 243-D of the Constitution. If there is no contradiction, which is obvious, then this is the central ideal on which the whole thing rests. ಮಾನ್ಯ ಮಂತ್ರಿಗಳು ಮುಂದೆ ಹೋಗಿ ಏನು ಹೇಳುತ್ತಾರೆ ಎಂದರೆ, ಈ ರೊಟೇಷನ್ ಮಾಡಿದರೆ ಪ್ರಜಾಪ್ರಭುತ್ವದಲ್ಲಿ ನಾಯಕತ್ವ ಬೆಳೆಸುವುದಕ್ಕೆ ತೊಂದರೆಯಾಗುತ್ತದೆ ಎಂದು ಹೇಳುತ್ತಾರೆ. This is neither here nor there. ನಾಯಕತ್ವನ್ನು ಬೆಳೆಸುವುದರಲ್ಲಿ ರೊಟೇಷನ್ ಸಹಾಯಕವಾಗುತ್ತದೆ ಎಂದು ನಾನು ಹೇಳುತ್ತೇನೆ. ಒಂದೇ ಕ್ಷೇತ್ರದಲ್ಲಿ ಒಂದು ರೀತಿಯ ರಿಸರ್ವೇಷನ್ ಅನ್ನು ನಾವು ಸದಾ ಕಾಲಕ್ಕೂ ಕೂಡ ಮಾಡಿದರೆ ಜನರಿಗೆ ಬೇಜಾರಾಗುತ್ತದೆ. ಪ್ರತಿಯೊಂದು ಕ್ಷೇತ್ರದಲ್ಲೂ ಹೆಣ್ಣುಮಕ್ಕಳು ಇದ್ದಾರೆ, ಓಬಿಸಿಯವರು ಇದ್ದಾರೆ, ಎಸ್‌ಸಿ : ಎಸ್‌ಟಿಯವರು ಇದ್ದಾರೆ. ಹೆಚ್ಚು ಕಡಿಮೆ ಪ್ರಮಾಣದಲ್ಲಿ ಅವರು ಇರಬಹುದು. ಆದಕಾರಣ ರೊಟೇಷನ್‌ನಿಂದ ಯಾವ ಒಂದು ಡೆಮಾಕ್ರೆಟಿಕ್ ತತ್ವಕ್ಕೆ ಕೂಡ ಧಕ್ಕೆ ಬರುವುದಿಲ್ಲ. ರೊಟೇಷನ್‌ನಿಂದ ಈ ಒಂದು ರಿಸರ್ವೇಷನ್ ಕಾನ್‌ಸೆಪ್ಟ್ ಏನಿದೆ, ಮನೋಭಾವನೆ ಏನಿದೆ, ಇದನ್ನು ಎಲ್ಲಾ ಕಡೆಯೂ ಕೂಡ ಬೆಳೆಸಲಿಕ್ಕೆ ಸಾಧ್ಯವಾಗುತ್ತದೆಯೇ ಹೊರತು ಲೀಡರ್‌ಶಿಫ್ ಮತ್ತು ಡೆಮಾಕ್ರಸಿಗೆ ಇದರಿಂದ ಧಕ್ಕೆ ಬರುತ್ತದೆ ಎಂಬ ಮಾತನ್ನು ಒಪ್ಪಲು ಸಾಧ್ಯವಿಲ್ಲ. ಆ ಪ್ರಯತ್ನ ಮಾಡಿ ಕಾನೂನನ್ನು ಹುಡುಕಲಿಕ್ಕೆ ಈ ಸರ್ಕಾರ ಕಷ್ಟಪಟ್ಟಿದೆ ಎಂದು ತೋರಿಸುತ್ತದೆ. ಕಾನೂನಿನ ಬಗ್ಗೆ ಕಾನೂನಿನ ಆಧಾರದ ಮೇಲೆ ಅರ್ಥರಹಿತವಾದ ಭಾಗ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ ಅವರು ಯಾವ ಕನ್‌ಕ್ಲೂಷನ್‌ಗೆ ಬಂದಿದ್ದಾರೆ ನೋಡಿ. "Therefore it was considered necessary to omit the provision relating to rotation of seats reserved in the Grama Panchayat". ನಾನು ಇದು ಯಾವುದು ಒಮಿಟ್ ಮಾಡುವುದಕ್ಕೆ ಹೊರಟಿದ್ದಾರೆ ಅದನ್ನು ತಂದು ತೋರಿಸುತ್ತೇನೆ.

Sub sec (4) of Sec. 5 of 1993 Act. In that the first proviso ಡಿಲೀಟ್ ಮಾಡಬೇಕೆಂದು ಹೇಳಿದ್ದಾರೆ. ಫರ್ಸ್ಟ್ ಪ್ರೊವಿಸೋ ಎಂದರೆ, ಅದು ಈ ರೀತಿ ಇದೆ. ದಯವಿಟ್ಟು ತಾವು ಗಮನ ಕೊಡಬೇಕು.

"Provided that the seats reserved under Sub Sec. (2) & (3) shall be allotted by rotation to different constituencies in the Panchayat Area. This is 100% in keeping with the constitution. ಇದನ್ನು ಡಿಲೀಟ್ ಮಾಡಿ ಬಿಟ್ಟರೆ immeidately it becomes violative of the Constitution. If it is mandatory in the Constitution to have not only reservation and rotation, if you delete from the1993 Act, what enables or makes it necessary to rotate, then, in my view, it violates the Constitution. I would sincerely suggest to the Hon. Minister to get this legally examined, whether what I am saying is sense or non-sense, because I am fairly confident that what I am saying is right. You can not have rotation without violating the Act. 243 (d) of the Constitution. If that is so, then you are saying in the Statement of Objects itself that the object is to vioate the Constitution. Then the whole basis of the ordinance and the Bill, fails to the ground. You may have unknowingly committed a mistatke in the ordinance. Should that mistatke be repeated and confirmed by this august House? I request the Hon.ble Speaker to come to the aid of equity and law and the Constitution. I am making very serious point which deserves proper legal opinion before proceeding with it. Of course, we are not going to lose anything. Ordinance is there for six months or so on and now the Supreme Court is also not insisting on six weeks. But let us not proceed with the basically defective ordinance or bills.

MR. SPEAKER : I have been hearing you. Let there be no feeling that have not given my attention. I am consiciously given my attention to the relevant aspects.

SRI M. Y. GHORPADE : I hope I have made my point clear. I have repeated it twice, thrice, because I consider it important enough to be seriously considered by this House. You have been repeatedly telling us that you are there to protect law and the rule of law. ಮಾನ್ಯ ಪ್ರಕಾಶ್‌ರವರು ತಪ್ಪು ತಿಳಿದುಕೊಳ್ಳಬಾರದು. ನನ್ನ ಅಭಿಪ್ರಾಯದಲ್ಲಿ ಇವೆಲ್ಲಾ ದುರುದ್ದೇಶದಿಂದ ಕೂಡಿರತಕ್ಕಂತಹ ಪ್ರಯತ್ನಗಳು male fides. I may be wrong, but I must express my honest opinion. ಹೆಜ್ಜೆ ಹೆಜ್ಜೆಗೂ ದುರುದ್ದೇಶ ಸ್ಪಷ್ಟವಾಗಿ ಕಾಣುತ್ತಿದೆ. ನನಗೆ ಗೊತ್ತಿದೆ, ಮುಖ್ಯಮಂತ್ರಿಗಳು ಎಲ್ಲ ರಾಜಕೀಯ ಪಕ್ಷಗಳ ನಾಯಕರಿಗೆ ಕರೆದು ಅವರ ಜೊತೆ ಚರ್ಚೆ ಮಾಡಿದ ಸಂದರ್ಭದಲ್ಲಿ ನಾನೂ ಇದ್ದೆ. ಆಗ ಇದೇ ಪ್ರಸ್ತಾಪಕ್ಕೆ ಬಂದಿತ್ತು. ಫೈನಾನ್ಷಿಯಲ್ ವಯಬಿಲಿಟಿಗೋಸ್ಕರ ವಗೈರೆ

ವಗೈರೆ ಚಿಕ್ಕ ಪುಟ್ಟ ಇರತಕ್ಕಂತಹ 5,600 ಗ್ರಾಮ ಪಂಚಾಯಿತಿಗಳನ್ನು 2,500 ಪಂಚಾಯಿತಿಗಳಿಗೆ ಇಳಿಸಬೇಕೆಂದು, ಅಂದರೆ ಅದರ ಗಾತ್ರ ದೊಡ್ಡದು ಮಾಡಬೇಕು. ಇದು ಗಾತ್ರದ ಪ್ರಶ್ನೆ ಅಲ್ಲ. ನನಗೆ ಆಶ್ಚರ್ಯವಾಗುತ್ತದೆ ಮುಖ್ಯಮಂತ್ರಿಗಳೂ ಕೂಡ ಇದರ ಬಗ್ಗೆ ಎಷ್ಟರ ಮಟ್ಟಿಗೆ ಲಕ್ಷ್ಯ ಕೊಟ್ಟಿದ್ದಾರೆ. ಏಕೆಂದರೆ, ಅವರದೇ ಧಾಟಿಯಲ್ಲಿ ಇಲ್ಲಿ ಒಂದು ಸಾರಿ ಹೇಳಿದರು. ಹಳೆಯ ಪಂಚಾಯಿತಿ ಎಂದರೆ ಸಣ್ಣ ಮಕ್ಕಳಿಗೆ ಲಗ್ನ ಮಾಡು ಎಂದು. ಅವರು ಹೇಳಿದರು ಲಗ್ನ ಮಾಡಬೇಕಾದರೆ ಹುಡುಗಿಗೆ 18 ವರ್ಷ ಇರಬೇಕು, ಹುಡುಗನಿಗೆ 24 ವರ್ಷ ಇರಬೇಕೆಂದು ಹೇಳಿದ್ದರು. ಅಂಥದ್ದು ನಾವು ಮಾಡಿರತಕ್ಕಂತಹ ಕಾನೂನಿನಲ್ಲಿ ಹುಡಿಗಿ ವಯಸ್ಸು ಒಂಭತ್ತು ಹುಡುಗನ ವಯಸ್ಸು 12. ಈ ತರಹ ಮಾಡಿದ್ದೇವೆ. ಅಂದರೆ, ಸಾಮಾನ್ಯವಾಗಿ ಅವರು ಬಹಳ ತರ್ಕಬದ್ಧವಾಗಿ ಮಾತನಾಡುತ್ತಾರೆ. ನಮ್ಮ ಮುಖ್ಯಮಂತ್ರಿಗಳ ಬಗ್ಗೆ ನಮಗೆ ಹೆಮ್ಮೆ ಇದೆ. ಆದರೆ ಈ ಸಲ ಸಂಪೂರ್ಣವಾಗಿ ತರ್ಕ ಬಿಟ್ಟು ಮಾತನಾಡಿದ್ದಾರೆ. ಏಕೆಂದರೆ, ಇದು ವಯಸ್ಸಿನ ಪ್ರಶ್ನೆ ಅಲ್ಲ, ಇದು ಗಾತ್ರದ ಪ್ರಶ್ನೆ. ಸೈಸ್ ಎಷ್ಟು ಇರಬೇಕು ಅದು ಪ್ರಶ್ನೆ. ಚಿಕ್ಕದು ಇದ್ದರೂ ಅಷ್ಟೇ ವಯಸ್ಸು. ಅಷ್ಟೇ ಭಾಗ ಕರ್ನಾಟಕದಲ್ಲಿ ಸಾವಿರಾರು ವರ್ಷಗಳಿಂದ ಇದೆ. ಜನರಿಗೂ ಅಷ್ಟೇ ವಯಸ್ಸು ಇದೆ ವಯಸ್ಸಿನಲ್ಲಿ ಬದಲಾವಣೆಯಾಗುವುದಿಲ್ಲ. ಗಾತ್ರದ ಪ್ರಶ್ನೆ ಇದರ ಬಗ್ಗೆ ಬಹಳ ಲಘುವಾಗಿ ನೀವು ತೆಗೆದುಕೊಂಡಿದ್ದೀರಿ. ಮುಖ್ಯಮಂತ್ರಿಗಳ ಮನಸ್ಸಿನಲ್ಲಿ ಏನಿದೆ ಎಂದರೆ, ಅಸೆಂಬ್ಲಿ ಎಲಕ್ಷನ್ ಆಗುವವರೆಗೆ ಈ ಎಲಕ್ಷನ್ ನಡೆಯಬಾರದು ಎಂದು ಸತ್ಯವಾದ ಮಾತನಾಡುವ ಅಭ್ಯಾಸ ಅವರಿಗಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಅದು ಹೇಳಿ ಬಿಟ್ಟರು. ನಮ್ಮ ಇಂಟೆನಷನ್ ಏನೆಂದರೆ ಅಸೆಂಬ್ಲಿ ಎಲಕ್ಷನ್ ನಡೆಯುವವರೆಗೆ ಈ ಎಲಕ್ಷನ್ ನಡೆಯಬಾರದು.

ಶ್ರೀ ಎಸ್. ಎಸ್. ಪಾಟೀಲ್ : ಅಸೆಂಬ್ಲಿ ಎಲಕ್ಷನ್ ಆಗುವವರೆಗೆ ವಿರೋಧ ಪಕ್ಷದವರಿಗೂ ಗ್ರಾಮ ಪಂಚಾಯತಿಗಳ ಚುನಾವಣೆಗಳು ನಡೆಯಬೇಕಾಗಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ : ಇದು ನಿಮ್ಮ ಊಹೆ . ಕಾಂಗ್ರೆಸ್ ಪಕ್ಷದ ಪರವಾಗಿ ನಾನು ಮಾತನಾಡುತ್ತಿದ್ದೇನೆ. ಬೇಕಾಗಿಲ್ಲವೆಂದರೆ, ನಮ್ಮ ಅಧ್ಯಕ್ಷರು ನನಗೆ ಮಾತನಾಡುವುದಕ್ಕೆ ಬಿಡದೆ ಸುಮ್ಮನಿರು ಎಂದು ಹೇಳುತ್ತಿದ್ದರು.

ಶ್ರೀ ಎಂ. ವೈ. ಘೋರ್ಪಡೆ : ಇದು ದುರುದ್ದೇಶದಿಂದ ಕೂಡಿದ್ದು ಎಂದು ಹೇಳುವುದಕ್ಕೆ ಇದೊಂದೇ ಉದಾಹರಣೆ ಅಲ್ಲ. ಬಿಲ್ ತಂದು, ಬಿಲ್‌ನಲ್ಲಿ ಏನೇನು ಸೇರಿಸಿದ್ದಾರೆ, ಅದು ಕೂಡ ಈ ಪಂಚಾಯಿತಿ ರಾಜ್‌ಗೆ ಕೀರ್ತಿ ತರುವಂತಹ ವಿಷಯವಲ್ಲ. ನೀವು ಕೇಳುವುದಾದರೆ ಒಂದೊಂದೇ ಬಿಡಿಸಿ ಹೇಳುತ್ತೇನೆ. ಇವರು ನಾಮಿನೇಷನ್ ರಾಜ್ಯ ಕರ್ನಾಟಕದಲ್ಲಿ ತರುವುದಕ್ಕೆ ಹೊರಟಿದ್ದಾರೆ. ಆರು ತಿಂಗಳಲ್ಲಿ ಪಂಚಾಯಿತಿ ರಾಜ್ ಚುನಾವಣೆಗಳಾಗುವುದಿಲ್ಲ. ಆ ಆರು ತಿಂಗಳಲ್ಲಿ ಪ್ರಜಾಪ್ರಭುತ್ವದ ವಿರೋಧವಾಗಿ ನೀವು ಮಾಡುವುದಕ್ಕೆ ಹೊರಟಿದ್ದೀರಿ. ನೀವು ಭಾಷಣ ಮಾಡುವಾಗ ನಾನು ಗಮನ ಕೊಟ್ಟು ಕೇಳಿದೆ. ಅಲ್ಲಿ ಇದ್ದ ಸದಸ್ಯರನ್ನು ಮುಂದುವರೆಸುತ್ತೇವೆಂದು ಹೇಳಿದ್ದೀರಿ. ಆದರೆ ನಿಮ್ಮ ಬಿಲ್‌ನಲ್ಲಿ ಆ ರೀತಿ ಇಲ್ಲ. ಬಿಲ್‌ನಲ್ಲಿ ಡೆಪ್ಯುಟಿ ಕಮೀಷನರ್‌ಗಳು ತಮಗೆ ತಿಳಿದಿದ್ದೇ ಮಾಡುವುದಕ್ಕೆ ಆಸ್ಪದ ಇದೆ.

6.20 ಪಿ. ಎಂ.

"The Administrative Committee shall consist of persons who ae qualified to be elected as Members of the Grama Panchayat and the number of such persons shall be equal to the ... "

This is alright. "Provided the Administrative Committee Shall as far as possible..." ಇದರಲ್ಲಿ ಆ್ಯಸ್ ಫಾರ್ ಆ್ಯಸ್ ಪಾಸಿಬಲ್ ಎಂದು ಸೇರಿಸಿದ ತಕ್ಷಣ ಯಾರು ಸದಸ್ಯರು ಇರುವುದಿಲ್ಲವೋ ಅವರನ್ನೂ ಕೂಡ ನಾಮಿನೇಟ್ ಮಾಡಬಹುದು ಎಂದು ಸ್ಪಷ್ಟವಾಗಿ ಇದೆ. ಅಂದರೆ ಮಾನ್ಯ ಮಂತ್ರಿಗಳು ಮಾತನಾಡುತ್ತಾ ಈಗಿರುವ ಸದಸ್ಯರುಗಳನ್ನೇ ನಾವು ಮುಂದುವರಿಸುತ್ತೇವೆಂದು ಹೇಳಿದರು.

"consist of persons who are old Members of the Grama Panchayat immediately prior to the completion of the term,." Sec 4(2) of your bill, " Provided the Administrative Committee shall as for as possible conists of persons.." they need not be sitting Members, ಇದರಿಂದ ಏನಾಗುತ್ತದೆಂದರೆ ತಮ್ಮ ಪಾರ್ಟಿಗೆ ಸೇರಿದ ಮೂರ್‍ನಾಲ್ಕು ಜನರನ್ನು ನೇಮಕ ಮಾಡುವುದಕ್ಕೆ ಅವಕಾಶವಾಗುತ್ತದಷ್ಟೆ.

MR. SPEAKER : Your apprehension is for becomes far ಅಂತ

ಶ್ರೀ ಎಂ. ವೈ. ಘೋರ್ಪಡೆ : ಈ ರೀತಿ ಅವರು ಮಾಡಿದ್ದಾರೆ. ಈ ರೀತಿ ಮಾಡಿ ಜನರು ಆರಿಸಿದ ಕಮಿಟಿಯನ್ನು ಇವರು ನಾಶ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಅದು ಹೇಗೆಂದರೆ ಎಲ್ಲಿ ಇವರ ಮೆಜಾರಿಟಿ ಇಲ್ಲವೋ ಅಲ್ಲಿ ಇವರ ಕಡೆಯ ಮೂರ್‍ನಾಲ್ಕು ಜನರನ್ನು ನೇಮಕ ಮಾಡಿ ಆ ಮೂಲಕ ಅವರ ಪಕ್ಷಕ್ಕೇ ಕಮಿಟಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಆ ದೃಷ್ಟಿಯಿಂದ ಇದನ್ನು ನಾವು ಯಾವ ಪರಿಸ್ಥಿತಿಯಲ್ಲೂ ಕೂಡ ಒಪ್ಪುವುದಕ್ಕೆ ತಯಾರಿಲ್ಲ. ಏಕೆಂದರೆ it is deliberate hacking to pieces of democracy in partisan interest.

ಡಿ. ಸಿ. ಯವರು ಯಾರನ್ನು ಬೇಕಾದರೂ ನೇಮಕ ಮಾಡಬಹುದು ಎಂದರೆ ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ.

MR. SPEAKER : You have raised one main issue that is, one portion of the proposed amendment is not in consistent with the provison of the constitution. This house is not competent to enact any legislation which is inconsistent with the provisions of the Constitution. Therefore, let us await the replay of the Government. Subsequent arguments are not at all required.

SRI M. Y. GHORPADE : Let me finish. Because let the whole of Karnataka know what is intended in the Bill. ಇವರು ದಾನಶಾಹಿ ಮಾಡುವುದಕ್ಕೆ ಹೊರಟಿದ್ದಾರೆ. ಹಿಂದೆ ಕಾಂಗ್ರೆಸ್‍ನವರು ಒಂದು ಆ್ಯಕ್ಟ್ ಮಾಡಿದಾಗ ಎಲ್ಲಾ ಅಧಿಕಾರವನ್ನು ಅಧಿಕಾರಿಗಳಿಗೇ ಕೊಟ್ಟುಬಿಟ್ಟು ಪ್ರಜಾಪ್ರಭುತ್ವದಲ್ಲಿ ಜನರಿಗೆ ಇವರು ಅವಕಾಶವೇ ಕೊಡಲಿಲ್ಲವೆಂದು

ಟೀಕೆ ಮಾಡಿದ ಈ ಸರ್ಕಾರದವರು ಇಂದು ಡಿ. ಸಿ.ಯವರಿಗೆ ತಮಗೆ ತಿಳಿದವರನ್ನು ನಾಮಿನೇಟ್ ಮಾಡಬಹುದು ಎಂದು ಅಧಿಕಾರವನ್ನು ಕೊಟ್ಟು ದಾನಶಾಹಿ ಎಂದು ಕರೆಯದೆ ಇನ್ನೇನು ಕರೆಯಲು ಸಾಧ್ಯ? ಇಷ್ಟೇ ಅಲ್ಲ ಇವರು ತಂದಿರುವ ಬಿಲ್‌ನ ಸೆಕ್ಷನ್ 4 (3)ರಲ್ಲಿ ಏನು ಹೇಳಲಾಗಿದೆಯೆಂದರೆ Where the Administrative Committee is appointed under Sub Sec. (1), the Deputy Commissioner shall nominate two members of the Administratve Committee respectively as Adhyaksha and Upadhyaksha. ಎನ್ನಲಾಗಿದೆ. ಈ ರೀತಿಯಲ್ಲಿ ಮಾನ್ಯ ಪ್ರಕಾಶ್‌ರವರು ಹೇಳುತ್ತಾರೆಂದು ನಾನು ಅಪೇಕ್ಷೆ ಮಾಡಿರಲಿಲ್ಲ. ಏಕೆಂದರೆ ಡಿ. ಸಿ. ಯವರು ಕಮಿಟಿಯ ಅಧ್ಯಕ್ಷ ಹಾಗೂ ಉಪಾಧ್ಯಕ್ಷರನ್ನು ನೇಮಕ ಮಾಡುವ ಅಧಿಕಾರವನ್ನು ಪಡೆಯುತ್ತಾರೆಂದರೆ ಅದು ಪಂಚಾಯತ್ ರಾಜ್ ಕೂಡ ಆಗುವುದಿಲ್ಲ ಮತ್ತು ಅದು ಪ್ರಜಾಪ್ರಭುತ್ವವೆಂದು ಅನ್ನಿಸಿಕೊಳ್ಳುವುದೂ ಇಲ್ಲ. ಇಂಥ ಅಧಿಕಾರವನ್ನು ಮಾನ್ಯ ಮಂತ್ರಿಗಳು ಈ ಬಿಲ್ ಮೂಲಕ ಕೊಡುತ್ತಾರೆಂದು ನಾನು ಎಂದೆಂದಿಗೂ ನಿರೀಕ್ಷೆ ಮಾಡಿರಲಿಲ್ಲ. ಆದುದರಿಂದ ನಾನು ಇದನ್ನು ಒಪ್ಪುವುದಿಲ್ಲ. ಕೇವಲ ಮೆಜಾರಿಟಿ ಇದೆ ಎಂಬುದಕ್ಕೆ ನೀವೇನಾದರೂ ಪಾಸ್ ಮಾಡಿಕೊಳ್ಳಿ. ಆದರೆ ನಾನು ಆಗಲೇ ಹೇಳಿದ ಹಾಗೆ ಇದು ಕಾನ್ಸಿಟಿಟ್ಯೂಷನಲ್ ವಿರುದ್ಧವಿರುವುದರಿಂದ ಇದನ್ನು ಮಾಡುವುದಕ್ಕೆ ಬರುವುದಿಲ್ಲ. ಏಕೆಂದರೆ ಇದು ದುರುದ್ದೇಶದಿಂದ ಕೂಡಿದೆಯೆಂದು ಸ್ಪಷ್ಟವಾಗಿ ತೋರುತ್ತಿದೆ. "An Administrator or as the case may be, Member of the Administrative Committee including the Adhyaksha and Upadhyaksha shall subject to the pleasure of the Deputy Commissioner hold office in the newly constituted Panchayat." They have to hold office subject to the pleasure of the Deputy Commissioner. ಯಾವ ಮಟ್ಟಕ್ಕೆ ಪ್ಲೆಷರ್ ಎನ್ನುತ್ತೀರಿ, ನೀವೇನಾದರೂ ಮಾಡಿ but we cannot hold office subject to pleasure of the Deputy Commissioner, who is an officer, a bureaucrat, who is not an elected person.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರಿಗೆ, ಈ ವಿಚಾರ ಮೊದಲೇ ಗೊತ್ತಿದ್ದರೆ ಇದನ್ನು ಇಲ್ಲಿ ಇಂಟ್ರಡ್ಯೂಸ್ ಮಾಡಲು ಅವಕಾಶ ಕೊಡುತ್ತಿರಲಿಲ್ಲ. ಅಜೆಂಡಾದಲ್ಲಿಯೇ ಮೊದಲು ಹಾಕುತ್ತಿರಲಿಲ್ಲ. ಡಿ. ಸಿ.ಯವರೇ ಅಧ್ಯಕ್ಷರನ್ನು ಮತ್ತು ಉಪಾಧ್ಯಕ್ಷರನ್ನು ನಾಮಿನೇಟ್ ಮಾಡುತ್ತಾರೆ " at the pleasure of the Deputy Commissioner" ಎಂದು ತೆಗೆಯುತ್ತಾರೆಂದು ಗೊತ್ತಿದ್ದರೆ ಈ ಬಿಲ್‌ನ್ನು ತರಲು ತಾವು ಅವಕಾಶವೇ ಕೊಡುತ್ತಿರಲಿಲ್ಲ.

SRI M. Y. GHORPADE : Sec. 4(6) of the Bill reads : " If on receipt of a report of the Deptuy Commissioner or otherwise the Government is satisfied that the Adminsitrative Committee has failled to carry on the functions of the Grama Panchayat as stipulated in the prncipal Act or for any other valid reason, the Government may, by order, remove the Administrative Committee and make such other arrangement as deemed fit for carrying on the functions of the Grama Panchayat".

ಇಷ್ಟೊಂದು ಡಿಸ್ಪಾರ್ಟ್ ಮಾಡಿರತಕ್ಕಂಥ ಕಮಿಟಿಯನ್ನು ಪುನಃ ನೀವು ಮನಸ್ಸಿಗೆ ಬಂದ ಹಾಗೆ ಫಾರ್ ಎನಿ ವ್ಯಾಲಿಡ್ ರೀಸನ್ ರಿಮೂವ್.. ವ್ಯಾಲಿಡ್ ರೀಸನ್‌ನ್ನು ತೀರ್ಮಾನ ಮಾಡುವವರ್ಯಾರು? The Government cannot take this power to remove any Administratve Committee as and when they like. Giving Deputy Commissioner the power to appoint Adhyaksha or Upadhyaksha it will make history in the country and completely demolish the good name that the Karnataka has. ಇನ್ನು ರೊಟೇಷನ್ ಬಗ್ಗೆ ನಾನು ಆಗಲೇ ಹೇಳಿದೆ. ತಾವು ದಯವಿಟ್ಟು ಸಬ್ ಸೆಕ್ಷನ್ (ಎ)ನಲ್ಲಿ ಏನು ಹೇಳಲಾಗಿದೆ ಅದನ್ನು ಓದಬೇಕು. 1993ರ ಸಬ್ ಸೆಕ್ಷನ್ 8 (ಎ)ನಲ್ಲಿ ನಾವು ಡಿ. ಸಿ. ಯವರಿಗೆ ಬಹಳ ಸೀಮಿತವಾದಂಥ ಅಧಿಕಾರವನ್ನು ಮಾತ್ರ ಕೊಟ್ಟಿದ್ದೆವು. ಅನ್‌ಅವಾಯ್ಡಬಲ್ ರೀಸನ್ ಇದ್ದಾಗ ಮಾತ್ರ ಕಮಿಟಿಯನ್ನು ಫಾರ್ಮ್ ಮಾಡುವುದಕ್ಕೆ ಆಗದಿದ್ದಾಗ ಮಾತ್ರ ಅಂಥ ಸಂದರ್ಭದಲ್ಲಿ ಡಿ. ಸಿ. ಯವರು ಅಡ್ಮಿನಿಸ್ಟ್ರೇಟರನ್ನು ನೇಮಕ ಮಾಡುವುದಕ್ಕೆ ಅಧಿಕಾರ ಪಡೆದಿದ್ದರು. ಅದೂ ಕೂಡ as soon a the Deputy Commissioner is satisfied that the difficulty has vanished he has to revert to democratic process. ಎಂದು ತಿಳಿಸಿ 1993ರಲ್ಲಿ ಸೆಕ್ಷನ್ (ಎ)ನಲ್ಲಿ ನಾವು ಮಾಡಿದ್ದೇವೆ. ಅದನ್ನು ಬಿಟ್ಟು ನೀವು ದಾನಾಶಾಹಿ ಪವರ್ಸ್‌ಅನ್ನು ಡಿ. ಸಿ. ಯವರಿಗೆ ಕೊಟ್ಟು ರಾಜಕೀಯವಾಗಿ ಡಿ. ಸಿ.ಗಳ ಮುಖಾಂತರ ನಾವು ಏನು ಬೇಕಾದರೂ ಮಾಡಿಕೊಳ್ಳುತ್ತೇವೆ ನೀವು ಮಾತ್ರ ಸುಮ್ಮನಿರಿ ಎಂದರೆ ನಾವಂತೂ ಸುಮ್ಮನಿರುವುದಕ್ಕೆ ಸಾಧ್ಯವಿಲ್ಲ. ಅದಕ್ಕೆ ಬದಲು ನಾವು ಕರ್ನಾಟಕದ ಜನತೆಗೆ ನೀವು ಮಾಡಿರುವುದನ್ನು ಪ್ರತಿಭಟನೆ ಮಾಡಬೇಕೆಂದು ಕರೆ ಕೊಡಬೇಕಾಗುತ್ತದೆ. ನಾವು ಕರೆಯನ್ನು ಹಳ್ಳಿಹಳ್ಳಿಗೂ ಹೋಗಿ ಕೊಡಬೇಕಾಗುತ್ತದೆ. ಅಂಥ ಸನ್ನಿವೇಶ ಬರುವುದಕ್ಕೆ ತಾವು ಆಸ್ಪದ ಮಾಡಿಕೊಡಬಾರದು ನೀವು ಇದನ್ನು ವಾಪಸ್ಸು ತೆಗೆದುಕೊಳ್ಳುವುದಕ್ಕೆ ಕಾನೂನು ಬದ್ಧವಾದ ಆಧಾರವಿದೆ. ನಿಮ್ಮ ಉದ್ದೇಶ ಒಂದು ಕಡೆ ಇದೆ. ಆದರೆ ಕಾನೂನು ಕೂಡ ಒಂದು ಕಡೆ ಇದೆ. ನಿಮ್ಮ ಉದ್ದೇಶ ಮತ್ತು ಕಾನೂನುಗಳೆರಡೂ ಸಧ್ಯದಲ್ಲಿ ಅನುಕೂಲವಾಗಿಲ್ಲ. ಈ ಕಾರಣಗಳಿಂದ ತಾವು ಇದನ್ನು ವಾಪಸ್ಸು ತೆಗೆದುಕೊಳ್ಳಬೇಕು. ನಿಮ್ಮ ಆರ್ಡಿನೆನ್ಸ್ ಹಾಗೆಯೇ ಇದೆ. ಸುಪ್ರೀಂಕೋರ್ಟ್‌ನವರು ನಿಮಗೆ 6 ವಾರಗಳಿಗಿಂತ ಹೆಚ್ಚಿಗೆ ಸಮಯವನ್ನು ಚುನಾವಣೆ ಮಾಡುವ ಸಲುವಾಗಿ ತೆಗೆದುಕೊಳ್ಳಬಹುದು ಎಂದು ಹೇಳಲಾಗಿದೆ. ಆದರೆ ಹಿಯರಿಂಗ್ ಆದನಂತರ ಅವರ ಅಭಿಪ್ರಾಯ ಏನು ಎಂಬುದು ಸ್ಪಷ್ಟವಾಗುತ್ತದೆ. ಇಂಥ ಸಂದರ್ಭದಲ್ಲಿ ನೀವು ಆರ್ಡಿನೆನ್ಸ್‌ನ್ನು ರೀ-ಪ್ಲೇಸ್ ಮಾಡುವ ಸಲುವಾಗಿ ಈ ಬಿಲ್ ತಂದಿದ್ದೇವೆ ಎಂದು ಹೇಳಿದ್ದೀರಿ. ಆದರೆ ಇವೆಲ್ಲಾ ಆರ್ಡಿನೆನ್ಸ್‌ನಲ್ಲಿ ಇಲ್ಲ. ಅಂಥ ವಿಷಯಗಳನ್ನೆಲ್ಲಾ ನೀವು ಈ ಬಿಲ್‌ನಲ್ಲಿ ಸೇರಿಸಿ ಒಂದು ರೀತಿಯಲ್ಲಿ ರಾಜಕೀಯವಾಗಿ ಕರ್ನಾಟಕವನ್ನು ನಾಮಿನೇಷನ್ ರಾಜ್ಯವೆಂದು ಮಾಡುವುದಕ್ಕೆ ಹೊರಟಿದ್ದೀರಿ. ಪ್ರಜಾಪ್ರಭುತ್ವದ ಬಗ್ಗೆ ಎಳ್ಳಷ್ಟು ಅಭಿಮಾನ ಹೊಂದಿರುವವರೂ ಕೂಡ ಇದನ್ನು ಒಪ್ಪುವುದಿಲ್ಲ. ನಾನು ಮತ್ತು ನನ್ನ ಪಕ್ಷ ಇದನ್ನು ಒಪ್ಪುವುದಿಲ್ಲ. ನಮ್ಮ ಪಕ್ಷದ ಸದಸ್ಯರುಗಳೂ ಕೂಡ ಇದನ್ನು ಒಪ್ಪುವುದಿಲ್ಲ. ಆ ಭಾವನೆ ನನಗಿದೆ.

ಮಂಡಲ ಪಂಚಾಯಿತಿಯನ್ನು ಏಕೆ ಮಾಡಬಾರದು ಎನ್ನುವುದಕ್ಕೆ ಈಗಾಗಲೇ ನಾನು ಚೊಚ್ಚಲ ಭಾಷಣ ಮಾಡುವಾಗ ಹೇಳಿದೆ. ಚರ್ಚೆ ಮಾಡುವಾಗ ಕೂಡ ನಾವು ಇದನ್ನು ಹೇಳಿದ್ದೇವೆ. ಸಧ್ಯಕ್ಕೆ ಇರುವ ಗ್ರಾಮ ಪಂಚಾಯಿತಿಯ ಗಾತ್ರ ಸರಿಯಿದೆ, 400 ಜನರಿಗೆ ಒಬ್ಬರನ್ನು ಆರಿಸುವ ಪದ್ಧತಿ ಸರಿಯಿದೆ, ಒಂದು ಸಾವಿರಕ್ಕೆ ಒಬ್ಬರು ಎಂದು ಮಾಡುವ ಅವಶ್ಯಕತೆಯಿಲ್ಲ ಮತ್ತು ಹಣಕಾಸಿನ ದೃಷ್ಟಿಯಿಂದಲೂ ಕೂಡ, ಗಾತ್ರವನ್ನು ಜಾಸ್ತಿ ಮಾಡಿದರೆ ನಿಮ್ಮ ಹಣಕಾಸಿನ ಪರಿಸ್ಥಿತಿ ಭದ್ರವಾಗುವುದಿಲ್ಲ. ಅದು ಇನ್ನೂ ದುರ್ಬಲವಾಗುತ್ತದೆ. ಈಗ ಗ್ರಾಮ ಪಂಚಾಯಿತಿಗೆ 56 ಕೋಟಿ ರೂ. ದಕ್ಕುತ್ತಿತ್ತು. ಅದರ ಸಂಖ್ಯೆಯನ್ನು ನೀವು ಅರ್ಧ ಮಾಡಿದರೆ ಈ 56 ಕೋಟಿ ರೂಪಾಯಿಯನ್ನೂ ಕೂಡ ಅರ್ಧಕ್ಕೆ ಇಳಿಸಿದಂತೆ ಆಗುತ್ತದೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಕೂಡ 86 ಸಾವಿರ ಜನ ಸದಸ್ಯರನ್ನು ಆರಿಸಿರತಕ್ಕಂಥ ವ್ಯವಸ್ಥೆಯಲ್ಲಿ ಹೆಣ್ಣು ಮಕ್ಕಳು, ಓ.ಬಿ.ಸಿ., ಎಸ್.ಸಿ. ಎಸ್.ಟಿ. ಎಲ್ಲರೂ ಸೇರಿದ್ದಾರೆ. ಇಷ್ಟು ಜನರಿಗೆ ಪ್ರಜಾಪ್ರಭುತ್ವದ ಅನುಭವ ಕೊಡುವಂಥ ವ್ಯವಸ್ಥೆಯನ್ನು ನೀವು ಮೊಟಕುಗೊಳಿಸಲು ಹೋದರೆ ನೀವು ಎಸ್.ಸಿ. ಎಸ್.ಟಿ., ಓ.ಬಿ.ಸಿ. ಮತ್ತು ಹೆಣ್ಣುಮಕ್ಕಳ ಬಗ್ಗೆ ಎಷ್ಟು ಕಾಳಜಿ ವಹಿಸಿದ್ದೀರಿ ಎನ್ನುವುದು ತಿಳಿಯುತ್ತದೆ. ಪುನಃ ನಾನು ಅದನ್ನು ಹೇಳಲು ಹೋಗುವುದಿಲ್ಲ. ನನ್ನ ಅಭಿಪ್ರಾಯದಲ್ಲಿ ಮತ್ತು ಕರ್ನಾಟಕದ ಜನತೆಯ ಅಭಿಪ್ರಾಯದಲ್ಲಿ ಮಂಡಲ ಪಂಚಾಯಿತಿಯ ಗಾತ್ರ ಹಿಂದೆ ಬಹಳ ದೊಡ್ಡದಾಗಿತ್ತು. ಅಲ್ಲಿಂದ ಸೂಪರ್‌ವೈಸ್ ಮಾಡಲು ಆಗುತ್ತಿರಲಿಲ್ಲ. ಯದ್ವಾತದ್ವಾ ಘರ್ಷಣೆಗಳು ನಡೆಯುತ್ತಿದ್ದವು. ಮತ್ತು ಗ್ರಾಮಸಭೆಯನ್ನೂ ಮಾಡಲು ಅವಕಾಶವಾಗುತ್ತಿರಲಿಲ್ಲ ಎನ್ನುವುದು ಎಲ್ಲರಿಗೂ ಗೊತ್ತಿರತಕ್ಕಂಥ ವಿಚಾರವಾಗಿದೆ. ಇವತ್ತು ಗ್ರಾಮ ಸಭೆಗಳು ಪಂಚಾಯತ್ ರಾಜ್ಯದ ಜೀವಾಳ ಎಂದು ಕೇಂದ್ರದ ಮಂತ್ರಿಗಳು ಹೇಳುತ್ತಾರೆ. ಅದನ್ನು ಮಾಡದಿದ್ದರೆ ನಾವು ಪಂಚಾಯತ್ ರಾಜ್ಯವನ್ನು ಯಶಸ್ವಿಯಾಗಿ ನಡೆಸುತ್ತಿದ್ದೇವೆ ಎಂದು ಹೇಳಲು ಬರುವುದಿಲ್ಲ. ಅದೂ ಒಂದು ಮುಖ್ಯವಾದಂಥ ಕಾರಣ. ಆ ಸಂಖ್ಯೆಯನ್ನು ಜಾಸ್ತಿ ಮಾಡಲು ಅದೂ ಒಂದು ಮುಖ್ಯವಾದಂಥ ಕಾರಣ. ಮಂತ್ರಿಗಳಿಗೆ ಇನ್ನೂ ಒಂದು ಕಿವಿಮಾತು ಹೇಳಲು ನಾನು ಇಷ್ಟಪಡುತ್ತೇನೆ. 5600 ಗ್ರಾಮ ಪಂಚಾಯಿತಿಗಳಿರುವುದನ್ನು ನೀವು ಡೀಲಿಮಿಟೇಷನ್ ಮಾಡಿ 2500 ಮಾಡಲು ಹೋದರೆ, ನೀವು 2500 ಗ್ರಾಮಗಳಲ್ಲಿರುವ ಪಂಚಾಯಿತಿ ಹೆಡ್ ಕ್ವಾರ್ಟರ್ಸ್ ಬೋರ್ಡ್‌ನ್ನು ತೆಗೆಯಬೇಕಾಗುತ್ತದೆ. ಅದನ್ನು ನೀವು ತೆಗೆಯಲು ಹೊರಟರೆ ಈ ರಾಜ್ಯದಲ್ಲಿರುವ ಜನ ಸುಮ್ಮನಿರುವುದಿಲ್ಲ. ಯಾವ ಗ್ರಾಮದಲ್ಲಿ ಗ್ರಾಮ ಪಂಚಾಯಿತಿಯ ಹೆಡ್ ಕ್ವಾರ್ಟರ್ಸ್ ಇತ್ತು, ಆಫೀಸ್ ಇತ್ತು, ಸಿಬ್ಬಂದಿ ಇತ್ತು, ಎಲ್ಲವೂ ಇತ್ತು, ಅದೆಲ್ಲವನ್ನೂ ಬಿಟ್ಟು, ಇನ್ನು ಮುಂದೆ ನಿಮ್ಮ ಊರಿನಲ್ಲಿ ಹೆಡ್ ಕ್ವಾರ್ಟರ್ಸ್ ಇಲ್ಲ ಇನ್ನೊಂದು ಊರಿನಲ್ಲಿ ಇದೆ. ನಿಮ್ಮ ಊರಿನಲ್ಲಿ ಇದ್ದಂಥಾದ್ದನ್ನು ನಾವು ರದ್ದು ಮಾಡಿದ್ದೇವೆ ಎಂದರೆ ಖಂಡಿತವಾಗಿ ನೀವು ಮುಂದೆ ಚುನಾವಣೆಯಲ್ಲಿ ಆರಿಸಿ ಬರುವುದಿಲ್ಲ. ಅಂಥ ಕೆಲಸವನ್ನು ನೀವು ಏಕೆ ಮಾಡುತ್ತೀರಿ? ಇನ್ನು ಆರು ತಿಂಗಳಾದ ಮೇಲೆ ನಾವೇ ಆಗಲೀ, ನೀವಾಗಲೀ, ಯಾರೇ ಆಗಲೀ ಅಧಿಕಾರಕ್ಕೆ ಬರಬಹುದು.

ಅಧ್ಯಕ್ಷರು : ಹೈಪಾಥಿಟಿಕಲಿ ಸ್ಪೀಕಿಂಗ್, ಅವರೇ ಬಂದರೆ ಇದನ್ನು ಮುಂದುವರೆಸಿಕೊಂಡು ಹೋಗುತ್ತಾರೆ, ಅವರು ಈಗ ಹೇಳಿರುವುದನ್ನು ನಡೆಸಿಕೊಂಡು ಹೋಗುತ್ತಾರೆ, ನೀವು ಬಂದರೆ ನಿಮ್ಮ

ಅಭಿಪ್ರಾಯದಂತೆ ಹೋಗುತ್ತೀರಿ. ಒಂದು ವೇಳೆ, ನೀವು ಅವರು ಕಲೆತು ಬರುವಂಥಾದ್ದಾದರೆ ಏನು ಮಾಡುತ್ತೀರಿ?

ಶ್ರೀ ಎಂ.ವೈ. ಘೋರ್ಪಡೆ : ಆರು ತಿಂಗಳಾದ ಮೇಲೆ ಇದನ್ನು ಮುಂದುವರೆಸಿಕೊಂಡು ಹೋಗುವ ಪರಿಸ್ಥಿತಿ ಇರುವುದಿಲ್ಲ ಎಂದು ಗೊತ್ತಿದ್ದರೂ ಏಕೆ ಇಷ್ಟೆಲ್ಲಾ ಮಾಡುವುದಕ್ಕೆ ಹೋಗಬೇಕು? ಈ ವಿಚಾರವನ್ನು ಕೈಬಿಡಬೇಕು ಎಂದು ನಾನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಎಂ. ವೀರಪ್ಪಮೊಯ್ಲಿ (ಕಾರ್ಕಳ) : ಮಾನ್ಯ ಅಧ್ಯಕ್ಷರೇ, ಇದು ನೋಡಲು ಬಹಳ ಸಣ್ಣದಾದ ಒಂದು ಆರ್ಡಿನೆನ್ಸ್, ಒಂದು ಸಣ್ಣ ಅಮೆಂಡ್‌ಮೆಂಟ್ ಎಂದು ಕಾಣುತ್ತದೆ. ಏಕೆಂದರೆ ಅವರು ಸೆಕ್ಷನ್ 4 ಮತ್ತು ಸೆಕ್ಷನ್ 5 ಇವೆರಡಕ್ಕೆ ಮಾತ್ರ ಇಲ್ಲಿ ತಿದ್ದುಪಡಿಯನ್ನು ನಮೂದಿಸಿದ್ದಾರೆ. ಸೆಕ್ಷನ್ 4ಕ್ಕೆ ತಿದ್ದುಪಡಿ ತಂದಿರುವ ಅವರ ಉದ್ದೇಶವೆಂದರೆ, ದೊಡ್ಡ ಪಂಚಾಯಿತಿಯನ್ನು ಮಾಡಬೇಕು ಎನ್ನುವುದು. ಅದು ಬಹಳ ಸ್ಪಷ್ಟವಾಗಿದೆ. ಹಿಂದೆ, ನಮ್ಮ ಉದ್ದೇಶ ಸಣ್ಣ ಪಂಚಾಯಿತಿ ಮಾಡಬೇಕು ಎನ್ನುವುದಾಗಿತ್ತು. ದೊಡ್ಡ ಪಂಚಾಯಿತಿ ಮಾಡಿ ಅದರಿಂದ ಏನಾಗಿದೆ ಎನ್ನುವುದನ್ನೂ ನಾವು ನೋಡಿದ್ದೇವೆ. ಹಿಂದೆ ಒಂದೊಂದು ಗ್ರಾಮಕ್ಕೆ ಒಂದೊಂದು ಪಂಚಾಯಿತಿ ಇತ್ತು. ಆಮೇಲೆ ಎಸ್.ಕೆ.ಡೇ.ಯವರಿಗೆ ತಮ್ಮ ಅಡ್ವೈಸ್ ಮಾಡಿದ್ದು 1985-86ರಲ್ಲಿ ಪಂಚಾಯತ್ ರಾಜ್ ಮಸೂದೆಯನ್ನು ತಂದವರು ಎಸ್.ಕೆ.ಡೇ ಯವರು. 1956ರಲ್ಲಿ ಪಂಚಾಯತ್ ಆಕ್ಟ್‌ನ್ನು ತರುವಾಗ ಎಸ್.ಕೆ.ಡೇ ಯವರು ಬಹಳ ಸಣ್ಣ ಪಂಚಾಯಿತಿಯನ್ನೇ ಮಾಡಿದರು. ಅದಕ್ಕೆ ಸ್ಫೂರ್ತಿಯೆಂದರೆ ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ಯ. ಅಂದರೆ, ಗ್ರಾಮಗಳು ಚಿಕ್ಕದಾಗಿರಬೇಕು, ಜನಗಳಿಗೆ ಹತ್ತಿರವಾಗಿರಬೇಕು, ಜನ ಆಳತಕ್ಕಂಥಾದ್ದು ಆಗಬೇಕು ಎನ್ನುವುದಾಗಿತ್ತು. ಗ್ರಾಮಸಭೆಗಳನ್ನು ಮಾಡುವಂಥ ಉದ್ದೇಶವೇನು? ಇವರಿಗೆ ಗ್ರಾಮಸಭೆಗಳಲ್ಲಿ ನಂಬಿಕೆ ಇದೆ. ಕೇಂದ್ರ ಸರ್ಕಾರದವರು ಗ್ರಾಮ ಸಭೆಗಳ ಬಗ್ಗೆ ಹೆಚ್ಚಿನ ಪ್ರಾಮುಖ್ಯತೆ ಕೊಟ್ಟಿದ್ದಾರೆ. ಹೆಚ್ಚು ಅಧಿಕಾರವನ್ನು ಗ್ರಾಮಸಭೆಗಳಿಗೆ ಕೊಡುತ್ತಿರುವುದನ್ನು ನಾವು ಇಂದು ಕಾಣುತ್ತಿದ್ದೇವೆ. ಈಗ ಗ್ರಾಮಸಭೆಗಳು ಜನಗಳಿಗೆ ಬಹಳ ಹತ್ತಿರವಾಗಿದೆ. There decision are more transparent.

ಅಧ್ಯಕ್ಷರು : ಇವತ್ತು ನ್ಯೂಸ್‌ಪೇಪರ್‌ನಲ್ಲಿ ಬಂದಿರುವ ಎಕ್ಸಿಮ ಪಾಲಿಸಿ ಬಗ್ಗೆ ಓದಿದ್ದೀರಾ?

ಶ್ರೀ ಎಂ. ವೀರಪ್ಪ ಮೊಯ್ಲಿ : ಓದಿದ್ದೇನೆ.

ಅಧ್ಯಕ್ಷರು : ಇನ್ನೂ ನಾವು ಮಹಾತ್ಮ ಗಾಂಧಿಯವರ ಹೆಸರನ್ನು ತೆಗೆದುಕೊಂಡು ಮಾತನಾಡಬೇಕೇ? ಇನ್ನೂ ಮಹಾತ್ಮ ಗಾಂಧಿಯವರ ಹೆಸರನ್ನು ನೆನಪು ಮಾಡಿಕೊಳ್ಳಬೇಕೇ? ಅಗತ್ಯವಿದ್ದರೆ ಹೇಳಿ. ನನ್ನದೇನೂ ಆಕ್ಷೇಪಣೆಯಿಲ್ಲ.

ಶ್ರೀ ಎಂ. ವೀರಪ್ಪ ಮೊಯ್ಲಿ : ವೆಲ್ ಟೆಸ್ಟೆಡ್ ವಿಕೇಂದ್ರೀಕರಣದ ಕಾನ್ಸೆಫ್ಟ್ ಯಾವುದೆಂದರೆ ಮಹಾತ್ಮ ಗಾಂಧಿಯವರು ಮಾಡಿದಂಥ ಕಾನ್ಸೆಫ್ಟ್. No doubt about it. It has been tested already.

ನಾವು ನಮ್ಮ ಹಿಂದಿನ ಇತಿಹಾಸವನ್ನು. ನೋಡಿದರೂ ಕೂಡ ಸಣ್ಣ ಗ್ರಾಮ ಪಂಚಾಯಿತಿಗಳು ಸರಿ ಎನಿಸುತ್ತದೆ. ಗ್ರಾಮ ಪಂಚಾಯಿತಿ ಇಲ್ಲದಿದ್ದರೆ ಗ್ರಾಮಸಭೆಗಳ ಕಾನ್ಸೆಪ್ಟನ್ನು ತರಬೇಕಾದಂಥ ಅವಶ್ಯಕತೆ ಇರಲಿಲ್ಲ. ಗ್ರಾಮ ಪಂಚಾಯಿತಿಗಳು ಸಣ್ಣದಾಗಿರಬೇಕು. ಅಂದರೆ ನಾವು ಮ್ಯಾಕ್ರೋ ಲೆವೆಲ್‌ನಲ್ಲಿ ಡೆವೆಲಪ್‌ಮೆಂಟ್ ಮಾಡುವುದಲ್ಲ, ಮ್ಯಾಕ್ರೋ ಲೆವೆಲ್‌ನಲ್ಲಿ ಪ್ಲಾನಿಂಗ್ ಮಾಡುವುದಲ್ಲ, ಮೈಕ್ರೋ ಲೆವೆಲ್‌ನಲ್ಲಿ ಪ್ಲಾನಿಂಗ್ ಮಾಡಬೇಕು, ಮೈಕ್ರೋ ಲೆವೆಲ್‌ನಲ್ಲಿ ಎಲ್ಲಾ ಅಭಿವೃದ್ಧಿ ಕೆಲಸಗಳನ್ನು ಮಾಡಬೇಕು. ಮುಖ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಮತ್ತು ಪಟ್ಟಣಗಳಲ್ಲೂ ಮಾಡಬೇಕು ಎನ್ನುವ ಉದ್ದೇಶ ಸಣ್ಣ ಗ್ರಾಮಗಳನ್ನು ನಾವು ಮಾಡುತ್ತಿದ್ದೇವೆ. That is the spirit behind it.

ಮತ್ತೊಂದು ಕಾರಣವೆಂದರೆ, ತಾವೂ ನೋಡಿದ್ದೀರಿ, ಒಂದು ಸಣ್ಣ ಗ್ರಾಮ ಮತ್ತು ಒಂದು ದೊಡ್ಡ ಗ್ರಾಮವಿದ್ದರೆ ಏನಾಗುತ್ತದೆ ಎಂದರೆ ದೊಡ್ಡ ಗ್ರಾಮದಲ್ಲಿ ಹೆಚ್ಚು ಜನ ಸದಸ್ಯರಿರುತ್ತಾರೆ. ಹಿಂದೆ ಮಂಡಲ ಪಂಚಾಯಿತಿಯನ್ನು ಮಾಡಿದಾಗ ನಾವು ನೋಡಿದ್ದೇವೆ, ದೊಡ್ಡ ಗ್ರಾಮದಲ್ಲಿ ಒಂದು ಸಾಧಾರಣ ಮಟ್ಟದ ಮಿನಿ ಪಾಳೇಗಾರನಿದ್ದು ಅವನೇ ಅಲ್ಲಿ ಆಳುವುದು. ಸಣ್ಣ ಗ್ರಾಮದವನು ಪಂಚಾಯಿತಿ ಅಧ್ಯಕ್ಷನಾಗಲು ಸಾಧ್ಯವೇ ಇಲ್ಲ. ಕನಿಷ್ಟ ಉಪಾಧ್ಯಕ್ಷನಾಗಲೂ ಸಾಧ್ಯವಿಲ್ಲ. ಪರಿಸ್ಥಿತಿ ಅಲ್ಲಿಗೆ ಬರುತ್ತದೆ. ದೊಡ್ಡ ಮೀನು ಸಣ್ಣ ಮೀನನ್ನು ತಿಂದುಬಿಡುತ್ತದೆ. ಗ್ರಾಮಸಭೆಗಳಿಗೆ ಅಧಿಕಾರ ವಿಕೇಂದ್ರೀಕರಣ ಮಾಡಿದಂಥ ಸಂದರ್ಭದಲ್ಲಿ ನಾವು ಎರಡೂ ಕಾನ್ಸೆಪ್ಟನ್ನು ಇಂಟ್ರೊಡ್ಯೂಸ್ ಮಾಡಿದ್ದೇವೆ. ಮೊದಲನೆಯದು ಟೆರಿಟೋರಿಯಲಿ ಆರ್ ಪೊಲಿಟಿಕಲಿ, ಅಧಿಕಾರ ಹಂಚಿ ಹೋಗಬೇಕು ಮತ್ತು ಅದು ಸಣ್ಣ ಗ್ರಾಮಗಳಿಗೆ ಹೋಗಬೇಕು. ಎರಡನೆಯದು, ಸಾಮಾಜಿಕವಾಗಿ ಅತ್ಯಂತ ದುರ್ಬಲವಾದ ವರ್ಗಗಳಿಗೆ ಅಧಿಕಾರ ಮುಟ್ಟಬೇಕು ಎನ್ನುವುದು. ಈ ಎರಡು ಉದ್ದೇಶಗಳಿಂದ, ಒಂದು ಟೆರಿಟೋರಿಯಲ್ ಮತ್ತೆ ಇನ್ನೊಂದು ಸೋಷಿಯಲ್. ಆಬ್ಜೆಕ್ಟೀವ್ ಏನಿತ್ತು ಎಂದರೆ, to have social engineering through Grama Panchayat Act, not merely structuring the administration. We must learn these are the days where you have to socially restructure this entire political system. Otherwise, the political system will not percolate to the bottom level of people who are socially, economically and politically backward.

ಪೊಲಿಟಿಕಲ್ ಬ್ಯಾಕ್‌ವರ್ಡ್ ಎಂದು ಏಕೆ ಹೇಳುತ್ತಿದ್ದೇನೆಂದರೆ, ತಮಗೂ ಗೊತ್ತಿದೆ, ಕೆಲವು ಗ್ರಾಮಗಳಲ್ಲಿ ಪೊಲಿಟಿಕಲ್ ಪವರ್ ಕೆಲವು ಮನೆಗಳಲ್ಲಿ ಕೇಂದ್ರೀಕೃತವಾಗಿರುತ್ತದೆ. To balance the social forces, to balance these political forces, this small micro level administration was introduced. ಕೆಲವು ಏರಿಯಾಗಳಲ್ಲಿ ರಾಜಕೀಯವಾಗಿ ಅದು ಆಗಿರುತ್ತದೆ. It is to balance these social forces and political forces, this small micro-level village administration was introduced.

ಏಕೆ ಸಕ್ಸಸ್‌ಫುಲ್ ಆಗುವುದಿಲ್ಲ? ತಮ್ಮ ಮಂಡಲ್ ಪಂಚಾಯಿತಿಯಲ್ಲಿ ಯಾವ ಸೆಕ್ರೆಟರಿ ಇರುತ್ತಾನೋ ಅವನೇ ಈ ಗ್ರಾಮಪಂಚಾಯಿತಿಯಲ್ಲಿ ಸೆಕ್ರೆಟರಿ ಆಗಿರುತ್ತಾನೆ.

ಅವನನ್ನು ಏನಾದರೂ ಸರ್ಕಾರದ ಕಡೆಯಿಂದ ತಹಶೀಲ್ದಾರ್ ಆಗಿ ಮಾಡುತ್ತೀರಾ ಅಥವಾ ವಯಬಲ್ ಯೂನಿಟ್ ಎಂದು ಹೇಳಿ ಇವನನ್ನು ಡೆಪ್ಯುಟಿ ತಹಶೀಲ್ದಾರನ್ನಾಗಿ ಮಾಡುತ್ತೀರಾ? ಅಡ್ಮಿನಿಸ್ಟ್ರೇಟಿವ್ ಲೆವೆಲ್‌ನಲ್ಲಿ ಮಂಡಲ ಪಂಚಾಯತ್‌ನಲ್ಲಿ ಕೂಡ ಅದೇ ಸೆಕ್ರೆಟರಿ ಇರುತ್ತಾನೆ. ಹಿಂದೆ ಮಂಡಲ್ ಪಂಚಾಯತ್ ಕೂಡ ಇತ್ತು. ಆದರೆ ವ್ಯತ್ಯಾಸ ಇಲ್ಲ. ಹಿಂದೆ ಮಂಡಲ್ ಪಂಚಾಯತ್ ಆಗತಕ್ಕಂಥ ಏನು ಅನಾಹುತಗಳು ಇವೆ, ಸರ್ವಾಧಿಕಾರ ಏನು ಇತ್ತು, ಆ ಫ್ಯೂಡಲಿಸಂ ಒಡೆದು ಹಾಕತಕ್ಕಂಥ ಪ್ರವೃತ್ತಿಯನ್ನು ನಮ್ಮ ಅಧಿಕಾರದ ಅವಧಿಯಲ್ಲಿ ಉದ್ದೇಶಪೂರ್ವಕವಾಗಿ ಗ್ರಾಮಪಂಚಾಯತ್ ಆ್ಯಕ್ಟ್‌ನಲ್ಲಿ ಮಾಡಿದ್ದೇವೆ. Consciously we have done it, because that feudal system should go.

ಅಸೆಂಬ್ಲಿ ಚುನಾವಣೆ ಬರುವಾಗ ಅಥವಾ ಪಾರ್ಲಿಮೆಂಟ್ ಚುನಾವಣೆ ಬರುವಾಗ ಅಥವಾ ಒಂದು ಜಿಲ್ಲಾ ಬೋರ್ಡ್‌ಗೆ ಚುನಾವಣೆ ಬರುವಾಗ ಏನಾಗುತ್ತಿತ್ತು? ಯಾರಾದರೂ ಒಬ್ಬ ಮುಖಂಡ ಗ್ರಾಮಪಂಚಾಯಿತಿಯ ಅಧ್ಯಕ್ಷ ಅವನ ಮನೆಗೆ ಹೋಗಿ ಚಹಾ ಕೂಟ ಮಾಡಿಕೊಂಡು ಬಂದರೆ ಅಲ್ಲಿ ಚುನಾವಣೆ ಆಗಿಹೋಗಿರುವುದು. ಈಗ we have to reach out to the voters. ಅಫ್‌ಕೋರ್ಸ್ ಅದೂ ಕೂಡ ಅಬ್ಯೂಸ್ ಆಗುತ್ತಾ ಇದೆ. That is a different matter. Liquor, money ಇದೆಲ್ಲಾ ಪ್ರಲೋಭನೆಗಳು ಬಂದುಬಿಟ್ಟಿದೆ. ಆದರೆ one thing has happened. Individually he has been empowered. Politically he has been empowered, economically he has been empowered and socially he has been enpowered.

ಬೇಕಾದರೆ ತಾವು ಒಂದು ಅಧ್ಯಯನ ನಡೆಸಿ. ಏಕೆಂದರೆ ಇಂಥ ಬಹಳ ಪ್ರಾಮುಖ್ಯವಾದಂಥ ಪೊಲಿಟಿಕೋ ಸೋಷಿಯಲ್ ಎಕನಾಮಿಕ್ ಮೆಷರ್ ಇದನ್ನು ಬದಲಾವಣೆ ಮಾಡುವಾಗ ಒಂದು ಅಧ್ಯಯನ ಮಾಡಬೇಕು particularly when you are touching the sensitive area of administration, we did that survey. We conducted a workship at every taluk level and every district level covering a cross-section of backward classes, minorities and women.

ಮಹಿಳೆಯರು ಸಿಗುವುದೇ ಇಲ್ಲವೆಂದು ಹೇಳಿದರು. Ultimately not 1/3rd, but 49% of the women got elected for grama panchayats in Karnataka. It is a record in the country which never happened anywhere.

ಅಂದರೆ ಮೀಸಲಾತಿ ಏನುಕೊಟ್ಟಿದ್ದೇವೆ ಅದಕ್ಕಿಂತಲೂ ಹೆಚ್ಚಿನ ದಾಮಾಷಾ women could be elected only in Karnataka, no where else. ತಾವು ಅಧ್ಯಯನ ಮಾಡಬೇಕು ಅಧ್ಯಕ್ಷರೆ, ಅವನು ವಿದ್ಯಾವಂತನಲ್ಲ ಎಂದು ನಮ್ಮ ಅನುಭವ ಇರಬಹುದು. ಮೊದಲ ಪಾರ್ಲಿಮೆಂಟ್ ಕಾನ್ಸ್ಟಿಟ್ಯೂಟ್ ಆಗುವಾಗ ಎಷ್ಟು ಅವಿದ್ಯಾವಂತ ಎಂ.ಪಿ.ಗಳು ಇದ್ದರು ಎನ್ನುವುದು ಗೊತ್ತಿರಬಹುದು.

Whether our democracy was shaken at that time? Rather, it is now which is shaken because of the more literacy.

MR. SPEAKER : I always speak in all the meetings the Parliament of 1952 and 57 had just 8 post-graduates and about 22 graduates. Large number of them were matrics. Considerable number of them were below matric. Now 80% of them are graduates and a few of them are doctorates and they have gifted us with the present Lok Subha.

ಶ್ರೀ ಎಂ. ವೀರಪ್ಪ ಮೊಯಿಲಿ : ಆದ್ದರಿಂದ ಈ ದೇಶದ ಒಂದು ರಾಜಕೀಯ ಪ್ರಯೋಗ ಈ 50-52 ವರ್ಷಗಳಲ್ಲಿ, ಅವರ ಒಂದು ಅನುಭವವನ್ನಾದರೂ ಸಂಬಂಧಪಟ್ಟ ಸಚಿವರು ನೋಡಬೇಕಿತ್ತು. ಸನ್ಮಾನ್ಯ ಅಧ್ಯಕ್ಷರು ಇವತ್ತು ಏನು ಹೇಳಿದ್ದಾರೆ these are all experiences which we have in a democratic set up. An experimentation.

ಅದರ ಪ್ರಕಾರ ಇವತ್ತು ಇವರು ಅವಿದ್ಯಾವಂತರು, ಇವರು ದುರ್ಬಲರು, ಇವರು ಶೆಡ್ಯೂಲ್ಡ್ ಕಾಸ್ಟ್‌ನವರು, ಇವರನ್ನು ಯಾರಾದರೂ ಅಧಿಕಾರಿಗಳು ಇನ್‌ಫ್ಲ್ಯುಯೆನ್ಸ್ ಮಾಡಬಹುದು I tell you the literate ಐ.ಎ.ಎಸ್. ಅಧಿಕಾರಿಗಳು ಯಾವ ತರಹ ಒಪೀನಿಯನ್‌ಗಳನ್ನು ಕೊಡುತ್ತಾರೆ ಯಾವ ತರಹ ಅಡ್ಮಿನಿಸ್ಟ್ರೇಷನ್ಸ್ ಮಾಡುತ್ತಾರೆ ಎನ್ನುವುದನ್ನು ನಾವು ಇಲ್ಲಿ ನೋಡುತ್ತೇವೆ. An illeterate fellow can give you better opinion than these people i.e. these top elites ಆದ್ದರಿಂದ ಇವತ್ತು ಈ ಬ್ರಾಂಡ್‌ನ್ನು ಮಾಡಿ ಇಲ್‌ಲಿಟರೇಟ್ ಪೀಪಲ್, ಸೋಷಿಯಲಿ ಬ್ಯಾಕ್ ವಾರ್ಡ್ ಕ್ಲಾಸ್, ಶೆಡ್ಯೂಲ್ಡ್ ಕಾಸ್ಟ್ ಇದ್ದಾರೆ ಅವರು, ಅವರಿಂದ ಡಿಸಿಷನ್ ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ. They are easily influenced. It is no more available to you. ಬಹಳ ಬದಲಾವಣೆ, ಬಹಳ ಅವೇಕನಿಂಗ್ ಆಗಿದೆ. Majority of the women who have been elected may be from the scheuled caste, scheduled tribes, may be from backward classes or may be from the other general category, they have made themselves as the best Panchayat Chairmen. I vouch-safe for it.

ನಾನು ನೋಡಿದ್ದೇನೆ ಅಷ್ಟು ಪ್ರಾಮಾಣಿಕತೆಯಿಂದ ಅವರು ಇದ್ದಾರೆ. Majority of the backward classes, scheduled castes and scheduled tribes, who have been elected, have been the most sincere Panchayat Chairmen. They have done very well.

ಏಕೆಂದರೆ ಗ್ರಾಸ್‌ರೂಟ್ ಲೆವೆಲ್‌ನಲ್ಲಿ ಕೂಡ ನಾವು ಸ್ಪಂದಿಸುತ್ತೇವೆ. ಯಾವ ರೀತಿಯಲ್ಲಿ ಗ್ರಾಮಪಂಚಾಯಿತಿಗಳು ನಡೆಯುತ್ತಿವೆ ಎಂದು ನಾವು ನೋಡುತ್ತಿದ್ದೇವೆ. ಆದ್ದರಿಂದ ನಾವು ಇವತ್ತು ದೊಡ್ಡ ಪಂಚಾಯಿತಿಗಳನ್ನು ಮಾಡಿ ಮಿನಿ ಪಾಳೇಗಾರರ ಕೈಗೆ ಅಧಿಕಾರವನ್ನು ಕೊಡತಕ್ಕಂಥ ಸಂಚು ಸನ್ನಾಹ ನಡೆಯುತ್ತಿದೆ. ಇದನ್ನು ಸರ್ಕಾರ ಮರೆಯಬಾರದು. ಈಗಲೂ ಕೂಡ ಸಮಯ ಮಿಂಚಿಲ್ಲ. ಏಕೆಂದರೆ ಹಿಂದೆ ಗ್ರಾಮ ಪಂಚಾಯಿತಿ ಇತ್ತು. ಮಂಡಲ ಪಂಚಾಯಿತಿಗಳು ಯಾವ ತರಹ ಕೆಲಸ ಮಾಡುತ್ತವೆ ಎಂದು ನಾವು ನೋಡಿದ್ದೇವೆ. ಹಿಂದೆ ಮಂಡಲ ಪಂಚಾಯತಿಗಳು ಹೇಗೆ ಕೆಲಸ

ಮಾಡುತ್ತಿದ್ದವು ಈಗಿನ ನಾವು ಮಾಡಿದಂಥ ಗ್ರಾಮಪಂಚಾಯತಿಗಳು ಯಾವ ರೀತಿಯಲ್ಲಿ ಕೆಲಸ ಮಾಡುತ್ತಿತ್ತು ಎನ್ನುವುದನ್ನು ದಯಮಾಡಿ ಅಧ್ಯಯನ ಮಾಡಬೇಕು. ಆ ಅಧ್ಯಯನ ಮಾಡಿದ ಮೇಲೆ ತಾವು ಒಂದು ನಿರ್ಧಾರಕ್ಕೆ ಬಂದು ಈ ಒಂದು ಮಸೂದೆಯನ್ನು ಸದನಕ್ಕೆ ತಂದಿದ್ದರೆ ನಾವು ಖಂಡಿತವಾಗಿಯೂ ಕೂಡ ಇದು ಬರೀ ಅಧ್ಯಯನ, ರಾಜಕೀಯವಾದಂಥ ಅಧ್ಯಯನ ಅಲ್ಲ, ಸೋಷಿಯೋ ಎಕಾನಮಿಕ್ ಪೊಲಿಟಿಕಲ್ ಅಧ್ಯಯನ ಸರ್ವೆ ಮಾಡಿ ಲೆಜಿಸ್ಲೇಷನ್ ಅನ್ನು ತಂದಿದ್ದರೆ ಬಹುಶಃ ನಾವೆಲ್ಲಾ ಒಪ್ಪಿಕೊಳ್ಳುತ್ತಿದ್ದೆವು. ಆದರೆ ಆ ತರಹದ ಯಾವ ಆಧಾರವೂ ತಮ್ಮಲ್ಲಿ ಇಲ್ಲ. ಬರೀ ಪೊಲಿಟಿಕಲ್ ಸ್ಟೇಟ್‌ಮೆಂಟ್, ಇದು ಅಸಮರ್ಪಕವಾಗಿದೆ, administration is not viable ಎನ್ನುತ್ತೀರಿ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ 1985ವರೆಗೆ ಯಾವ ಗ್ರಾಮಪಂಚಾಯತ್ ವ್ಯವಸ್ಥೆ ಇತ್ತು, was it not a successful experiment? Was it bad? If that was bad, this is also bad. Democracy is only at the grass- root level. Higher it goes democracy evaporates. That, we must understand. Evaporation level, higher you go, the democracy evaporates. Am I not correct? Do you think that in the Assembly democracy springs out? In the parliament, democracy springs out? The original spring of the democracy untainted the virgin, unpolluted, is at the grassroot level. Even now the democratic fibre ಇವತ್ತೂ ಕೂಡ ಜೀವಂತ ಆಗಿದ್ದರೆ ಹಳ್ಳಿಯಲ್ಲಿರತಕ್ಕಂಥ ಡೆಮಾಕ್ರಸಿ ಅಂಶ ನಮ್ಮಲ್ಲಿ ಇಲ್ಲ. We must say that In the name of viability don't bring out feudalism ; don't bring out mini-colonialism. ಒಂದು ರೀತಿಯ ಜಾತಿಯ ವಸಾಹಾತುಶಾಹಿ ಜಾತೀಯ ವಸಾಹಾತುಶಾಹಿ ಇರಿಟೇಟ್ ವಸಾಹಾತುಶಾಹಿ ಸೂಡೋ ವಸಹಾತುಶಾಹಿ ಗ್ರಾಮ ಗ್ರಾಮಗಳಲ್ಲಿ ಇದೆ. Caste conflicts, caste dominance ಇವತ್ತು ಹೆಚ್ಚತಕ್ಕಂಥ ಕಾಲದಲ್ಲಿ ಅದನ್ನು ಬ್ರೇಕ್ ಮಾಡತಕ್ಕಂಥ ಒಂದು ವ್ಯವಸ್ಥೆ ಇವತ್ತು ಕ್ಯಾಸ್ಟ್ ಬ್ಯಾರಿಯರ್ ಅನ್ನು ಒಡೆಯತಕ್ಕಂಥ ಒಂದು ವ್ಯವಸ್ಥೆ ಕರ್ನಾಟಕ ರಾಜ್ಯದಲ್ಲಿ ಇದ್ದರೆ ಅದು ಗ್ರಾಮಪಂಚಾಯತ್ ವ್ಯವಸ್ಥೆ ಆಗಿದೆ. we are going to undo it. With all seriousness and concern, with all honesty at my command, I am telling you this ; if at all, naturally that would have gradually demolished at least the casteism ; the colonialism which is created by this caste system and the feudalism which is created by this caste system at that level. ಆದ್ದರಿಂದ ಇವತ್ತು ಇದನ್ನು ವಿಮುಖಿಗೊಳಿಸಬೇಕು. ವಯಾಬಿಲಿಟಿ ಬೇಕಾದರೆ ಹಣಕಾಸಿನ ಸಂಪನ್ಮೂಲದ ವ್ಯವಸ್ಥೆಗೆ ಅದಕ್ಕಾಗಿ ಫೈನಾನ್ಸ್ ಕಮಿಷನ್ ಮಾಡಬೇಕೆಂದು ಇದೆ. ಅವರಿಗೆ ರೆಫರೆನ್ಸ್ ಮಾಡಿ how you make the present village unit as more viable. ದೊಡ್ಡದಾದ ಕೂಡಲೇ ಅದು ವಯಾಬಲ್ ಆಗುವುದಿಲ್ಲ. ಇದರ ಹಾಗೆ ತಾಲ್ಲೂಕು ಪಂಚಾಯತಿಗಳೂ ಕೂಡ ವಯಾಬಲ್ ಆಗದೇ ಇರಬಹುದು. ಡಿಸ್ಟ್ರಿಕ್ಟ್ ಯೂನಿಟ್‌ಗಳು ವಯಾಬಲ್ ಆಗಿದೆಯೇ? ಅಲ್ಲಿ ಯಾವ ಕಾರ್ಯಕ್ರಮಗಳು ಆಗುತ್ತಿವೆ? The idea was, of course, it should have been done gradually by the Finance Commission. ಫೈನಾನ್ಸ್ ಕಮಿಷನ್ ಕೊಟ್ಟಿರುವಂಥ ಯಾವ ರೆಕಮಂಡೇಷನನ್ನು ತಾವು ಇಂಪ್ಲಿಮೆಂಟ್ ಮಾಡಿದ್ದೀರಿ?

6.50 ಪಿ. ಎಂ.

ಇವತ್ತು ಫೈನಾನ್ಸ್ ಕಮೀಷನ್ ಗ್ರಾಮಪಂಚಾಯತಿಗಳ ಸಂಪನ್ಮೂಲಗಳನ್ನು ಮತ್ತು ಆಡಳಿತವನ್ನು ಬಲಗೊಳಿಸುವುದಕ್ಕೆ to make them viable, ನೀವು ಯಾವ ಶಕ್ತಿ ಕೊಟ್ಟಿದ್ದೀರಿ? you have disabled them. ಫೈನಾನ್ಸ್ ಕಮೀಷನ್‌ಗೆ ಕೊಡಬೇಕಾದ ಗ್ರಾಂಟ್‌ನಲ್ಲಿ ಕಳೆದ ವರ್ಷ ಒಂದು ನಯಾಪೈಸೆ ಕೂಡ ಇಂಪ್ಲಿಮೆಂಟ್ ಮಾಡಿಲ್ಲ ; because you have not given that margin money. ಪರ್‌ಕ್ಯಾಪಿಟಾ ಹಣ ಗ್ರಾಮ ಪಂಚಾಯತಿಗಳಿಗೆ ಏನು ಕೊಡಬೇಕಾಗಿತ್ತು. ಅದರಲ್ಲಿ 25 ಸಾವಿರ ರೂ ಮಾತ್ರ ಕೊಟ್ಟಿದ್ದು, ಉಳಿದ 75 ಸಾವಿರ ರೂಪಾಯಿಗಳನ್ನು ಕೆ. ಇ. ಬಿ. ಗೆ ಅಡ್ಜಸ್ಟ್ ಮಾಡುವುದಕ್ಕೆ ಕೊಟ್ಟು ಒಂದು ನಯಾಪೈಸೆಯನ್ನು ಗ್ರಾಮಪಂಚಾಯತಿಗಳಿಗೆ ಕೊಡದೆ how can they become viable? You disarm them, disable them and then say "They are not viable" ಎಂದು ಹೇಳಿದ್ದೀರಿ. ಇವತ್ತು ಗ್ರಾಮ ಪಂಚಾಯತಿಗೆ ಯಾವ ಕಾರ್ಯಕ್ರಮವನ್ನೂ ತಾವು ಕೊಟ್ಟಿಲ್ಲ. ನೇರವಾದಂತಹ ಕಾರ್ಯಕ್ರಮವನ್ನು ಗ್ರಾಮ ಪಂಚಾಯಿತಿಗೆ ಕೊಡಿ, ಗ್ರಾಮ ಸಭೆಗಳಿಗೆ ಬೇಕಾದಂತಹ ಅಧಿಕಾರವನ್ನು ಕೊಡಿ. ವಯಬಲ್ ಆಗುವುದಿಲ್ಲವೆಂದು ಒಂದು ಎಕ್ಸ್‌ಪೆರಿಮೆಂಟು ಮಾಡಿದ್ದೀರಾ? ಗ್ರಾಮ ಪಂಚಾಯತಿಗಳಿಗೆ ಆ ಶಕ್ತಿಯನ್ನು ಕೊಟ್ಟಿದ್ದೀರಾ? ನಿಮ್ಮ ಫೈನಾನ್ಸ್ ಕಮೀಷನ್ ಯಾವ ಉದ್ದೇಶಕ್ಕಾಗಿ ರೂಪಿತವಾಗಿದೆ ಆ ಉದ್ದೇಶದ ಒಂದು ಅಂಶವನ್ನಾದರೂ ಕೂಡ ಗ್ರಾಮಪಂಚಾಯತಿಗಳ ಮಟ್ಟದಲ್ಲಿ ತಾವು ಅನುಷ್ಠಾನ ಮಾಡುವುದಕ್ಕೆ ಪ್ರಯತ್ನ ಮಾಡಿದ್ದೀರಾ? ತಾವು ಯಾವುದೇ ರೀತಿಯ ಪ್ರಯತ್ನವನ್ನೂ ಕೂಡ ಮಾಡಿಲ್ಲ. ಇದು ರಾಜಕೀಯ ವೈಭವೀಕರಣ ಆಗಬಾರದು. ಈ ಆಡಳಿತ ವ್ಯವಸ್ಥೆಗಳು ಇವತ್ತು ಆಡಳಿತ ವೈಭವೀಕರಣಕ್ಕೆ ಅಥವಾ ನಮ್ಮ ಪ್ರತಿಷ್ಠೆಯ ವೈಭವೀಕರಣಕ್ಕೆ ಈ ಪಂಚಾಯತ್ ಸಿಸ್ಟಮ್‌ಗಳನ್ನು ತಾವು ದಯಮಾಡಿ ಉಪಯೋಗ ಮಾಡಬೇಡಿ. That is what you are on charge. I am charging that you are doing that. Don't do that. ಅಧ್ಯಯನ ಮಾಡಿ ಹೇಳಿ. Come out with a study, and then say according to this, this is not workable, we are changing it, we are modifying it. ಆದ್ದರಿಂದ ನಿಮ್ಮ ಉದ್ದೇಶ ಏನಿದೆ, ಅದು ಖಂಡಿತವಾಗಿ ವಯಬಲ್ ಆಗುವುದಿಲ್ಲ ಮತ್ತು ಯಾವ social engineering, a silent revolution has been ushered in, ತಮ್ಮ ಅಧ್ಯಕ್ಷತೆಯಲ್ಲಿ ಇದನ್ನು ಒಂದು ವೇಳೆ ಪಾಸ್ ಮಾಡಿದರೆ ಈ ದಿನ ಕಪ್ಪು ದಿನವಾಗುತ್ತದೆ. ಇವತ್ತು ಗ್ರಾಮದ ಆಡಳಿತ ವ್ಯವಸ್ಥೆಗೆ ಸೋಷಿಯಲ್ ಇಂಜಿನಿಯರಿಂಗ್ ಮಾಡಬೇಕೆಂಬ ಒಂದು ಸೈಲೆಂಟ್ ರೆವಲ್ಯೂಷನ್‌ಗೆ ಇತಿಶ್ರೀ ಹಾಡತಕ್ಕಂಥ ಒಂದು ಪ್ರಮೇಯ ಈ ಸದನದ ವೇದಿಕೆಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಆಗುತ್ತದೆಯಲ್ಲಾ ಎಂಬ ಒಂದು ವ್ಯಥೆ ಇವತ್ತು ನನಗೆ ಆಗುತ್ತಿದೆ. ದಯಮಾಡಿ ಇದನ್ನು ಬದಲಾವಣೆ ಮಾಡಬೇಕು. ಇವತ್ತು ಅಡ್ಮಿನಿಸ್ಟ್ರೇಟರ್ ನೇಮಕಾತಿ ಬಗ್ಗೆ ತಾವು ಹೇಳಿದ್ದೀರಿ. ಈ ಒಂದು ಕಾಯಿದೆ ನನಗೆ ಗೊತ್ತಿದೆ. ಇದು ಪಂಚಾಯತಿಯ ಡ್ಯೂರೇಷನ್‌ನನ್ನು ಎಕ್ಸ್‌ಟೆಂಡ್ ಮಾಡತಕ್ಕಂಥ ಕಾಯಿದೆ ಅಲ್ಲ. ಇವತ್ತು ಇದು ಹೈಕೋರ್ಟ್ ಸುಪ್ರಿಂಕೋರ್ಟ್‌ನಲ್ಲಿದೆ It pertains to the main issue. It is limited to this legislative power of the State, ulti-

mately. ನಾವು ಒಂದು ಕಡೆ ಡ್ಯೂರೇಶನ್‌ಗೋಸ್ಕರ ವಾದ ಮಾಡಬಹುದು, ಚುನಾವಣೆಯನ್ನು ಮುಂದೂಡಲಿಕ್ಕೆ ಮಾಡುತ್ತಾರೆಂದು ಆಪಾದನೆಯನ್ನು ನಾವು ಮಾಡಬಹುದು. ರೀ-ಸ್ಟ್ರಕ್ಚರ್ ಮಾಡತಕ್ಕಂಥ ಉದ್ದೇಶದಿಂದ ಈ ಲೆಜಿಸ್ಲೇಷನ್ ತಂದಿದ್ದೇವೆಂದು ತಾವು ಹೇಳುತ್ತಿದ್ದೀರಿ. you have the competence. ಇದು ಹೈಕೋರ್ಟ್, ಸುಪ್ರೀಂ ಕೋರ್ಟ್‌ಗೆ ಹೋಗಿ ಕಾಂಪಿಟೆನ್ಸ್ ವಿಚಾರದ ಬಗ್ಗೆ ಪ್ರಶ್ನೆ ಮಾಡತಕ್ಕಂಥದ್ದನ್ನು ನಾವು ಮಾಡುತ್ತಿಲ್ಲ. I will say that you are fully competent to make this legislation. Yes, it is one compartment. Another compartment is, ಈ ಚುನಾವಣೆಗಳನ್ನು ನಡೆಸುವುದಕ್ಕೆ ಇವತ್ತು ನಮ್ಮ ಮುಂದೆ ಕಾನ್‌ಸ್ಟಿಟ್ಯೂಷನಲ್ ಅಮೆಂಡ್‌ಮೆಂಟ್ ಇದೆ. ಇದರ ಪ್ರಕಾರ ಚುನಾವಣೆಯನ್ನು 5 ವರ್ಷಕ್ಕಿಂತ ಹೆಚ್ಚು ಅವಧಿಯವರೆಗೆ ಮುಂದುವರಿಸುವುದಕ್ಕೆ ಆಗುತ್ತದೆಯೇ? ಇದು ಆಗುವುದಿಲ್ಲ. The simple question is, you don't have that kind of power. ನಾವು Article 243(ಇ)ಯನ್ನು ಈಗಾಗಲೇ ಸಾಕಷ್ಟು ಸಮಯ ಉಚ್ಚರಿಸಿದ್ದೇವೆ, at the cost of repetition, one sentence. "Every Panchayat unless sooner dissolved under any law for the time being in force, shall continue or five years from the date appointed for its first meeting and no longer" For this, there is no Supreme Court ruling. There is no verdict about Article 243-E from the High Court, or from the Suprme Court to say that" you can continue the term" ಎಂದು ಹೇಳುವುದಕ್ಕೆ ಯಾವ ರೀತಿಯ ವರ್ಡಿಂಗ್ ಸುಪ್ರಿಂ ಕೋರ್ಟ್ ಮತ್ತು ಹೈಕೋರ್ಟ್‌ನಿಂದ ಕೂಡ ಇಲ್ಲ. ಇದನ್ನು whatever you do it, it is a constitutional crisis. ಇದು ಸುಪ್ರೀಂ ಕೋರ್ಟ್ ರೂಲಿಂಗ್‌ನಲ್ಲಿದೆ. ಇದನ್ನು ಮುಂದುವರಿಸುವುದಕ್ಕೆ ಖಂಡಿತವಾಗಿ ಸಾಧ್ಯವಿಲ್ಲ ಎಂಬ ಬಗ್ಗೆ ಸುಪ್ರಿಂ ಕೋರ್ಟ್ ರೂಲಿಂಗ್‌ನಲ್ಲಿ ಕೂಡ ಇದೆ. ಇದನ್ನು ಮುಂದುವರಿಸುವುದಕ್ಕೆ ಖಂಡಿತವಾಗಿ ಸಾಧ್ಯವಾಗುವುದಿಲ್ಲ. ರೀ-ಸ್ಟ್ರಕ್ಚರ್ ಆಗಬಹುದು ಅಥವಾ ಮತ್ತೊಂದು ಆಗುತ್ತದೆಂದು ನಾವು ಅಡ್ಮಿನಿಸ್ಟ್ರೇಟರ್‌ನ್ನು ನೇಮಕ ಮಾಡುತ್ತೇವೆಂದು ಹೇಳಬಹುದು. ಹಿಂದೆ ಇದ್ದಂಥ ಕರ್ನಾಟಕ ಪಂಚಾಯತ್ ಆಕ್ಟ್ ಸೆಕ್ಷನ್ 8ರ ಪ್ರಕಾರ ಅಡ್ಮಿನಿಸ್ಟ್ರೇಟರನ್ನು ಮಾಡತಕ್ಕಂಥ ಅಧಿಕಾರ ಹಿಂದಿನ ಕಾನೂನಿನಲ್ಲಿದೆ. ಆದರೆ ಇವರು ಅದನ್ನು ಅಮೆಂಡ್‌ಮೆಂಟ್ ಮಾಡಿಲ್ಲ. "Appointment of an Administrative Committee or Administrator on failure to elect Members of Grama Panchayat." This is only a transitary provision. It is not substantative provision. It is not to take away the provisions of Article 243-E. This should be made very clear. Why they have not provided any transitory provision is because you have no right at all to contiune.

ಇಂಥ ಕಮಿಟಿಗಳನ್ನು ಯಾವರೀತಿ ಮಾಡಬಹುದೆಂದರೆ, ಗ್ರೂಪ್ ಆಫ್ ಪಂಚಾಯತಿಗಳು ಯಾವುದಾದರೂ ಒಂದು ಕಾರಣದಿಂದ ಡಿಸಾಲ್ವ್ ಆದಾಗ ಕೆಲವು ಪಂಚಾಯತ್‌ಗಳಿಗೆ ಪ್ರಥಮ ಚುನಾವಣೆಗಳು ಮಾಡದೇ ಇದ್ದಾಗ the provision is only for that, and for such an arrangement, it is constitutionally sound. Perhaps the provision which

you have now made for an Administrator is not in consonance with the Constitution. ಡ್ಯೂರೇಶನ್ ಆಗಿದೆ, ಏನಾದರೂ ಮಾಡಿ ಆಡಳಿತ ನಡೆಸಬೇಕು, ಆದ್ದರಿಂದ ನಾವು ಏನು ಮಾಡಬೇಕೆಂದು ತಾವು ಹೇಳಬಹುದು, ಆದರೆ ನೀವು ಏನೂ ಮಾಡುವುದಕ್ಕಾಗುವುದಿಲ್ಲ. That is why we said, it is a constitutional crisis. The only thing is if the Governor will go by letter and spirit of the constitution, he has no other option but to dismiss this Government for having violated the mandatory provision of the Constitution of India. ಇವರಿಗೆ ಇರುವ ಅಧಿಕಾರ ಇಷ್ಟೆ. ಇದನ್ನು ಬಿಟ್ಟು ಬೇರೆ ಯಾವ ಅಧಿಕಾರ ಕೂಡ ಇವರಿಗೆ ಇಲ್ಲ. ಈವತ್ತು 243ಇ ಯನ್ನು ಇಂಟರ್‌ಪ್ರಿಟ್ ಮಾಡತಕ್ಕಂಥ ಪ್ರಾವಿಷನ್ ಅನ್ನು ಸಂವಿಧಾನಕ್ಕೆ ವಿರೋಧವಾಗಿ ನೀವು ಕಾನೂನಿನಲ್ಲಿ ಮಾಡುವುದಕ್ಕೆ ಅಧಿಕಾರ ಇಲ್ಲ. ನೀವು ಇದನ್ನು ಹೇಗೆ ಮಾಡುತ್ತೀರಿ? ಇದು ಸರಿ ಇಲ್ಲದಿದ್ದರೆ ಹೈಕೋರ್ಟ್ ಅಥವಾ ಸುಪ್ರಿಂ ಕೋರ್ಟ್‌ನಲ್ಲಿ ಚಾಲೆಂಜ್ ಮಾಡಿ ಎಂದು ರೆಡಿಯಾದ ಉತ್ತರವನ್ನು ತಾವು ಕೊಡಬಹುದು. One thing is very certain that you cannot give any life to it under any cover. ಇದೊಂದು ಬಹಳ ಮುಖ್ಯವಾದಂತಹ ವಿಚಾರವೆಂದು ಹೇಳಲಿಕ್ಕೆ ನಾನು ಅಪೇಕ್ಷೆಪಡುತ್ತೇನೆ. ಇವತ್ತು ಇವರು ಕೊಟ್ಟಂತಹ ಈ ಒಂದು ಅಮೆಂಡ್‌ಮೆಂಟ್ ಬಗ್ಗೆ ನಾವು ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕಾಗುತ್ತದೆ. Again I come back to social engineering process ಇವತ್ತು ಏನು ಮಾಡಿದ್ದೇವೆಂದರೆ, Section 5. "In Section 5 of the principal Act, - (1) in sub-section (1), for the words "every four hundred population" the words " every one thousand population" shall be substituted." 400 ಜನರಿಗೆ ಒಬ್ಬರನ್ನು ಚುನಾಯಿಸುವುದಕ್ಕೆ ಅಧಿಕಾರ ಇತ್ತು, ಈಗ ಅದು ಹೊರಟು ಹೋಗಿ, 1000 ಜನರಿಗೆ ಒಬ್ಬರನ್ನು ಎಲೆಕ್ಟ್ ಮಾಡುವ ವ್ಯವಸ್ಥೆಯನ್ನು ಮಾಡಿದ್ದೀರಿ. Second is very important, that is Section 4, sub section (4) That is very important. Rotation is also there. Section 5, sub section (4) :" Not less than one third of the seats reserved in each category for persons belonging to the scheduled Castes, Scheduled Tribes, and backward classes and of the non-reserved seats in the Grama Panchayat shall be reserved for Women. Provided that the seats reserved under sub section 2, 3 and 4 shall be allotted by rotation to different constituencies in the Panchayat area." In sub-section (4) the first proviso shall be omitted. " Provided that the seats reserved under sub-section (2) (3) (4) shall be allotted by rotation to different constituencies in the Panchayat." How is it contradictory to the Constitution of India? It is not contradictory. Reservation of the seats. This is very much in consonance with this. "Not less than one third offices of the persons in panchayats at the village or any other level shall be reserved for the scheduled castes..." ".. provided that the number of offices of the Chairpersons reserved for the Scheduled Castes, Scheduled Tribes in a Panchayat at each level in any State shall bear as clearly as may be same proportion to

the total number of such officers in the Panchayat.." " Provided further that not less than one third of the total number of officers..."... " provided also that the number of officers reserved in this clause shall be allotted by rotation to different panchayats at each level."

ಏಕೆಂದರೆ ಇವರು ಏನು ಹೇಳಿದರೆಂದರೆ 'It is not in accordance with the Constitution of India. It is under Act. 243 D last proviso. ಇವತ್ತು ಇದನ್ನು ಡಿಲೀಟ್ ಮಾಡಲಿಕ್ಕೆ ರೊಟೇಷನ್ ಎಂದು ಹೇಳಿದರೆ This will become stagnant. ಆಗ ಸೋಷಿಯಲ್ friction ಗೆ ಅವಕಾಶವಾಗುತ್ತದೆ. ಕೆಲವು ಸಲ ಏನಾಗುತ್ತದೆಂದರೆ : ಷೆಡ್ಯೂಲ್ ಕಾಸ್ಟ್ ಏರಿಯಾ ಇರುವುದಿಲ್ಲ. ಅಲ್ಲಿ ರೊಟೇಷನ್ ಷೆಡ್ಯೂಲ್ ಕಾಸ್ಟ್‌ಗೆ ಬರತ್ತದೆ. He will suffer lot of hardship ಅವರಿಗೆ ಬಹಳ ಕಷ್ಟವಾಗುತ್ತದೆ. ಕೆಲವು ಸಲ ಜನರಲ್ ಕ್ಯಟಗರಿಯವರು ಇರುತ್ತಾರೆ. ಅಲ್ಲಿ ಜನರಲ್ ಕೆಟಗರಿಯವರು ಮಾತ್ರ ಇದ್ದರೆ ಅಲ್ಲಿ ಷೆಡ್ಯೂಲ್ ಕಾಸ್ಟ್ ಜನರು ಇಲ್ಲದೇ ಇರಬಹುದು. ಅಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಜನರು ಇಲ್ಲದೇ ಇರಬಹುದು. ಆವಾಗ ಏನು ತಾಪತ್ರಯ ಬರುತ್ತದೆಂದರೆ : ರೊಟೇಷನ್ ಮಾಡದೇ ಇದ್ದರೆ ಅಲ್ಲಿ ಸಾಮಾಜಿಕವಾದಂಥ ಸಂಘರ್ಷಣೆಯಾಗುತ್ತದೆ. They will make his or her life miserable. ಇದನ್ನು ಅವಾಯಿಡ್ ಮಾಡಬೇಕೆಂದು ಹೇಳಿ ಈ ರೋಟೇಷನನ್ನು It is only to ease out. Mr. Speaker, while making a law, there is something like balancing the whole act. ಕೆಲವು ಅಭಿಪ್ರಾಯಗಳು ಕೆಲವು ಪ್ರಾದೇಶಿಕ ಭಾವನೆಗಳು ಅಥವಾ ಒಂದು ಸಮಾಜದಲ್ಲಿರತಕ್ಕಂಥ ಏರುಪೇರುಗಳು ಇಲ್ಲಿ ಸಂಘರ್ಷಣೆಗೆ ದಾರಿ ಮಾಡಿಕೊಡುವುದು ಅಲ್ಲ. ಅದಕ್ಕೆ ಕ್ಷಮಿಸಿ Mandal Panchayat was called Murder Panchayat. I don't call it. ಏಕೆಂದರೆ ಈ ಆಪಾದನೆ ಬಂದಿದೆ. ಅಥವಾ ಆ ಹಿಂದಿನ ಮಂಡಲ ಪಂಚಾಯಿತಿ ವ್ಯವಸ್ಥೆಯಲ್ಲಿ ಈ ರೀತಿಯ ಒಂದು ಚಾರ್ಜಸ್ ಇದೆ. ಅಲಿಗೇಷನ್ಸ್ ಇದೆ. I am not just telling this. It is popularly called.

ಶ್ರೀ ಎಂ. ಪಿ. ಪ್ರಕಾಶ್ : ರುಕ್ಮಿಣಿಗೆ ಪಾರಿಜಾತದ ಹೂವು ಕೊಟ್ಟಂತಹ ವಿಷಯವನ್ನು ನಾನು ಹೇಳಿಯೇ ಇಲ್ಲವಲ್ಲಾ ನಾರದ. ಇದು ನಾರದನ ಉವಾಚವಿದ್ದಂತೆ. You call Mandal Panchayat as Murder Panchayat and still say afterwards ಆ ತರಹದ ಆಪಾದನೆ ಇದೆ ಎನ್ನುವುದು You have made your point very clear. Call it a Murder Panchayat. I am prepared to answer every one of your Charge and you should be prepared to receive this also.

SRI M. VEERAPPA MOILY : I need not take lessons on such matter. No democratic institution can be called in that name.

SRI M. P. PRAKASH : If you are convinced that the Mandal Panchayat was a Murderous Panchayat, you tell so.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಎಂ. ಪಿ. ಪ್ರಕಾಶ್‌ರವರೇ ನಮಗೆ ಸ್ವಲ್ಪ ಮಾತನಾಡುವುದಕ್ಕೆ ಬಿಡಿ ಸರ್.

ಶ್ರೀ ಎಂ. ವೀರಪ್ಪ ಮೊಯ್ಲಿ : ನಾರಾಯಣಸ್ವಾಮಿಯವರೇ, ನೀವು ಆ ಮೇಲೆ ಮಾತನಾಡಿ ಅಧ್ಯಕ್ಷರೆ we must understand the sprit behind it. ಏಕೆ ಜನ ಹಾಗೆ ಕರೆಯುತ್ತಿದ್ದಾರೆ? ಯಾವ ಸಾಮಾಜಿಕ ಸಂಘರ್ಷಣೆಗಳು ಗ್ರಾಮಗಳಲ್ಲಿ ನಡೆಯುತ್ತಿವೆ? ಯಾವ ಯಾವ ರೀತಿಯಲ್ಲಿ ಇವತ್ತು ಜಾತಿ ಜಾತಿಗಳ ಸಮತೋಲನವನ್ನು ಅಥವಾ ಆ ಭಾವನೆಗಳ ಸಮತೋಲನವನ್ನು ತಾವು ಇವತ್ತು ನಿರ್ಣಯಿಸಬೇಕಾಗುತ್ತದೆ, ಅದನ್ನು ಕಾಪಾಡಿಕೊಂಡು ಹೋಗಬೇಕಾಗುತ್ತದೆ. ಈ ಭಾವನೆಗಳನ್ನು ಅರ್ಥಮಾಡಿಕೊಳ್ಳಬೇಕು. It is not my intention to call anything by name. ಆದರೆ, ಈ ಸಾಮಾಜಿಕವಾದಂಥ ಸಮತೋಲನವನ್ನು ಕಾಪಾಡಿಕೊಳ್ಳತಕ್ಕಂಥ ಕೆಲವು ಘಟನೆಗಳು ಇವೆ ಅಥವಾ ತಾವು ಯಾವ ಒಂದು ಪ್ರಕ್ರಿಯೆಯನ್ನು ಉಳಿಸಿಕೊಳ್ಳಬೇಕಾಗುತ್ತದೆ. ಇದನ್ನು ತಾವು ರೊಟೇಷನ್ ಮಾಡದಿದ್ದರೆ ಏನಾಗುತ್ತದೆಂದರೆ : ಇದು ಐದು ವರ್ಷವಾದ ಮೇಲೆ ಕೂಡ ಅದೇ ವ್ಯಕ್ತಿ ಉದಾಹರಣೆಗೆ ಅಸೆಂಬ್ಲಿ. ಅಸೆಂಬ್ಲಿ ಸೀಟ್‌ಗಳಲ್ಲಿ ಕೂಡ ರೊಟೇಷನ್ ಇದೆ. ಪಾರ್ಲಿಮೆಂಟ್ ಸೀಟ್‌ಗಳಲ್ಲಿ ಕೂಡ ರೊಟೇಷನ್ ಇದೆ. ಆದರೆ ಇವತ್ತು ಗ್ರಾಮ ಪಂಚಾಯಿತಿ ಚುನಾವಣೆಗಳಲ್ಲಿ ತಾಲ್ಲೂಕು ಪಂಚಾಯಿತಿ ಚುನಾವಣೆಗಳಲ್ಲಿ ಅಥವಾ ಜಿಲ್ಲಾ ಪಂಚಾಯಿತಿ ಚುನಾವಣೆಗಳಲ್ಲಿ ಈ ರೊಟೇಷನ್ ಇಲ್ಲವೆಂದು ಹೇಳತಕ್ಕಂಥದ್ದರಲ್ಲಿ ಯಾವ ತರ್ಕ ಇದೆ ? ಪ್ರಶ್ನೆ ಇದಕ್ಕೆ ಸೀಮಿತವಾದಂಥ ಕೆಲವು ಉದಾಹರಣೆಗಳ ವಿಚಾರಗಳನ್ನು ಹೇಳಿದ್ದೇನೆಯೇ ಹೊರತು ಅನ್ಯಥಾ ಭಾವನೆಗಳನ್ನು ತಾವು ಕೂಡ ಖಂಡಿತಾ ಇಟ್ಟುಕೊಳ್ಳಬಾರದು. ಅದನ್ನು ಇವತ್ತು ನಮ್ಮ ಕಾನ್‌ಸ್ಟಿಟ್ಯೂಷನ್‌ನಲ್ಲಿ ಈ ಮಾಂಡೇಟರಿ ಪ್ರಾವಿಜನ್ ಇರಲಿಲ್ಲ. ಕಾನ್ಸ್‌ಟಿಟ್ಯೂಟ್‌ನಲ್ಲಿ ಬ್ಯಾಕ್‌ವರ್ಡ್ ಕ್ಲಾಸಿಗೆ ಮೀಸಲಾತಿ ಕೊಡಬೇಕೆಂದು ಕಡ್ಡಾಯವೇನೂ ಇಲ್ಲ. ಏಕೆಂದರೆ ಅದರಲ್ಲಿ under Article 243 D reads : Nothing in his part shall prevent a legislature of a State from making any provision for reservation of seats in any Panchayat for offices of Chairman or of Panchayat at any level in favour of Backward classes of citizens." Our Karnataka Panchayatraj Act, was the first enactment to provide that kind of a lee in providing reservation to the backward classes in the entire country.

SRI M. P. PRAKASH : Your Party has no conviction to provide reservation for backward classes. It was very obvious. Karnataka was a forward State and therefore, it accepted the social biology that was going on. But at the Centre, your party had no conviction. When it came to women, Scheduled Castes/ scheduled Tribes, they make a provision and when it comes to backward classes, they wash away their hands. Where were you at that time and why you did not oppose it ; what prevented the Central Government to bring that amendment at that time? Kindly elucidate that.

SRI M. VEERAPPA MOILY : We have done it. Alright, ಬ್ಯಾಕ್‌ವರ್ಡ್ ಕ್ಲಾಸ್ ಬಗ್ಗೆ ಕನ್ವಿಕ್ಷನ್ ಇದ್ದ ತಮ್ಮವರೇ ಮಾನ್ಯ ಪ್ರಧಾನ ಮಂತ್ರಿಗಳಾಗಿ ದೆಹಲಿಗೆ ಹೋದರಲ್ಲಾ ತಮ್ಮ ಸರ್ಕಾರವೇ ಇತ್ತಲ್ಲಾ. you could have done it first.

SRI M. P. PRAKASH : We did it, as the Chief Minister of this state bringing reservation for the backward classes to the extent of 33% in Taluk Panchayat and Zilla Panchayat by Mr. Devegowda.

SRI M. VEERAPPA MOILY : In our Act it is very clear. 1993 Act is not amended. The Act still continues, the Karnataka Panchayatraj Act, 1993, which provided reservation, shall provide reservation for other backward classes.

SRI M. P. PRAKASH : Kindly have retrospection. What prevented the then Prime Minister Mr. Narasimha Rao to provide a reservation to the backward classes at least to that extent

ಶ್ರೀ ಎಂ. ವೀರಪ್ಪ ಮೊಯ್ಲಿ : ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಮಂಡಲ್ ಕಮೀಷನನ್ನು ಇಂಪ್ಲಿಮೆಂಟ್ ಮಾಡಲು ಯಾವುದೇ ಸಂಘರ್ಷಣೆ ಇಲ್ಲದೆ ಎಲ್ಲಾ ನ್ಯಾಷನಲ್ ಕಾನ್‌ಸೆನ್‌ಸಸ್ ತೆಗೆದುಕೊಂಡು ಸಮಾಧಾನಕರವಾಗಿ ಇಂಪ್ಲಿಮೆಂಟ್ ಮಾಡಿದ್ದು ಕಾಂಗ್ರೆಸ್ ಪಕ್ಷವೇ. ಆದರೆ ಅಲ್ಲಿ ಏನಾಯಿತು ಗೊತ್ತಾಯಿತಲ್ಲಾ ನಿಮಗೆ. ಅಲ್ಲಿ ಬೆಂಕಿ ಹಚ್ಚಿಬಿಟ್ಟರು. ಆದರೆ ಮಂಡಲ ಕಮೀಷನ್ ವರದಿಯನ್ನು ಅನುಷ್ಠಾನವಾಗಿದ್ದು ಅಲ್ಲ ಎನ್ನುವುದಕ್ಕೆ . . .

SRI M. P. PRAKASH : V. P. Singh did it.

SRI M. VEERAPPA MOILY : I agree. Let the credit go to them. But for implementing it, let the credit go to Congress. That is all.

SRI M. P. PRAKASH : Your party has a long history. To Mr. Chandrashekar after having given him the consent that they are going to support the Government unconditionally, for flimsy and trivial reasons that two constables were kept at the outgate of the former Prime Ministers house, you withdrew the support and you say that you wanted to have a social transformation. When a backward class leader like Charansingh emerges here, your party betrayed him. You do not want to go into all those things?

ಶ್ರೀ ಎಂ. ವೀರಪ್ಪ ಮೊಯ್ಲಿ : ನಾವು ನೀವು ಪಾರ್ಲಿಮೆಂಟಿಗೆ ಹೋದಾಗ ಅಲ್ಲಿ ಮಾತನಾಡೋಣ. ಏಕೆ ನಮ್ಮ ಎನರ್ಜಿಯನ್ನು ಇಲ್ಲಿ ವೇಸ್ಟ್ ಮಾಡಿಕೊಳ್ಳುವುದು ? ಅಲ್ಲಿ ಆರ್ಗ್ಯು ಮಾಡೋಣ. ಏಕೆಂದರೆ ಕೇಂದ್ರದ್ದು ಇನ್ಸಿಡೆಂಟಲಿ ಹೇಳಿದ್ದು. ಆದರೆ Karnataka State was the first State in our regime to implement the backward classes reservation of OBCs. even though it was not mandatory under this Act, under this

constitution. ಇಷ್ಟನ್ನು ಹೇಳಲಿಕ್ಕೆ ನಾನು ಅಪೇಕ್ಷೆ ಪಟ್ಟಿರುವುದೇ ಹೊರತು ಅನ್ಯಥಾ ಅಲ್ಲ. ಅಧ್ಯಕ್ಷರೆ, ಇವತ್ತು ಯಾವ ಕೆಲವು ಈ ವಿಚಾರಗಳು ಇವೆ ಮುಖ್ಯವಾಗಿ ಈ ಚುನಾವಣೆ. Nolonger you can do it ಏನು ಇವತ್ತು ನೀವು ಈ ಆಕ್ಟ್ ಮುಖಾಂತರ ಯಾವುದನ್ನು ಕಾನ್‌ಸ್ಟಿಟ್ಯೂಷನ್ ಆ ಮ್ಯಾಂಡೇಟರಿ ಕಾನ್‌ಸ್ಟಿಟ್ಯೂಷನಲ್ ಡ್ಯುರೇಷನ್ ಅನ್ನು ಇವತ್ತು circumvent ಮಾಡತಕ್ಕಂಥ ಈ ಮಸೂದೆಗೆ ಈ ಸದನದಲ್ಲಿ ಇವತ್ತು ಮಂಜೂರಾತಿ ತೆಗೆದುಕೊಳ್ಳಲು ಏನು ಪ್ರಯತ್ನವನ್ನು ಮಾಡುತ್ತಿದ್ದೀರಿ, it is totally contradictory to letter and spirit of the Act. I need not quote the Supreme Court decision. It is against the letter and spirit of the Act. If you still want to violate the letter and spirit and say we do not believe in the letter and spirit of the Constitution but we only believe in the letter of the Constitution and not the spirit of the Constitution ಎಂದು ಹೇಳಿದರೆ, ಮಾನ್ಯ ಪ್ರಕಾಶ್‌ರವರಿಗೆ ಶಕ್ತಿ ಇದೆ. ನನಗೆ ಗೊತ್ತಿದೆ. I know very well that you are not only a political man, you have cultural personality. I know him ಆ ಕಲ್ಚರಲ್ ಪರ್ಸನಾಲಿಟಿಯನ್ನು ಇಟ್ಟುಕೊಂಡು ಒಂದು ಸಾಂಸ್ಕೃತಿಕವಾದಂಥ ವ್ಯಕ್ತಿತ್ವವನ್ನು ಇಟ್ಟುಕೊಂಡಂಥ ತಾವು, ತಾತ್ವಿಕವಾಗಿ ಇಂತಹ ಒಂದು ಸಂವಿಧಾನದ ಹಿಂದೆ ಇರತಕ್ಕಂಥ ಒಂದು ಲೆಟರ್ ಅಂಡ್ ಸ್ಪಿರಿಟ್ ಏನು ಇದೆ ; ಸಾಂಸ್ಕೃತಿಕವಾದಂಥ, ಆರ್ಥಿಕವಾದಂಥ ಮತ್ತು ಸಾಮಾಜಿಕ ಹಾಗೂ ರಾಜಕೀಯವಾದಂಥ ಶಕ್ತಿ ಏನು ಇದೆ ಆ ಶಕ್ತಿಯನ್ನು ಐಸೋಲೇಟ್ ಮಾಡಿ, ಇಂತಹ ಒಂದು ಬರಡು ಕಾನೂನನ್ನು ತಾವು ಮುಂದೆ ತರಬೇಕೆಂದು ಹೇಳಿದರೆ, ಇಂತಹ ಒಂದು ಸಾಂಸ್ಕೃತಿಕವಾದಂಥ ವ್ಯಕ್ತಿತ್ವವುಳ್ಳಂಥ ತಮಗೆ ತಕ್ಕದ್ದು ಅಲ್ಲ. ತಾವು ರಾಜೀನಾಮೆಯನ್ನು ಕೊಟ್ಟಿದ್ದಿರಿ. I appreciate that ಇಂತಹ ಒಂದು ಸಾಂಸ್ಕೃತಿಕ ವ್ಯಕ್ತಿತ್ವವನ್ನು ಉಳ್ಳಂಥ ನನ್ನ ಬಾಯಿಯಲ್ಲಿ ಇಂತಹ ಒಂದು ಬರಡು ಸಂವಿಧಾನದ ಒಂದು ಸಂಪೂರ್ಣವಾದಂಥ ಸ್ಫೂರ್ತಿ ಒಂದು ಸೈದ್ಧಾಂತಿಕವಾದಂಥ ಶಕ್ತಿಗೆ ಕೊಡಲಿ ಏಟು ಹಾಕತಕ್ಕಂಥ ಒಂದು ಕೈ ನಿಮ್ಮದು ಆಗಬಾರದು. ಆ ವ್ಯಥೆಯಿಂದ ಇವತ್ತು ಇಲ್ಲಿ ಮಾತಾನಾಡುತ್ತಿದ್ದೇವೆಯೇ ಹೊರತು ಅನ್ಯಥಾ ಭಾವನೆಯಿಂದ ಖಂಡಿತ ಅಲ್ಲ ಎಂಬುದನ್ನು ಅಧ್ಯಕ್ಷರ ಗಮನಕ್ಕೆ ತರುತ್ತಿದ್ದೇನೆ. ದಯಮಾಡಿ ಇದನ್ನು ಹಿಂದಕ್ಕೆ ತೆಗೆದುಕೊಳ್ಳಿ ; ಹಾಗೆಯೇ ಗ್ರಾಮಪಂಚಾಯತಿ ಬಗ್ಗೆ ಒಂದು ಅಧ್ಯಯನ ಮಾಡಿ ಆ ಅಧ್ಯಯನದ ರಿಪೋರ್ಟ್‌ನ್ನು ಈ ಸದನಕ್ಕೆ ಕೊಡಿ. ಅಧ್ಯಯನದಲ್ಲಿ ನೀವು ಹೇಳಿರುವಂಥದ್ದು ಸರಿಯಾದರೆ we bow down to that report. ದಯಮಾಡಿ ಆ ಕೆಲಸವನ್ನು ಮಾಡಿ. ಈ ಮಸೂದೆಯನ್ನು ಕೊನೆಗಳಿಗೆಯಲ್ಲಿ ತಂದು, ತಮ್ಮ ಸಾಂಸ್ಕೃತಿಕ ವ್ಯಕ್ತಿತ್ವಕ್ಕೆ ಕಳಂಕ ತರಬೇಡಿ. ನಿಮ್ಮ ಬಗ್ಗೆ ಇರುವ ವ್ಯಕ್ತಿಗತವಾದ ಕಳಕಳಿಯಿಂದ ನಾನು ಮಾನ್ಯ ಅಧ್ಯಕ್ಷರ ಮುಖೇನ ಮಾನ್ಯ ಪ್ರಕಾಶ್‌ರವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು : ಹಿಂದುಳಿದ ವರ್ಗದವರ ಬಗ್ಗೆ ತಾವು ಮಾತನಾಡುವ ವೇಳೆಗೆ ಯಾವುದೊಂದು ಘಳಿಗೆಯಲ್ಲಿ ವಿ. ಪಿ. ಸಿಂಗ್‌ರವರ ವಿಚಾರ ಬಂದಾಗ, ಮಾನ್ಯ ಖರ್ಗೆಯವರು ಕುಳಿತುಕೊಂಡು ಅದಕ್ಕೆ ಬೆಂಕಿ ಹಚ್ಚಿದರು ಎಂದು ಹೇಳಿದರು. ಅದನ್ನೆ ಮಾನ್ಯ ವೀರಪ್ಪಮೊಯ್ಲಿಯವರೂ ಸಹ ಹೇಳಿದರು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ರೀಪೋರ್ಟ್ ಬಂದ ತಕ್ಷಣವೇ, ಇದು ಇಂಪ್ಲಿಮೆಂಟ್ ಆಗಬಾರದೆಂದು ಇಡೀ ದೇಶದಲ್ಲೆಲ್ಲಾ ಬೆಂಕಿ ಹಚ್ಚಿದರು.

ಅಧ್ಯಕ್ಷರು : ನನ್ನ ದುಃಖ ಏನೆಂದರೆ he is a victim of that. He represented some values. He has almost become a saint.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ವಿ. ಪಿ. ಸಿಂಗ್‌ರವರು ಒಳ್ಳೆಯ ಇಂಟೆನ್‌ಷನ್‌ನಿಂದ ಇದನ್ನು ತಂದಿದ್ದರೂ ಕೂಡ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಬಿಡಲಿಲ್ಲ.

ಅಧ್ಯಕ್ಷರು : ಇದು ಬ್ಯಾಡ್ ಸೆನ್ಸ್‌ನಲ್ಲಿ ಏನಾದರೂ ಬಂದು ಬಿಡಬಹುದು. ಆದ್ದರಿಂದ ವಿ. ಪಿ. ಸಿಂಗ್ ವಿಚಾರಕ್ಕೆ ಸಂಬಂಧಪಟ್ಟ ರೆಫರೆನ್ಸ್ ಏನು ಬಂದಿದೆ should that form part of the proceeedings

ಶ್ರೀ ಮಲ್ಲಿಕಾರ್ಜುನ ಖರ್ಗೆ : ಗ್ರಾಮಪಂಚಾಯತಿ ಬಿಲ್ಲಿನ ಮೇಲೆ ನಾನು ಮಾತನಾಡಬೇಕು.

ಅಧ್ಯಕ್ಷರು : ಈಗಾಗಲೇ ನಿಮ್ಮ ಸೀನಿಯರ್ ಲೀಡರ್ಸ್ ಮಾತನಾಡಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇದು ಬಹಳ ಮುಖ್ಯವಾದ ವಿಷಯ, ಮತ್ತು ಇದು ಅನ್‌ಕಾನ್‌ಸ್ಟಿಟ್ಯೂಷನಲ್ ಆಗಿರುವುದರಿಂದ ನಾನು ಮಾತನಾಡಲೇಬೇಕು. ಈಗಾಗಲೇ ಅವರು 9 ಬಿಲ್‌ಗಳನ್ನು 9 ನಿಮಿಷದಲ್ಲಿ ಪಾಸ್ ಮಾಡಿಕೊಂಡಿದ್ದಾರೆ...

ಅಧ್ಯಕ್ಷರು : ಈಗ ಭಾರತೀಯ ಜನತಾ ಪಾರ್ಟಿಯ ಸದಸ್ಯರಿಗೆ ಮಾತನಾಡುವುದಕ್ಕೆ ಅವಕಾಶ ಕೊಡುತ್ತೇನೆ. ನಂತರ ಮಾಧುಸ್ವಾಮಿಯವರು ಮಾತನಾಡಿ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯಕ್ಕೆ ಅಧ್ಯಕ್ಷರೆ, ಕಳೆದ ಕೆಲವು ವರ್ಷಗಳಲ್ಲಿ ಈ ಗ್ರಾಮ ಪಂಚಾಯತಿ ವ್ಯವಸ್ಥೆ ಅತ್ಯಂತ ಪ್ರಯೋಗಕ್ಕೆ ಬಲಿಯಾಗಿರತಕ್ಕಂಥದ್ದು ಒಂದು ದುರ್ದೈವದ ಸಂಗತಿ. ಒಂದೊಂದು ಸರ್ಕಾರ ಬಂದಾಗಲೂ ಕೂಡ ತಾನು ಮೂಲಭೂತವಾಗಿ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿ ಮಾಡುತ್ತೇವೆಂದು ಹೇಳಿ, ತೀರ ಒಂದು ಬದಲಾವಣೆಗೆ ಪ್ರಯತ್ನ ಮಾಡುತ್ತಾ, ಪದೇ ಪದೇ ಇದನ್ನು ಪ್ರಯೋಗಕ್ಕೆ ಗುರಿ ಮಾಡುತ್ತಿದ್ದಾರೆ. ನಿಜವಾಗಿಯೂ ಕೂಡ ಅಭಿವೃದ್ಧಿ ಆಗಬೇಕಾದ ಗ್ರಾಮೀಣ ಪ್ರದೇಶಗಳಲ್ಲಿ ಅಭಿವೃದ್ಧಿ ಕೆಲಸಗಳನ್ನು ಕುಂಠಿತ ಮಾಡುವುದಕ್ಕೆ ಸಾಕಷ್ಟು ಪ್ರಯತ್ನಗಳು ಇವತ್ತಿನ ದಿವಸ ನಡೆಯುತ್ತಿವೆ ಎನ್ನತಕ್ಕಂಥದ್ದನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಒಂದು ಕಾಲದಲ್ಲಿ ಮಂಡಲ್ ಪಂಚಾಯತಿ ವ್ಯವಸ್ಥೆಯನ್ನು ಅಬ್ದುಲ್ ನಜೀರ್ ಸಾಹೇಬ್‌ರವರು ಜಾರಿಗೆ ತಂದಿದ್ದರು. ಈ ಒಂದು ಪ್ರಯೋಗ ಯಶಸ್ವಿಯಾಗುತ್ತದೆ ಮತ್ತು (ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಶ್ರೀ ಚಂದ್ರಶೇಖರ ರೆಡ್ಡಿ ಮದನಾರವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು) ಇದರಲ್ಲಿ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡಿಕೊಂಡು ಮುಂದುವರಿಸಿಕೊಂಡು ಹೋಗಬಹುದೆಂದು ನಾವು ಭಾವಿಸಿಕೊಂಡಿದ್ದೆವು. ಪುನಃ ಇನ್ನೊಂದು ಸರ್ಕಾರ ಬಂದಾಗ ಅದರ ಸಂಪೂರ್ಣವಾದಂತಹ ಚಿತ್ರಣ ಬದಲಾವಣೆ ಆಯಿತು. ಅವತ್ತು ಸಾಕಷ್ಟು ಒಳ್ಳೆಯ ರೀತಿಯಲ್ಲಿ ಈ ಒಂದು ವ್ಯವಸ್ಥೆ ಐದು ವರ್ಷಗಳ

ಕಾಲ ನಡೆದಿತ್ತು. ಆದರೆ ಈಗ ಬದಲಾವಣೆಯಾಗಿದೆ. ಬದಲಾವಣೆ ಆಗುತ್ತಿರುವ ಬಗ್ಗೆ ನಾನು ಅನೇಕ ಸಾರಿ ಹೇಳಿದ್ದೇನೆ. ಈಗ ಮಂಡಲ್ ಪಂಚಾಯತಿ ಹೋಗಿ ಗ್ರಾಮ ಪಂಚಾಯತಿ ಆಗಿದೆ ಮತ್ತು ಜಿಲ್ಲಾ ಪರಿಷತ್ ಹೋಗಿ ಜಿಲ್ಲಾ ಪಂಚಾಯತಿಯಾಗಿದೆ, ಹಾಗೂ ಬೋರ್ಡ್‌ಗಳನ್ನು ಬದಲಾವಣೆ ಮಾಡತಕ್ಕಂಥದ್ದು ಮತ್ತು ಕಛೇರಿಗಳನ್ನು ಹೊಸ ಹೊಸದಾಗಿ ಕಟ್ಟತಕ್ಕಂಥದ್ದು, ಇದಕ್ಕೆ ಸಾರ್ವಜನಿಕರ ತೆರಿಗೆಯ ಹಣವನ್ನು ಅಪಾರವಾಗಿ ವ್ಯಯ ಮಾಡಿದ್ದಾರೆ. ಇವತ್ತು ಈ ಒಂದು ವ್ಯವಸ್ಥೆಯಲ್ಲಿ ನಾವು ಐದು ವರ್ಷ ಕಳೆದಿದ್ದೇವೆ. ಈ ವ್ಯವಸ್ತೆಗೆ ಇವತ್ತಿನ ದಿವಸ ಸಾಕಷ್ಟು ಹಣಕಾಸನ್ನು ತುಂಬಿಲ್ಲ. 30 ಸಾವಿರ ರೂಪಾಯಿಗಳಿಗಿಂತ ಕಡಿಮೆ ಆದಾಯ ಇರುವಂಥ ಪಂಚಾಯತಿಗಳು ಇವೆ ಎಂದು ಈಗಾಗಲೇ ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಆದರೆ ಈ ಒಂದು ಪಂಚಾಯತಿ ವ್ಯವಸ್ಥೆಯಲ್ಲಿ ಪಂಚಾಯತಿಗಳು ತನ್ನದೇ ಆಗಿರುವ ಆದಾಯ ಮೂಲಗಳನ್ನು ನಿರ್ಮಾಣ ಮಾಡುವುದಕ್ಕೆ ಬೇಕಾಗಿರತಕ್ಕಂಥ ತರಬೇತಿಯನ್ನು ಕೊಡುತ್ತಿಲ್ಲ ಮತ್ತು ಒಂದು ಮನಸ್ಥಿತಿಯನ್ನೂ ಸಹ ಕೊಡಲಿಲ್ಲ, ಅವರಿಗೆ ವ್ಯವಸ್ಥಿತವಾದಂಥ ಸಿಬ್ಬಂದಿ ವರ್ಗವನ್ನು ಒದಗಿಸಲಿಲ್ಲ. ಈ ಐದು ವರ್ಷಗಳಲ್ಲಿ ಮಾಡಿರತಕ್ಕಂಥ ತಾತ್ಸಾರ ಮನೋಭಾವದಿಂದಾಗಿ, ಇಡೀ ಪಂಚಾಯತ್ ವ್ಯವಸ್ಥೆ ಸಾಕಷ್ಟು ಹೀನ ಸ್ಥಿತಿಗೆ ತಲುಪುವುದಕ್ಕೆ ಸಾಧ್ಯವಾಯಿತು. ಇವತ್ತೂ ಕೂಡ ಇದೇ ಪರಿಸ್ಥಿತಿ ಮುಂದುವರಿದಿದೆ. ಹಿಂದೆ ತೀರ್ಥಹಳ್ಳಿಗೆ ಮಾನ್ಯ ಅಬ್ದುಲ್ ನಜೀರ್ ಸಾಹೇಬರು ಬಂದಾಗ ನಾವು ಜಿಲ್ಲಾಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಸದಸ್ಯರ ಒಂದು ಸಮಾವೇಶವನ್ನು ಕರೆದಿದ್ದೆವು. ಆ ಸಂದರ್ಭದಲ್ಲಿ ಒಬ್ಬ ಮಂಡಲ್ ಪಂಚಾಯತಿಯ ಪ್ರಧಾನರು ಅರ್ಜಿಯನ್ನು ಹಿಡಿದುಕೊಂಡು ಹೋಗಿ ನಜೀರ್ ಸಾಹೇಬರಿಗೆ ಕೊಟ್ಟರು ; ಇವತ್ತು ನಾನು ತಂದಿರತಕ್ಕಂಥ ಈ ವ್ಯವಸ್ಥೆಯನ್ನು ನಿಮಗೆ ಅರ್ಥಮಾಡಿಸುವುದರಲ್ಲಿ ವಿಫಲನಾಗಿದ್ದೇನೆ, ಇದರಿಂದ ನನಗೆ ಬಹಳ ದುಃಖವಾಗಿದೆ ಎನ್ನುವಂತಹ ನೋವಿನ ಒಂದು ಸಂಗತಿಯನ್ನು ಮಾನ್ಯ ನಜೀರ್ ಸಾಹೇಬರು ಹೇಳಿದರು. ಒಬ್ಬ ಗ್ರಾಮ ಪಂಚಾಯತಿ ಅಧ್ಯಕ್ಷ, ಮಂಡಲ್ ಪಂಚಾಯತಿಯ ಪ್ರಧಾನನಾಗಿರತಕ್ಕಂಥವನು ಅರ್ಜಿ ಹಿಡಿದು ಯಾರ ಹತ್ತಿರ ಕೂಡ ಹೋಗಬಾರದು. ಆತನು ತಾನು ಬೇರೆಯವರಿಗೆ ಕೊಡುವಂತವನಾಗಬೇಕೇ ಹೊರತು ತಾನು ಬೇರೆಯವರ ಹತ್ತಿರ ಬೇಡುವಂತನಾಗಬಾರದು ಎಂದು ಹೇಳಿದರು. ಗ್ರಾಮೀಣ ಪ್ರದೇಶದಲ್ಲಿ ಒಬ್ಬನ ನಾಯಕತ್ವ ನಿರ್ಮಾಣ ಆಗಬೇಕೆಂಬ ಸಂಗತಿಯನ್ನು ಅವತ್ತು ಹೇಳಿದರು. ಅವರು ಆ ಐದು ವರ್ಷ ಮಾಡಿರತಕ್ಕಂಥ ಕೆಲಸ ಕಾರ್ಯಗಳನ್ನು ನಾನು ಬಹಳ ಹತ್ತಿರದಿಂದ ನೋಡಿದ್ದೇನೆ. ಜಿಲ್ಲಾಪಂಚಾಯತ್ ಸದಸ್ಯನಾಗಿ, ಅವರು ಅನೇಕ ಮೀಟಿಂಗ್‌ನಲ್ಲಿ ಭಾಗವಹಿಸಿದಂಥ ಸಂದರ್ಭದಲ್ಲಿ ಅಲ್ಲಿ ಅವರ ಚಿಂತನೆಗಳನ್ನೂ ಸಹ ನಾನು ನೋಡಿದ್ದೇನೆ. ಮೊದಲು ನಾನು ಹಾರೆ ಹಿಡಿದುಕೊಂಡು ರಸ್ತೆ ಮಾಡಬೇಕೆಂದು ಹೇಳುವುದಲ್ಲ, ಪ್ರಧಾನನಾಗಿರತಕ್ಕಂಥವನು ಮೊದಲು ಹಾರೆ ಹಿಡಿದು ಹೋಗಿ ಜನರೆಲ್ಲರನ್ನೂ ಸೇರಿಸಿ, ನಾವು ಈ ರಸ್ತೆಯನ್ನು ನಿರ್ಮಾಣ ಮಾಡೋಣ ನೀವೆಲ್ಲಾ ಬನ್ನಿ ಎಂದು ಹೇಳಿ ತಾವು ಸ್ವಲ್ಪ ಕೆಲಸ ಮಾಡುವುದಕ್ಕೆ ಪ್ರಾರಂಭ ಮಾಡಬೇಕು. ಊರಿನ ಜನರನ್ನು ಈ ವ್ಯವಸ್ಥೆಯಲ್ಲಿ ಇನ್ವಾಲ್ವ್ ಮಾಡಬೇಕು ಎನ್ನುವಂತಹ ಮಾತನ್ನು ಮಾನ್ಯ ನಜೀರ್ ಸಾಹೇಬಹು ಹೇಳಿದರು. ಬಹುಶಃ ಈ ಚಿಂತನೆ ಸಂಪೂರ್ಣವಾಗಿ ಕಾರ್ಯಗತ ಆಗಿದ್ದರೆ. ಗ್ರಾಮೀಣ ಪ್ರದೇಶದ ಅಭಿವೃದ್ಧಿಯ ಪರಿವರ್ತನೆ

ಸಾಕಷ್ಟು ಆಗುತ್ತಿತ್ತು. ಆದರೆ ಇದು ಇವತ್ತು ಆಗಲೇ ಇಲ್ಲ. ಸರ್ಕಾರದವರು ಎಲ್ಲಾ ರೀತಿಯಿಂದ ನಿಮಗೆ ಹಣ ಮತ್ತು ಸೌಲಭ್ಯಗಳನ್ನು ದೊರಕಿಸಿಕೊಡುತ್ತೇವೆಂದು ಹೇಳಿದರು ಕೂಡ ಪಂಚಾಯತ್ ವ್ಯವಸ್ಥೆಯಲ್ಲಿ ಕೆಲಸ ಮಾಡತಕ್ಕಂಥ ಎಲ್ಲರೂ ಸರ್ಕಾರದ ಕಡೆ, ಶಾಸಕರ ಕಡೆ ನೋಡತಕ್ಕಂಥ ಕೆಲಸವಾಗಿದೆ. ಇವತ್ತಿನ ದಿವಸ ಆಗದೇ ಇರತಕ್ಕಂಥ ಕೆಲಸಕ್ಕೆ ಸರ್ಕಾರ ಮತ್ತು ಶಾಸಕರನ್ನು ದೂರುವುದು, ಆಗಿರತಕ್ಕಂಥ ಕೆಲಸವನ್ನು ನಾವು ಮಾಡಿದ್ದೇವೆಂದು ಹೇಳಿ ತೃಪ್ತಿಪಟ್ಟುಕೊಳ್ಳುತ್ತಿದ್ದಾರೆ. ಅವರ ಕಾರ್ಯಚಟುವಟಿಕೆ ಇಷ್ಟರಮಟ್ಟಿಗೆ ಮಾತ್ರ ಸೀಮಿತಗೊಂಡಿದೆ. ಇವತ್ತಿನದಿವಸ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಗೋಸ್ಕರ ಮತ್ತು ಅಧಿಕಾರ ವಿಕೇಂದ್ರಿಕರಣ ಆಗಬೇಕೆಂದರೆ, ಅಲ್ಲಿ ಅಧಿಕಾರಕ್ಕೆ ಬರತಕ್ಕಂಥ ಜನರಿಗೆ ಸರಿಯಾದಂತ ರೀತಿಯಲ್ಲಿ ತರಬೇತಿ ಮತ್ತು ಅವರ ಮನಸ್ಥಿತಿಯನ್ನು ನಿರ್ಮಾಣ ಮಾಡತಕ್ಕಂಥ ಕೆಲಸವನ್ನು ಇತ್ತೀಚಿನ ವರ್ಷಗಳಲ್ಲಿ ಸರ್ಕಾರ ಮಾಡಲೇ ಇಲ್ಲ. ಇದು ಮೂಲಭೂತವಾಗಿ ಆಗಲೇಬೇಕು. ಪಂಚಾಯತಿಗಳು ಎಷ್ಟು ದೊಡ್ಡದಾಗಿರಬೇಕೆಂದು ತಾವು ಹೇಳಿದ್ದೀರಿ. ಇದರಲ್ಲಿ 16 ಸಾವಿರ ಜನಸಂಖ್ಯೆಗೆ ಕನಿಷ್ಠ ಒಂದು ಪಂಚಾಯತಿ, ಒಂದು ಸಾವಿರ ಜನಸಂಖ್ಯೆಗೆ ಒಬ್ಬ ಪ್ರತಿನಿಧಿ ಇರಬೇಕೆಂದು ತಾವು ನಿಯಮವನ್ನು ತಂದಿದ್ದೀರಿ. ನೀವು ಚಿಕ್ಕದಾಗಿರುವುದನ್ನು ಎಷ್ಟು ದೊಡ್ಡಾದಾಗಿಯಾದರೂ ಮಾಡಬಹುದು. ಆದರೆ, ಅಲ್ಲಿ ಕೆಲಸ ಮಾಡತಕ್ಕಂಥವರಿಗೆ ಮನೋಸ್ಥಿತಿ ಸರಿ ಇಲ್ಲವೆಂದರೆ, ನೀವು ಎಷ್ಟೇ ದೊಡ್ಡದನ್ನು ಮಾಡಿದರೂ ಕೂಡ ನಿಷ್ ಪ್ರಯೋಜನ ಆಗುತ್ತದೆ. ಮಂಡಲ್ ಪಂಚಾಯತಿಯ ವ್ಯವಸ್ತೆಯಲ್ಲಿ ಬದ್ಧತೆ ಇಲ್ಲದೇ ಇರತಕ್ಕಂಥ ಜನರು ಮಾಡಿರತಕ್ಕಂಥ ಕೆಲಸದಿಂದ ಹಾಳಾಗಿ ಹೋಗಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಬದ್ಧತೆ ಇರತಕ್ಕಂಥ ಜನ ಕೆಲಸ ಮಾಡಿದಾಗ ಅವು ಚೆನ್ನಾಗಿ ಇರತಕ್ಕಂಥದ್ದನ್ನೂ ಕೂಡ ನಾವು ನೋಡಿದ್ದೇವೆ. ತಮಗೆ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈ ಮಾತನ್ನು ಹಿಂದಿನ ಸಾರಿ ಮಾತನಾಡುವಾಗ ಹೇಳಿದ್ದೇನೆ. ಏಕೆಂದರೆ ಇವತ್ತು ನಮ್ಮ ಬೋರ್‌ವೆಲ್‌ಗಳನ್ನು ನಾವು ರಿಪೇರಿ ಮಾಡಿಕೊಳ್ಳಬೇಕೆಂದು ಹೇಳಿದರೆ, ನಮ್ಮ ಗ್ರಾಮ ಪಂಚಾಯತಿ ಅಧ್ಯಕ್ಷರುಗಳು ಒಪ್ಪುತ್ತಿಲ್ಲ. ಇದನ್ನು ರಿಪೇರಿ ಮಾಡುವುದು ಇಂಜಿನಿಯರ್ ವಿಭಾಗದ ಕರ್ತವ್ಯವೆಂದು ಹೇಳುತ್ತಾರೆ. ಇವತ್ತಿನ ದಿವಸ ಇಂಜಿನಿಯರ್ ವಿಭಾಗದ ವ್ಯಾನ್ ನಮ್ಮ ಹಳ್ಳಿಯ ಮೂಲೆಗೆ ಬರಬೇಕು ಮತ್ತು ಒಬ್ಬ ಇಂಜಿನಿಯರ್, ಒಬ್ಬ ಮೆಕಾನಿಕಲ್ ಬಂದು ಇಲ್ಲಿರತಕ್ಕಂಥ ಬೋರ್‌ವೆಲ್‌ನ್ನು ರಿಪೇರಿ ಮಾಡತಕ್ಕಂಥ ಸ್ಥಿತಿ ಬಂದಿದೆ. ನಾವು ಬರೀ ಯಜಮಾನಿಕೆ ಮಾಡಿಕೊಂಡು ಇರಬೇಕು ಎನ್ನುವ ಮಟ್ಟಿಗೆ ಅವರ ಮನಸ್ಥಿತಿ ಇದೆ. ತೀರ್ಥಹಳ್ಳಿ ತಾಲ್ಲೂಕಿನಲ್ಲಿ ನಾವು ಒಂದು ಪ್ರಯೋಗ ಮಾಡಿದ್ದೇವೆ. ಇದನ್ನು ಅನೇಕ ಸಾರಿ ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ಈ ಒಂದು ಪ್ರಯೋಗವನ್ನು ಇಡೀ ರಾಜ್ಯಕ್ಕೆ ಹಬ್ಬಿಸಬೇಕು ಎನ್ನುವಂಥದ್ದು ಮಾನ್ಯ ಮಂತ್ರಿಗಳ ಚಿಂತನೆಯಾಗಿದೆ, ಆದ್ದರಿಂದ ಇದರ ಬಗ್ಗೆ ತಮ್ಮ ಸಲಹೆಯನ್ನು ಕೊಡಿ ಎಂದು ಮೊನ್ನೆ ದಿವಸ ಗ್ರಾಮೀಣಾಭಿವೃದ್ಧಿ ಕಾರ್ಯದರ್ಶಿಯವರು ನನ್ನನ್ನು ಕರೆದು ಕೇಳಿದರು. ಈಗ ನಮ್ಮ ತಾಲ್ಲೂಕಿನಲ್ಲಿ ಯಾವ ರೀತಿ ಮಾಡುತ್ತಿದ್ದೀರಿ ಎಂದು ಕೇಳಿದರು; ತೀರ್ಥಹಳ್ಳಿ ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ ಒಂದು ಬೋರ್‌ವೆಲ್ ಕೆಟ್ಟು ಹೋದರೆ, ಅದನ್ನು ಇಂಜಿನಿಯರ್ ವಿಭಾಗಕ್ಕೆ ಹೋಗಿ ಹೇಳಬೇಕೆಂಬುದೇ ಮರೆತು ಹೋಗಿದೆ. ಬೋರ್‌ವೆಲ್ ಕೆಟ್ಟು ಹೋದರೆ ಅಲ್ಲಿರತಕ್ಕಂಥ ಪಂಚಾಯತ್ ಸದಸ್ಯರಿಗೆ ಹೋಗಿ

ಹೇಳುತ್ತಾರೆ. ಒಂದು ದಿವಸದಲ್ಲಿ ಅವರು ರಿಪೇರಿ ಮಾಡಿಸದೇ ಇದ್ದರೆ, ಎರಡು ಅಥವಾ ಮೂರು ದಿವಸ ಬಿಟ್ಟುಕೊಂಡು ಅವನ ಮನೆ ಹತ್ತಿರ ಹೋಗಿ, ನೀನು ಕುಡಿಯುವ ನೀರಿನ ವ್ಯವಸ್ಥೆಯನ್ನು ಸರಿಮಾಡುವುದಕ್ಕೆ ಯೋಗ್ಯತೆ ಇಲ್ಲ ನಿನಗೊಂದು ಓಟ್ ಕೊಟ್ಟಿದ್ದೇವೆಂದು ಬೈಯುತ್ತಾರೆ. ಇವರು ಬೋರ್‌ವೆಲ್ ಕೆಟ್ಟು ಹೋಗುವುದನ್ನೆ ಕಾಯುತ್ತಿರುತ್ತಾರೆ. ಕೆಟ್ಟ ತಕ್ಷಣವೇ ಕಾರ್ಯದರ್ಶಿಯವರಿಗೆ ಹೇಳುತ್ತಾರೆ. ನಮ್ಮ ಪಂಚಾಯತ್ ವ್ಯವಸ್ಥೆಯಲ್ಲಿ ಒಬ್ಬ ಬೋರ್‌ವೆಲ್ ಮೆಕಾನಿಕ್‌ನನ್ನು ಇಟ್ಟು ಕೊಂಡಿದ್ದೇವೆ. ಈತನಿಗೆ ಟ್ರೈಸಂ ಸ್ಕೀಂ ನಲ್ಲಿ ತರಬೇತಿಯನ್ನು ಕೊಟ್ಟು ಒಂದು ಟೂಲ್‌ಕಿಟ್‌ನ್ನು ಕೊಟ್ಟಿದ್ದೇವೆ. ಕೆಟ್ಟು ಹೋದ ಒಂದು ಬೋರ್‌ವೆಲ್‌ನ್ನು ಅಟೆಂಡ್ ಮಾಡಿದರೆ ಆತನಿಗೆ 50ರೂಪಾಯಿಯನ್ನು ನಾವು ಕೊಡುತ್ತೇವೆ. ಈ ವ್ಯವಸ್ಥೆ ನಮ್ಮ ತಾಲ್ಲೂಕಿನಲ್ಲಿದೆ. ಇವತ್ತು ಸರ್ಕಾರ ತೀರ್ಥಹಳ್ಳಿ ಪಂಚಾಯತ್‌ಗೋಸ್ಕರ ವಾರ್ಷಿಕ ದುರಸ್ತಿಗೆ ಎಂದು ಏನು ಹಣ ಕೊಡುತ್ತಿದೆ. ಆ ಹಣ ಅಲ್ಲಿಯೇ ಉಳಿಯುತ್ತಿದೆ.

7.20 ಪಿ.ಎಂ.

ನಾನು ಕಳೆದಸಾರಿಯೇ ಕೂಡ ಇದನ್ನು ಇಡೀ ರಾಜ್ಯಕ್ಕೆ ವಿಸ್ತರಿಸಬೇಕೆಂದು ಸಲಹೆ ಮಾಡಿದ್ದೆ. ಆದರೂ ಕೂಡ ಹೊಣೆಗಾರಿಕೆ ಬರಬೇಕು. ಇವತ್ತು ಆ ಹೊಣೆಗಾರಿಕೆಯನ್ನು ನಿಭಾಯಿಸುವುದರಲ್ಲಿ ವಿಫಲರಾಗಿರುವುದರಿಂದ ಎಲ್ಲರೂ ಕೂಡ ಈ ಕಡೆಗೆ ನೋಡುತ್ತಿರುತ್ತಾರೆ. ಇದು ಸರಿಹೋಗುವುದಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಇನ್ನು ಮುಂದೆ ಆದರೂ ಈ ವ್ಯವಸ್ಥೆಯನ್ನು ಸರಿಮಾಡಬೇಕು. ಈ ವರ್ಷದ ಬಜೆಟ್‌ನಲ್ಲಿ ತಾವು ಇದರ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಮುಂದಿನ ಸಾರಿಯಾದರೂ ಈ ಬಗ್ಗೆ ಹೊಣೆಗಾರಿಕೆಯನ್ನು ಅವರ ಮೇಲೆ ಹೊರಿಸಿದರೆ ಇದರಿಂದ ತುಂಬಾ ಒಳ್ಳೆಯದಾಗುತ್ತದೆ. ಇವತ್ತು ತಾವು 5600 ಪಂಚಾಯಿತಿಗಳನ್ನು ಮೊಟಕುಗೊಳಿಸಿ 2500 ಪಂಚಾಯಿತಿಗಳನ್ನು ಮಾಡಬೇಕೆಂದು ಹೇಳಿದ್ದೀರಿ. ಸುಮಾರು 4500 ಪಂಚಾಯಿತಿ ಕಟ್ಟಡಗಳು ಇದೆ. ಇದರಲ್ಲಿ ಸುಮಾರು 400 ಕಟ್ಟಡಗಳು ಅರ್ಧಂಬರ್ಧ ಕನ್ಸ್ಟ್ರಕ್ಷನ್ ಆಗಿ ನಿಂತಿದೆ. ತಾವು ಮೊನ್ನೆ ದಿನ ಉತ್ತರವನ್ನು ಕೊಟ್ಟಂತಹ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಇವತ್ತು ಇದು ನಿರರ್ಥಕವಾಗುತ್ತದೆ. ತಾವು ಹಿಂದಿನ ಸಾರಿ ಚಿಕ್ಕ ಚಿಕ್ಕ ಪಂಚಾಯಿತಿಗಳನ್ನು ತೆಗೆದುಹಾಕಿ ಮಂಡಲ ಪಂಚಾಯಿತಿಗಳನ್ನು ಮಾಡುವಾಗಲೂ ಕೂಡ ಇದರ ಬಗ್ಗೆ ಯಾರೂ ಹೇಳುವವರು ಮತ್ತು ಕೇಳುವವರು ಇಲ್ಲದೆ ಅನೇಕ ಕಟ್ಟಡಗಳು ನಿರರ್ಥಕವಾಗಿತ್ತು. ಒಂದೊಂದು ಕಛೇರಿಯ ಕಟ್ಟಡವನ್ನು ಕಟ್ಟುವುದಕ್ಕೆ 2 ರಿಂದ 3 ಲಕ್ಷರೂಗಳನ್ನು ಸಾಕಷ್ಟು ಹಣವನ್ನು ವ್ಯಯ ಮಾಡಿದ್ದಾರೆ. ಇವತ್ತು ಹಳ್ಳಿಗಾಡಿನಲ್ಲಿರುವಂತಹ ಕಟ್ಟಡಗಳನ್ನು ಯಾವುದಕ್ಕೆ ಉಪಯೋಗ ಮಾಡಬೇಕು ಎಂಬ ಬಗ್ಗೆ ಎಲ್ಲೂ ಕೂಡ ಇಲ್ಲ. ನೀವು ಈ ಪಂಚಾಯಿತಿಯ ವ್ಯವಸ್ಥೆಯನ್ನು ದೊಡ್ಡದು ಮಾಡುವಾಗ ಅದಕ್ಕೆ ಯಾವ ಅಂತಸ್ಥಿನ ಒಬ್ಬ ಅಧಿಕಾರಿಯನ್ನು ಒಂದು ಕಾರ್ಯದರ್ಶಿಯ ಹುದ್ದೆಗೆ ನೇಮಕ ಮಾಡುತ್ತೇವೆಂದು ಪ್ರಸ್ತಾನೆಯಲ್ಲಿ ಹೇಳಲಿಲ್ಲ. ಬಹುಶಃ ಹಿಂದಿನ ಸಾರಿ ಈ ಸಣ್ಣ ಸಣ್ಣ ಪಂಚಾಯಿತಿಗಳಿಗೆ ಮಾಡಿದ ಹಾಗೆ ಇವತ್ತು ಮಾಡಿದರೆ ಆ ಪಂಚಾಯಿತಿಯ ವ್ಯವಸ್ಥೆ ಅತ್ಯಂತ ನಿರರ್ಥಕವಾಗುತ್ತದೆ. ಎಸ್‌ಎಸ್‌ಎಲ್‌ಸಿ ಪಾಸಾಗದೆ ಇರುವಂತವರೂ ಕೂಡ, ಬಿಲ್‌ಕಲೆಕ್ಟರ್ ಆಗಿರುವಂತವರೂ ಸಹ ಇವತ್ತು ಪ್ರಮೋಷನನ್ನು ಪಡೆದು ಆ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ

ಕೆಲಸವನ್ನು ಮಾಡುತ್ತಿದ್ದಾರೆ. ಅವರಿಗೆ ಬಿಲ್ಲುಗಳನ್ನು ಬರೆಯುವುದಾಗಲೀ ಅಥವಾ ಬೇರೆ ಯಾವುದೇ ಕೆಲಸಗಳು ಬರುವುದಿಲ್ಲ. ಅವರು ಬೇರೆಯವರ ಮೇಲೆ ಅವಲಂಬಿತರಾಗಿ ಲೆಕ್ಕವನ್ನು ಬರೆಸುತ್ತಿದ್ದಾರೆ. ಹೀಗಾಗಿ ಇವತ್ತು ಇಡೀ ಪಂಚಾಯಿತಿಯ ವ್ಯವಸ್ಥೆಯು ಹಾಳಾಗಿ ಹೋಗಿದೆ. ಇವತ್ತು ಹರಿಜನ ಗಿರಿಜನರು ಮತ್ತು ಹಿಂದುಳಿದವರು ರಿಸರ್ವೇಶನಲ್ಲಿ ಬರುತ್ತಾರೆ. ಇಲ್ಲಿ ಅವಿದ್ಯಾವಂತರು ಛೇರ್ಮನ್ನಾಗಿ ಬಂದಿರುತ್ತಾರೆ. ಅವರಿಗೂ ಸಹ ಗೊತ್ತಿಲ್ಲ, ಇವರಿಗೂ ಸಹ ಗೊತ್ತಿಲ್ಲ. ಇವರಿಗೆ ಏನು ಮಾಡುವುದಕ್ಕೆ ಗೊತ್ತಾಗದೆ ಗ್ರಾಮೀಣ ಪ್ರದೇಶದ ಅಭಿವೃದ್ಧಿ ಹಾಳಾಗಿಹೋಗಿದೆ. ಇದರಲ್ಲಿ ಯಾರೋ ಒಬ್ಬರಿಬ್ಬರು ಬುದ್ಧಿವಂತ ಸದಸ್ಯರುಗಳು ಇಡೀ ಪಂಚಾಯಿತಿಯನ್ನು ಹೈಜಾಕ್ ಮಾಡಿರುವಂಹತದನ್ನು ಇವತ್ತು ನಾವು ನೋಡುತ್ತಿದ್ದೇವೆ. ಈ ವ್ಯವಸ್ಥೆಯು ಖಂಡಿತವಾಗಿ ಆಗಬಾರದು. ಪಂಚಾಯಿತಿಗಳನ್ನು ಈ ರೀತಿಯಾಗಿ ಪ್ರಯೋಗಕ್ಕೆ ಗುರಿಮಾಡದೆ ಅದಕ್ಕೆ ಎಷ್ಟು ಅನುದಾನಗಳನ್ನು ಕೊಡುತ್ತೀರೋ, ಏನಾಗಬೇಕು ಎಂಬ ಬಗ್ಗೆ ಸ್ಪಷ್ಟಪಡಿಸುವಂತದ್ದು ತೀರಾ ಅವಶ್ಯಕತೆ ಇದೆ. ಇದು ನಮ್ಮ ಮಲೆನಾಡಿನಲ್ಲಿ ತಾವು ಈಗ ಏನು ಪ್ರಸ್ತಾಪ ಮಾಡಿದ್ದೀರಿ ಅದು ಬಹಳ ವಿಸ್ತಾರವಾಗುತ್ತದೆ. ಇದನ್ನು ಸಹ ನಾವು ಮಂಡಲಪಂಚಾಯಿತಿಯ ವ್ಯವಸ್ಥೆಯಲ್ಲಿ ನೋಡಿದ್ದೇವೆ. ನಾವು 10 ರಿಂದ 15 ಕಿಲೋಮೀಟರ್‌ಗಳು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಹೋಗಿ ಆಡಳಿತವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಅಂತಹ ಕಡೆ ಅದನ್ನು ಇನ್ನು ಚಿಕ್ಕದು ಮಾಡಿದ್ದರೆ ಒಳ್ಳೆಯದಾಗುತ್ತಿತ್ತು ಎಂಬ ಅನಿಸಿಕೆ ಇದೆ. ತಾವು ಈ ಬಗ್ಗೆ ಏನು ತಿದ್ದುಪಡಿಯನ್ನು ತಂದಿದ್ದೀರಿ ಅದರಲ್ಲಿ ಹಿಂದಿನ ವ್ಯವಸ್ಥೆಯೂ ಸಹ ಮುಂದುವರಿದಿದ್ದರೆ ಒಳ್ಳೆಯದಾಗುತ್ತಿತ್ತು. ಅದಕ್ಕೆ ಹೆಚ್ಚು ಹಣವನ್ನು ಮತ್ತು ಅಧಿಕಾರವನ್ನು ಕೊಟ್ಟಿದ್ದರೆ ಒಳ್ಳೆಯದಾಗುತ್ತಿತ್ತು ಎಂದು ನನ್ನ ಅನಿಸಿಕೆಯಾಗಿದೆ.

ಶ್ರೀ ಜೆ.ಸಿ.ಮಾಧುಸ್ವಾಮಿ (ಚಿಕ್ಕ ನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಈ ಬಿಲ್‌ನ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಬಯಸುತ್ತೇನೆ. ಬಹುಶಃ ಇದರ ಬಗ್ಗೆ ಹಿಂದಕ್ಕೆ ಹೋದರೆ ಮಾಜಿ ಮುಖ್ಯಮಂತ್ರಿಗಳಾದ ವೀರಪ್ಪಮೊಯಿಲಿಯವರ ಕಾಲದಲ್ಲಿ ಇದೇ ಬಿಲ್‌ನ ಬಗ್ಗೆ ಚರ್ಚೆಯಾದಾಗ ನಾನು ಜನತಾದಳದಲ್ಲಿದ್ದೆ. ಆವತ್ತು ನಾವು ಸರ್ಕಾರವನ್ನು ಈ ಸೆಕ್ಷನ್ (8) ನ್ನು ಇಂಟ್ರೊಡ್ಯೂಸ್ ಮಾಡಬಾರದು ಎಂದು ಬೇಡಿಕೊಂಡಿದ್ದೆವು. ಜಿಲ್ಲಾಧಿಕಾರಿಯವರಿಗೆ ಇಷ್ಟೊಂದು ಪರಮಾಧಿಕಾರವನ್ನು ಕೊಡಬಾರದು. ಇ.ವೋಗಳಿಗೂ ಸಹ ಇಷ್ಟೊಂದು ಪವರ್‌ನ್ನು ಕೊಡಬಾರದು. ಒಂದು ನಾನ್‌ಅಫಿಷಿಯಲ್ ಬಾಡಿಯನ್ನು ಸೂಪರ್‌ಸೀಡ್ ಮಾಡುವಂತಹ ಅಧಿಕಾರವನ್ನು ತಾವು ಟಿಪಿಎಸ್‌ಗೆ ಕೊಟ್ಟಿದ್ದೀರಿ. ಇದು ಪ್ರಜಾಪ್ರಭುತ್ವಕ್ಕೆ ವಿರುದ್ಧವಾಗಿದೆ. ಭಗವಂತ ಅವರಿಗೆ ಏನು ಕೊಟ್ಟರೂ ಮೂರು ದಿವಸ ನಾವು ವಿರೋಧ ಪಕ್ಷದಲ್ಲಿದ್ದು ಸ್ಟ್ರೈಕ್ ಮಾಡಿ ಅಂತಿಮವಾಗಿ ನಮ್ಮನ್ನು ಇಲ್ಲಿಂದ ಹೊರಗಡೆ ಹಾಕಿ ಈ ಬಿಲ್‌ನ್ನು ಪಾಸು ಮಾಡಬೇಕಾಗಿ ಬಂದಿತ್ತು. ನಾವೆಲ್ಲರೂ ಮಾನ್ಯ ಘೋರ್ಪಡೆಯವರಿಗೆ ಏಕೆ ಗೌರವವನ್ನು ಕೊಡುತ್ತೇವೆಂದರೆ ಅವರೂ ಕೂಡ ಆವತ್ತು ರಾಜೀನಾಮೆ ಕೊಟ್ಟು ಹೋಗುವಂತಹ ಸ್ಥಿತಿಯೂ ನಿರ್ಮಾಣವಾಗಿತ್ತು. ಅಂದಿನಿಂದ ಇಂದಿನವರೆಗೆ ಇದು ಜಿಜ್ಞಾಸೆಯು ಮುಂದುವರಿದುಕೊಂಡು ಬಂದಿದೆ. ಇದರಲ್ಲಿ ನಾವು ಎರಡು ಅನುಭವಗಳನ್ನೂ ಸಹ ನೋಡಿದ್ದೇವೆ. ಇದರಲ್ಲಿ ದೊಡ್ಡ ಪಂಚಾಯಿತಿಗಳು ಇದ್ದು ಮಂಡಲ ಪಂಚಾಯಿತಿಗಳಾದಾಗ ಏನಾಯಿತು ಎಂಬುದು

ಒಂದು ಕಡೆಯಾದರೆ ಇನ್ನೊಂದು ಚಿಕ್ಕಚಿಕ್ಕದಾಗಿ ಗ್ರಾಮಪಂಚಾಯಿತಿಗಳಾಗಿ ಏನಾಯಿತು ಎಂಬುದು ನಮಗೆ ಗೊತ್ತಾಗುತ್ತದೆ. ಬಹುಶಃ ಇದರ ಬಗ್ಗೆ ನನ್ನ ಅಭಿಪ್ರಾಯದಲ್ಲಿ ಹೇಳುವುದಾದರೆ ಮಂಡಲ ಪಂಚಾಯಿತಿಯಲ್ಲಿ ಆದ ಕೆಲಸವನ್ನು ನಾವು ಗ್ರಾಮಪಂಚಾಯಿತಿಗಳಲ್ಲಿ ನಾವು ಸಾಧನೆ ಮಾಡಿದ್ದೇವೆಂದು ಹೇಳುವುದಕ್ಕಾಗುವುದಿಲ್ಲ. ಬೋರ್ಡ್‌ಗಳು ಮತ್ತು ಜನಸಂಖ್ಯೆ ಜಾಸ್ತಿಯಾಗಿದೆ. ನಾವು ಪಂಚಾಯಿತಿಗಳ ಸಂಖ್ಯೆಯನ್ನು ಹೆಚ್ಚು ಮಾಡಿ ಸದಸ್ಯರುಗಳನ್ನು ಹೇರಳವಾಗಿ ಸೃಷ್ಟಿ ಮಾಡಿದ್ದೇವೆ. ಎಂಎಲ್‌ಸಿ ಎಲೆಕ್ಷನ್‌ಗೆ ನಿಂತುಕೊಂಡವರ ವೋಟರ್‌ಲಿಸ್ಟನ್ನು ಬೃಹದಾಕಾರವಾಗಿ ಮಾಡಿದ್ದೇವೆ ಎಂಬುದನ್ನು ಬಿಟ್ಟರೆ ಇದರಲ್ಲಿ ಸಾಧನೆ ಏನಾಗಿದೆ ಎಂಬ ಬಗ್ಗೆ ನಾವು ಚರ್ಚೆ ಮಾಡಿದಾಗ ಬಹಶಃ ಇದರಲ್ಲಿ ನಾನು ಅರಗಜ್ಞಾನೇಂದ್ರ , ಶಿವರಾಮೇಗೌಡರು, ಬಾಲಕೃಷ್ಣ ಈ ಪ್ರಯೋಗದ ಫಲಾನುಭವಿಗಳು. ನಾವೆಲ್ಲರೂ ಜಿಲ್ಲಾ ಪರಿಷತ್ತಿನ ಸದಸ್ಯರುಗಳಾಗಿ ಈ ಸಭೆಗೆ ಬಂದವರು. ನಾವು ಅವತ್ತು ಮಾಡಿದ ಕೆಲಸವನ್ನು ನೆನಸಿಕೊಂಡರೆ ಇವತ್ತು ನಮಗೆ ನಿಜವಾಗಿಯೂ ಮನಸ್ಸಿಗೆ ನೋವಾಗುತ್ತದೆ. ಇವತ್ತು ಏನು ವ್ಯವಸ್ಥೆ ಇದೆ ಅದು ನಿರೀಕ್ಷಿತ ಮಟ್ಟದಲ್ಲಿ ಕೆಲಸವನ್ನು ಮಾಡಲಿಲ್ಲ. ಇದು ಬಲಿತು ಬರಬೇಕಾದಂತಹ ವ್ಯವಸ್ಥೆ, ಇದು ಪ್ರೌಢವಾಗಿ ಆಗಬೇಕಾದ ವ್ಯವಸ್ಥೆ, ಇದು ವಾಪಸ್ಸು ಹೋಗುವುದಕ್ಕೆ ಆರಂಭವಾಯಿತು ಎಂದು ನನಗನ್ನಿಸುತ್ತದೆ, ನಾನು ಸನ್ಮಾನ್ಯ ಸಚಿವರಾದ ಪ್ರಕಾಶ್‌ರವರಲ್ಲಿ ಕೇಳಿಕೊಳ್ಳುವುದೇನೆಂದರೆ, ಇದು ಅನ್‌ವಿಲ್ಡಿಯಾಯಿತು. ನಿಜ. 5000 ಮತ್ತು 6000ಕ್ಕೆ ಒಂದು ಪಂಚಾಯಿತಿಯಾಗಿರುವುದು ತೀರಾ ಚಿಕ್ಕದು ಎಂದು ತಾವು ಏನು ಭಾವಿಸುತ್ತೀರಿ 10 ರಿಂದ 16 ಸಾವಿರ ಬಹಳ ದೊಡ್ಡದಾಯಿತು. ಇದರ ಬಗ್ಗೆ ತಾವು ಚಿಂತನೆಯನ್ನು ಮಾಡಬೇಕು. 8 ರಿಂದ 10 ಸಾವಿರ ಹೆಚ್ಚು ಎಂದರೆ 12 ಸಾವಿರಕ್ಕೆ ಮಾಡಬೇಕು. ಎರಡನೆಯಾದಾಗಿ ಒಂದು ಸಾವಿರ ಜನಸಂಖ್ಯೆಗೆ ಒಬ್ಬ ಮೆಂಬರ್ ಎಂದರೆ ನಮ್ಮ ಹಳೆಯ ಮೈಸೂರು ಭಾಗದಲ್ಲಿ ಚುನಾವಣೆಯನ್ನು ಮಾಡುವುದಕ್ಕೆ ಸ್ವಲ್ಪ ಕಷ್ಟವಾಗುತ್ತದೆ. ನಮ್ಮ ಹಳ್ಳಿಗಳಲ್ಲಿ ಸುಮಾರು 500 ರಿಂದ 600 ಜನ ಇರುವ ಕ್ಲಸ್ಟರುಗಳು ಜಾಸ್ತಿ. ಇಂತಹ ಕಡೆಗಳಲ್ಲಿ ಅಭ್ಯರ್ಥಿಗಳು ಚುನಾವಣೆಗಳಿಗೆ ನಿಲ್ಲುವುದು ಮತ್ತು ಅದನ್ನು ಎದುರಿಸುವುದು ಕಷ್ಟವಾಗುತ್ತದೆ. ಇಂತಹ ಕಡೆ ಊರಿನಿಂದ ಊರಿಗೆ ಚುನಾವಣೆಯಾದರೆ ಅದು ಮೆಂಬರುಗಳ ಮೇಲೆ ಆಗುವುದಿಲ್ಲ. ಇದು ಹಳ್ಳಿಹಳ್ಳಿಗಳ ಮೇಲೆ ಬರುತ್ತದೆ. ಆ ಊರಿನವರನ್ನು ಗೆಲ್ಲಿಸಬೇಕೇ ಈ ಊರಿನವರನ್ನು ಗೆಲ್ಲಿಸಬೇಕೇ ಈ ರೀತಿ ವೈಷಮ್ಯ ಬೆಳೆಯುವ ಬಗ್ಗೆ ತಾವು ಆಲೋಚನೆಯನ್ನು ಮಾಡಿದರೆ ಗೊತ್ತಾಗುತ್ತದೆ. ಈ ಸಂಖ್ಯೆಯನ್ನೂ ಸಹ ತಾವು ಕಡಿಮೆ ಮಾಡಬೇಕಾಗುತ್ತದೆ. 12 ರಿಂದ 16 ಸಾವಿರ ಜನಸಂಖ್ಯೆಗೆ 14 ಸಾವಿರ ಜನ ಮೆಂಬರ್ ಎಂದರೆ ತೀರಾ ಕಡಿಮೆಯಾಗುತ್ತದೆ. ಅಲ್ಲಿ 20 ರಿಂದ 25 ಜನ ಮೆಂಬರುಗಳು ಕುಳಿತುಕೊಳ್ಳುವುದನ್ನು ತಪ್ಪಾಗುತ್ತದೆಂದು ನಾವು ಭಾವಿಸುವುದಕ್ಕಾಗುವುದಿಲ್ಲ. ಕನಿಷ್ಟ 600 ರಿಂದ 800 ಜನಕ್ಕಾದರೂ ಒಬ್ಬ ಪ್ರತಿನಿಧಿಯನ್ನು ತರುವಂತಹ ವ್ಯವಸ್ಥೆಯ ಬಗ್ಗೆ ತಿದ್ದುಪಡಿಯನ್ನು ಮಾಡಬೇಕು. ಇದರ ಜೊತೆಗೆ ಟ್ರಾನ್ಸಿಟರಿ ಅರೇಂಜ್‌ಮೆಂಟ್‌ನ ಬಗ್ಗೆ ನಾವು ಮಾತನಾಡಿದ್ದೇವೆ. ಇದು ಎಲ್ಲಾ ಕಾಲದಲ್ಲಿಯೂ ಆಗಿತ್ತು. ಅವತ್ತು ಪಂಚಾಯಿತಿಗಳು ಸೂಪರ್‌ಸೀಡ್ ಆಗಿ ಚುನಾವಣೆಗಳು ಮುಂದಕ್ಕೆ ಹೋಯಿತು. ಅವತ್ತು ಸಹ ಪಂಚಾಯಿತಿಗಳನ್ನು ಸೂಪರ್‌ಸೀಡ್ ಮಾಡಬೇಡಿ ಚುನಾವಣೆಗಳನ್ನು ಮಾಡಿ ಎಂದು ಬೇಡಿಕೊಂಡೆವು. ಒಂದು ದುರ್‌ದೈವದ ಸಂಗತಿಯನ್ನು ಮಾನ್ಯ ವೀರಪ್ಪಮೊಯಿಲಿಯವರಿಗೆ

ತಿಳಿಸುವುದೇನೆಂದರೆ, ಅವರು ಅಧಿಕಾರದಲ್ಲಿದ್ದಾಗಲೂ ಸಹ ಪಂಚಾಯಿತಿ ಅಧ್ಯಕ್ಷರ ಚುನಾವಣೆಯನ್ನು ರೊಟೇಷನ್ ಸಿಸ್ಟಮ್‌ನ್ನು ತರಲಿಲ್ಲ. ಅವರು ಅಧಿಕಾರದಲ್ಲಿದ್ದಾಗ ಯಾರು ಪಂಚಾಯಿತಿಯ ಅಧ್ಯಕ್ಷರಾದರೋ ಅವರು ಹಾಗೆಯೇ ಅಧಿಕಾರದಲ್ಲಿ ಉಳಿದುಕೊಂಡರು. ತಾವು ಅಧಿಕಾರದಿಂದ ಹೋದ ಮೇಲೆ ಇವರು ಬಂದು ಏನು ರೊಟೇಷನ್ ಸಿಸ್ಟಮ್‌ನ್ನು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯಿತಿಯಲ್ಲಿ

ಬಂತೋ ಅದು ಮಾತ್ರ ಇವತ್ತು ಪ್ರಾಕ್ಟೀಸ್‌ನಲ್ಲಿದೆ. ರೊಟೇಷನ್ ಸಿಸ್ಟಮ್‌ನ್ನು ಬೆಸ್ಟ್ ಎಂದು ಅಧ್ಯಕ್ಷರನ್ನು ಆವತ್ತು ಮಾಡುವುದಕ್ಕೆ ಇಷ್ಟಪಡಲಿಲ್ಲ. ಎರಡನೆಯದಾಗಿ, ಅನುಭವದ ಆಧಾರದ ಮೇಲೆ ಮಾತನಾಡಬೇಕಾದರೆ, ಈ ರೊಟೇಷನ್ ಸಿಸ್ಟಮ್ ಮೆಂಬರ್‌ಗಳಿಗೆ ಬಂದರೆ ಒಂದೇ ಜನಾಂಗವಿರುವಂತಹ ಹಳ್ಳಿಗಳಲ್ಲಿ ಪ್ರಾತಿನಿಧ್ಯವನ್ನು ಕೊಡುವುದಕ್ಕೆ ಕಷ್ಟವಾಗುತ್ತದೆ. ಈ ಊರಿನವರು ಹೋಗಿ ಆ ಊರಿನಲ್ಲಿ ಚುನಾವಣೆಗೆ ನಿಲ್ಲಬಹುದು, ಆ ಊರಿನವರು ಈ ಊರಿಗೆ ಬಂದು ಚುನಾವಣೆಗೆ ನಿಲ್ಲಬಹುದು ಎಂದು ಹೇಳುವುದಕ್ಕೆ ಸುಲಭವಾಗುತ್ತದೆ. ಎಲ್ಲಿ ಬಹುಸಂಖ್ಯಾತ ಜನರು ಇರುತ್ತಾರೆ, ಅವರು ಯಾವುದೇ ಕ್ಯಾಟಗರಿಗೆ ಸೇರಬಹುದು. ಅಲ್ಲಿಗೆ ಆ ಪ್ರತಿನಿಧಿಯನ್ನು ಆಯ್ಕೆ ಮಾಡುವುದಕ್ಕೆ ಅವಕಾಶವನ್ನು ಕೊಡದೇ ಇದ್ದರೆ ಅವರೇನು ಅಬ್ಜೆಕ್ಟೀವ್ಸ್‌ನಲ್ಲಿ ಹೇಳಿದ್ದಾರೆ ಅದು ಸತ್ಯವಾಗಿದೆ. ನಾವು ನಾಯಕತ್ವವನ್ನು ರೂಪಿಸುವುದು, ನಾಯಕರನ್ನು ಸ್ವಲ್ಪಮಟ್ಟಿಗೆ ಬೆಳೆಸುವುದು ಕಷ್ಟವಾಗುತ್ತದೆ. ಯಾರೋ ಒಬ್ಬ ವ್ಯಕ್ತಿ ಹೋಗಿ ಗ್ರಾಮೀಣ ಪಂಚಾಯಿತಿಯ ವ್ಯವಸ್ಥೆಯಲ್ಲಿ ಎಲ್ಲೋ ಒಂದು ಕಡೆ ಚುನಾವಣೆಗೆ ನಿಂತುಕೊಂಡು ಬೇರೆ ಯಾವುದೋ ಬ್ಲಾಕ್‌ನಿಂದ ಎಲೆಕ್ಟ್ ಆಗಿ ಬಂದು ನಾಯಕರಾಗುತ್ತೇವೆಂದರೆ ಜನ ಅಷ್ಟೊಂದು ದೊಡ್ಡದಾಗಿ ಅಥವಾ ಉದಾರವಾಗಿದ್ದಾರೆ ಎಂದು ಭಾವಿಸುವುದಕ್ಕಾಗುವುದಿಲ್ಲ. ಏನು ಮೀಸಲಾತಿ ಆಗಬೇಕಾಗಿದೆ ಅದರ ಬಗ್ಗೆ ನಾವ್ಯಾರೂ ತಕರಾರು ಮಾಡುವುದಿಲ್ಲ. ನೀವು ಅಷ್ಟು ಪ್ರಾತಿನಿಧ್ಯವನ್ನು ಕೊಡಬೇಕಾಗುತ್ತದೆ. ಈ ಸಾರಿ ಪಂಚಾಯಿತಿ ಚುನಾವಣೆ ಆಗಿ ನಿಮ್ಮದೇನಾದರೂ ರೊಟೇಷನ್ ಬೇಸಿಸ್ ಮೇಲೆ ಆಗಿದ್ದರೆ, ಒಂದು ಕಡೆ ಯಾವುದೋ ಜನಾಂಗ ಇರುವುದು. ಅಲ್ಲಿ ಪ್ರತಿನಿಧಿಯಾಗಿ ಯಾರೋ ಆಗಿರುತ್ತಾರೆ. ಜನಗಳಿಗೆ ವೋಟನ್ನು ಹಾಕುವುದಕ್ಕೆ ಆಸಕ್ತಿಯೇ ಇರುವುದಿಲ್ಲ. ನಾವು ವೋಟನ್ನು ಹಾಕಬೇಕಾ ಎನ್ನುವ ಸ್ಥಿತಿ ನಿರ್ಮಾಣವಾಗಿತ್ತು. ನಮಗೆ ಅವರನ್ನು ಕನ್‌ವಿನ್ಸ್ ಮಾಡುವುದಕ್ಕೆ ಕಷ್ಟವಾಗಿತ್ತು. ಈ ಕ್ಯಾಟಗರಿಯನ್ನು ಇಲ್ಲಿ ಶಿಫ್ಟ್ ಮಾಡಿ ಎಂದು ಹೇಳಿದರೆ ಅಲ್ಲಿ ಆ ಜನಾಂಗದವರು ಯಾರೂ ಇಲ್ಲ. ಅಲ್ಲಿಗೆ ಏಕೆ ಕೊಡುತ್ತೀರಿ ಎಂದು ಕೇಳಿದರೆ ಇವತ್ತು ನಾವು ಉತ್ತರವನ್ನೇ ಹೇಳುವುದಾಕ್ಕಾಗುತ್ತಿರಲಿಲ್ಲ. ಆ ಸ್ಥಿತಿಯನ್ನು ಸಹ ತಾವು ಯೋಚನೆಯನ್ನು ಮಾಡಬೇಕಾಗುತ್ತದೆ. ಅಸೆಂಬ್ಲಿ ಎಲೆಕ್ಷನ್‌ನಲ್ಲಿ 10 ರಿಂದ 20 ವರ್ಷಕ್ಕೆ ಡಿಲಿಮಿಟೇಷನ್ ಬಂದಾಗ ಶಿಫ್ಟ್ ಮಾಡಿಕೊಳ್ಳುವುದು ಹಾಗೆಯೇ ಒಂದು ಪಂಚಾಯಿತಿಯಲ್ಲಿ ಐದೈದು ವರ್ಷಕ್ಕೆ ನೀವು ಶಿಫ್ಟ್ ಮಾಡಿಕೊಂಡು ಹೋಗುವುದು. ಆಕಸ್ಮಾತ್ ಆ ಜನಸಂಖ್ಯೆ ಇಲ್ಲವೆಂದಾಗ ಏನು ಮಾಡುತ್ತೀರಿ? ಇದರ ಬಗ್ಗೆ ಒಂದು ಸಣ್ಣ ಉದಾಹರಣೆಯನ್ನು ಕೊಡುತ್ತೇನೆ. 'ಎ' ಕ್ಯಾಟಗರಿ ಇದ್ದ ಕಡೆ 'ಬಿ' ಕ್ಯಾಟಗರಿಯವರನ್ನು ಅಧ್ಯಕ್ಷರನ್ನಾಗಿ, ಉಪಾಧ್ಯಕ್ಷರನ್ನಾಗಿ ಮಾಡಬಹುದು ಎಂದು ಒಂದು ಸರ್ಕ್ಯುಲರ್‌ನ್ನು ಕೊಟ್ಟರು. ನಮಗೆ ಉತ್ತರ ಹೇಳುವುದಕ್ಕೆ ಕಷ್ಟವಾಯಿತು. ಒಂದೊಂದು ತಾಲ್ಲೂಕಿಗೆ,

ಒಂದೊಂದು ಟಿಪಿಎಸ್ ಪಂಚಾಯಿತಿಗೆ ಒಂದೊಂದು 'ಬಿ' ಕ್ಯಾಟಗರಿ ಸೀಟ್ ಬಂದಿತ್ತು. ಅದನ್ನೆಲ್ಲಾ ಇಲ್ಲಿಗೆ ವರ್ಗಾವಣೆ ಮಾಡಬೇಕೆಂದರೆ ಅದು ಇಡೀ ತತ್ವಕ್ಕೆ ವಿರುದ್ಧವಾಗಿತ್ತು. 'ಬಿ' ಕ್ಯಾಟಗರಿಯಲ್ಲಿ ಯಾರಿಗೆ ಅಕಾಮ್‌ಡೇಟ್ ಮಾಡಬೇಕಾಗಿತ್ತೋ ಕನಿಷ್ಠ ಅವರನ್ನು ನಾವು ಜನರಲ್ ಆಗಿ ಮಾಡುವುದಕ್ಕೆ ಆಗಲಿಲ್ಲ. ನಾವು ಅವರಿಗೆ ಉತ್ತರವನ್ನು ಹೇಳುವುದಕ್ಕೆ ಹೋದರೆ ನಾವೆಲ್ಲರೂ ಸೇರಿಕೊಂಡು ದೊಡ್ಡ ಷಡ್ಯಂತ್ರ ಮಾಡಿಬಿಟ್ಟಿದ್ದೇವೆ. ಮೋಸ ಮಾಡಿದ್ದೇವೆ. ಯಾರನ್ನೋ ಜಯಿಸವುದಕ್ಕೆ ಈ ತಂತ್ರವನ್ನು ಮಾಡಿದ್ದೇವೆ ಎನ್ನುವ ಭಾವನೆ ಅಲ್ಲಿ ಸೃಷ್ಟಿಯಾಯಿತು. ಈ ಪ್ರಾತಿನಿಧ್ಯ ಹಕ್ಕನ್ನು ಕೊಡಬೇಕಾದರೆ ಅಲ್ಲಿರುವ ಬಹುಸಂಖ್ಯಾತರಿಗೆ ಹಕ್ಕನ್ನು ಕೊಡುವುದರಲ್ಲಿ ಯಾವುದೇ ತಪ್ಪಿಲ್ಲ. ನಾನು ಸನ್ಮಾನ್ಯ ಸಚಿವರಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಈ ಪಂಚಾಯಿತಿಯ ಸ್ಟ್ಯಾಫ್‌ನ್ನು ಏನು ಮಾಡುತ್ತೀರಿ ಎಂದು ಕೇಳಿದರೆ ನಾವು ಅಲ್ಲೇ ಮರ್ಜ್ ಮಾಡುತ್ತೇವೆಂದು ಹೇಳಿದ್ದಾರೆ. ನಾನು ಅನೇಕ ಸಲ ನಿಮ್ಮ ಸಭೆಗಳಲ್ಲಿ ಹೇಳಿದ್ದೇನೆ. ದಯಮಾಡಿ ಈ ಬಿಲ್ ಕಲೆಕ್ಟರ್ ಮತ್ತು ಇತರರು ಯಾರು ಇದ್ದಾರೆ ಮೊದಲು ಅವರನ್ನು ರಿಮೂವ್ ಮಾಡಬೇಕು. ಇವತ್ತು ಸೆಕ್ರೆಟರಿಗಳು ಇದ್ದಾರೆ ಒಂದೊಂದು ಪಂಚಾಯಿತಿಗೆ ಒಬ್ಬೊಬ್ಬರು, ಅವರನ್ನು ಎಲ್ಲಿಯಾದರೂ ಕಾನ್ಸೆನ್‌ಟ್ರೇಟ್ ಮಾಡಿ ಪಂಚಾಯಿತಿಗಳಿಗೆ ಹಂಚಿಕೆ ಮಾಡುವ ಕೆಲಸ ಮಾಡಬೇಕಾಗಿತ್ತು. ಎರಡನೆಯದು ಮಾನ್ಯ ಜ್ಞಾನೇಂದ್ರರವರು ಹೇಳಿದ್ದರಲ್ಲಿ ಒಂದು ಪಾಯಿಂಟ್ ಇದೆ. ಅನೇಕ ಕಡೆಗಳಲ್ಲಿ ಕಟ್ಟಡಗಳನ್ನು ಮಾಡಿ ಬಿಟ್ಟಿದ್ದೇವೆ. ಅನೇಕ ಕಡೆ ಪಂಚಾಯಿತಿ ಕೇಂದ್ರಗಳೆಂದು ಮಾಡಿದ್ದೇವೆ. ಇದರ ಬಗ್ಗೆ ಏನಾದರೂ ವೈಜ್ಞಾನಿಕವಾಗಿ ಚಿಂತನೆ ಮಾಡಿ ಈ ಪಂಚಾಯಿತಿ ವ್ಯವಸ್ಥೆಯನ್ನು ಮಾರ್ಪಾಟು ಮಾಡಬೇಕಾಗುತ್ತದೆ. ತಾವು ಈಗೇನು ಎರಡೂ ಸಾವಿರ ಚಿಲ್ಲರೆ ಪಂಚಾಯಿತಿಗೆ ಎಂದು ಹೇಳಿ ನಿಗದಿ ಮಾಡಿಕೊಂಡಿದ್ದೀರಿ ಆ ಸಂಖ್ಯೆ ಸ್ವಲ್ಪ ಹೆಚ್ಚಾದರೆ ಬಹುಶಃ ಏನೂ ತಪ್ಪಾಗಲಾರದು. ಅದನ್ನು ಸ್ವಲ್ಪ ವ್ಯಾಪಕವಾಗಿ ನೋಡಬೇಕು. ನೀವು ಉತ್ತರ ಕರ್ನಾಟಕ ಭಾಗಕ್ಕೆ ನಮ್ಮ ಭಾಗವನ್ನು ಹೋಲಿಸುವುದಕ್ಕೆ ಬರುವ ಹಾಗೆ ಇಲ್ಲ. ನಮ್ಮಲ್ಲಿ ಎರಡು ಕಿಲೋಮೀಟರ್ ಮೂರು ಕಿಲೋಮೀಟರ್‌ನಲ್ಲಿ ಒಂದೊಂದು ಬ್ಲಾಕ್‌ಗೆ ಎಲೆಕ್ಷನ್ ಮಾಡಬೇಕಾಗುತ್ತದೆ. ಆಮೇಲೆ ಇಬ್ಬರು ಮೂರು ಜನ ಮೆಂಬರ್ಸ್ ಒಂದು ಬ್ಲಾಕ್‌ನಲ್ಲಿ ಬರುತ್ತಿದ್ದರು. ಈಗ ಒಬ್ಬನೇ ಮೆಂಬರ್ ಒಂದು ಬ್ಲಾಕ್‌ನಲ್ಲಿ ಬರಬೇಕೆಂದು ಏನು ಮಾಡಲಿಕ್ಕೆ ಹೊರಟಿದ್ದೀರಿ ಮುನಿಸಿಪಾಲಿಟಿ ಎಲೆಕ್ಷನ್ ಮಾಡಿದ ಹಾಗೆ ಮಾಡಿದರೆ ಒಂದೊಂದು ಸಲ ನಮಗೆ ತೊಂದರೆಯಾಗುತ್ತದೆ. ಇಬ್ಬರು ಮೂರು ಜನ ಬಂದರೆ ನಾವು ಅಕಾಮಡೇಟ್ ಮಾಡಬಹುದಾಗಿತ್ತು. ಒಬ್ಬರು ಮಹಿಳೆಯರಲ್ಲಿ ಇರುತ್ತಿದ್ದರು; ಒಬ್ಬರು ಜನರಲ್‌ನಲ್ಲಿ ಇರುತ್ತಿದ್ದರು, ಒಬ್ಬರು ರಿಸರ್ವೇಷನ್ ಕ್ಯಾಟಗರಿಯಲ್ಲಿ ಇರುತ್ತಿದ್ದರು. ಎಲ್ಲರಿಗೂ ಅವಕಾಶ ಸಿಗುತ್ತಿತ್ತು ನಾವು ಹೇಳಬಹುದಾಗಿತ್ತು. ಸಿಂಗಲ್‌ಮ್ಯಾನ್ ಕಾನ್‌ಸ್ಟಿಟ್ಯೂಯೆನ್ಸಿ ಮಾಡುವುದನ್ನು ಸ್ವಲ್ಪ ಏನಾದರೂ ಮಲ್ಟಿಯಾಗಿ ಇಬ್ಬರು ಮೂರು ಜನ ಮಾಡಿ ಮತ್ತೆ ಒಂದೊಂದು ಬ್ಲಾಕ್ ಮಾಡುವ ವ್ಯವಸ್ಥೆಯನ್ನು ಜಾರಿಗೆ ತರುವುದಕ್ಕೆ ಆಗುತ್ತದೆಯೇ ಎನ್ನುವ ಬಗ್ಗೆ ಯೋಚನೆ ಮಾಡಬಹುದು. ಜನಸಂಖ್ಯೆಯ ಆಧಾರದ ಮೇಲೆ ಮಾಡಬಹುದು. ನಾವು ಅವರಿಗೆ ಒಬ್ಬರು ಜನರಲ್ ಇದ್ದಾರೆ, ಒಬ್ಬರು ಲೇಡಿ ಇದ್ದಾರೆ, ಒಬ್ಬರು ಬಿಸಿಎಂ ಇದ್ದಾರೆಂದು ಹೇಳುವುದಕ್ಕಾಗುತ್ತದೆ. ಇದರ ಜೊತೆಗೆ ಟ್ರಾನ್ಸಿಟರಿ ಅರೇಂಜ್‌ಮೆಂಟ್ ಏನಿದೆ ಇದಕ್ಕೆ ಎಲ್ಲಿಯಾದರೂ

ಒಂದು ಕಡಿವಾಣವನ್ನು ಹಾಕಲೇಬೇಕಾಗುತ್ತದೆ. ಇದು ಬಹುಶಃ ಮಾನ್ಯ ಪ್ರಕಾಶ್‌ರವರಿಗೂ ಹರ್ಷ ತಂದಿರುವ ವಿಷಯವಲ್ಲವೆಂದು ನಮಗೆ ಗೊತ್ತು. ಚುನಾವಣೆಗೆ ಹೋದಾಗ ಅಡ್ಮಿನಿಸ್ಟ್ರೇಟರ್‌ಗಳನ್ನು ಇಟ್ಟುಕೊಳ್ಳುವುದು ಅಥವಾ ಡಿ.ಸಿ. ಕುಳಿತುಕೊಂಡು ಅಡ್ಮಿನಿಸ್ಟ್ರೇಟರ್‌ಗಳನ್ನು ನೇಮಕ ಮಾಡುವುದು ಸರಿಯಲ್ಲ. ನಾನೂ ಕೂಡ ಅವರಲ್ಲಿ ಬೇಡಿಕೊಳ್ಳುತ್ತೇನೆ. ಇವತ್ತೇನು ಚುನಾಯಿತ ಸದಸ್ಯರು ಇದ್ದಾರೆ ಅವರೇ ಕಂಟಿನ್ಯೂ ಆಗುವುದಕ್ಕೆ ಈ ಪ್ರಾವಿಷನ್ ಅನ್ನು ಸೀಮಿತ ಮಾಡಬೇಕಾಗಿದೆ. ಮತ್ತೆ ತಾವು ಅಲ್ಲಿಗೆ ಯಾರನ್ನಾದರೂ ಸೇರಿಸುವುದು ಡೆಪ್ಯುಟಿ ಕಮೀಷನರ್ ಕಿತ್ತುಹಾಕಬಹುದೆನ್ನುವ ಪ್ರಾವಿಷನ್ ಹಿಂದಕ್ಕೆ ತೆಗೆದುಕೊಳ್ಳದೇ ಹೋದರೆ ನಾವು ನಜೀರ್‌ಸಾಬ್ ಹೆಸರನ್ನಾಗಲೀ ಎಸ್‌ಕೆಡೇ ಅವರ ಹೆಸರನ್ನಾಗಲೀ ಹೇಳುವುದಕ್ಕೆ ನಾವು ಸಮರ್ಥರಾಗಿ ಉಳಿಯುವುದಿಲ್ಲ. ಈ ವ್ಯವಸ್ಥೆಯಲ್ಲಿ ರಾಜಕಾರಣ ಮಾಡುವುದಕ್ಕೋಸ್ಕರ ಮಾಡಿಸಿಕೊಂಡಿದ್ದಾರೆನ್ನುವ ಆರೋಪವನ್ನು ಅವರು ತೆಗೆದುಕೊಳ್ಳಬಾರದು. ಇವತ್ತೇನು ಪಂಚಾಯಿತಿಯ ಅಭಿವೃದ್ಧಿ ದೃಷ್ಟಿಯಿಂದ, ಒಂದು ಮಾತನ್ನು ಮಾನ್ಯ ಘೋರ್ಪಡೆಯವರಿಗೆ ಕೇಳಲಿಕ್ಕೆ ಬಯಸುತ್ತೇನೆ. ಪಂಚಾಯಿತಿಯ ಆಧಾರದ ಮೇಲೆ ಹಣ ಬರುತ್ತಿತ್ತು ಎಂದು ನಾವ್ಯಾರೂ ತಿಳಿದುಕೊಂಡಿಲ್ಲ. ತಲಾನುದಾನ ಪಾಪ್ಯುಲೇಷನ್ ಆಧಾರದ ಮೇಲೆ ಬರುತ್ತಿತ್ತು.

ಶ್ರೀ ಕಾಗೋಡುತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಮಾಧುಸ್ವಾಮಿಯವರು ಜಿಲ್ಲಾಪಂಚಾಯಿತಿಯ ಸದಸ್ಯರಾಗಿ ಕೆಲಸ ಮಾಡಿದ್ದಾರೆ. ನಮ್ಮ ಅರಗಜ್ಞಾನೇಂದ್ರರವರು ಜಿಲ್ಲಾಪಂಚಾಯಿತಿಯಲ್ಲಿದ್ದರು. ಹಿಂದೆ ಇರತಕ್ಕ ಪಂಚಾಯಿತಿಗಳಿಗೆ ಆದಾಯದ ಮೂಲ ಏನಿತ್ತು? ಈಗಿರತಕ್ಕ ಪಂಚಾಯಿತಿಗಳಿಗೆ ಆದಾಯದ ಮೂಲ ಏನಿದೆ ? ವ್ಯತ್ಯಾಸ ಏನಾಗಿದೆ ?

ಶ್ರೀ ಜೆ. ಸಿ. ಮಾಧುಸ್ವಾಮಿ : ಸ್ವಾಮಿ ಜಿಲ್ಲಾಪಂಚಾಯಿತಿಗಳಿಗೆ ಹಿಂದೆ ಇದ್ದಷ್ಟು ಅಧಿಕಾರ ಅವರು ಮಾಡುತ್ತಿದ್ದ ವ್ಯವಸ್ಥೆ ಬಹುಶಃ ಇವತ್ತು ಇಲ್ಲ. ಆದಾಯದ ಮೂಲ ಇಲ್ಲದೇ ಹೋದರೂ, ಅಧಿಕಾರದ ಶಕ್ತಿಯಿತ್ತು ಅವರಿಗೆ. ಇವರ ಅನೇಕ ಇಲಾಖೆಗಳನ್ನು ನೇರವಾಗಿ ಅವರ ಕೆಳಗೆ ಕೊಟ್ಟಿದ್ದರು. ತಾವು ಬಂದಮೇಲೆ ಏನು ಮಾಡಿದಿರಿ?

ಶ್ರೀ. ಎಂ. ಪಿ. ಪ್ರಕಾಶ್ : ಅದು ಒಂದೇ ಅಲ್ಲ. (ಅ)ವರ್ಗ ಮತ್ತು (ಬ) ವರ್ಗ ಮಾಡಿ ತಲಾ ಆದಾಯದಲ್ಲಿ ಎರಡೂವರೆ ರೂಪಾಯಿಗಳನ್ನು ಜಿಲ್ಲಾಪಂಚಾಯಿತಿಗಳಿಗೆ ಕೊಡುತ್ತಿದ್ದೆವು, ಏಳೂವರೆ ರೂಪಾಯಿಗಳನ್ನು ಗ್ರಾಮಪಂಚಾಯಿತಿಗಳಿಗೆ ಕೊಡುತ್ತಿದ್ದೆವು. ಅದು ಮುಂದೆ ಹದಿನೈದು ರೂಪಾಯಿ ಆದಾಗ 5 ರೂಪಾಯಿ ಜಿಲ್ಲಾಪಂಚಾಯಿತಿಗೆ ಹೋಗುತ್ತಿತ್ತು, 10 ರೂಪಾಯಿ ಗ್ರಾಮ ಪಂಚಾಯಿತಿಗೆ ಹೋಗುತ್ತಿತ್ತು. ಅದು ಮಾನ್ಯ ಮಾಧುಸ್ವಾಮಿಗಳವರು ಹೇಳುವ ಮಾತಿನಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಅಲ್ಲಿ ಹಣ ಸಿಗುತ್ತಿತ್ತು. ಈಗ ನೀವು ಫ್ಲಾಟ್‌ರೇಟ್‌ನಲ್ಲಿ ಒಂದು ಲಕ್ಷ ಎಂದು ಹೇಳುತ್ತೀರಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ಥ್ರಿ ಟೈರ್ ಸಿಸ್ಟಂ ತಂದಮೇಲೆ ಇದು ಹಾಳಾಯಿತು. ತಾಲ್ಲೂಕು ಪಂಚಾಯಿತಿ ಮಧ್ಯ ಬಂದ ಮೇಲೆ ಇದು ಹೀಗಾಯಿತು.

ಶ್ರೀ ಕಾಗೋಡು ತಿಮ್ಮಪ್ಪ : ನೀವು ಆ ಕಾಲದಲ್ಲಿ ಕೆಲಸ ಮಾಡಿದವರು ಸಿಂಪಲ್ ಆಗಿ ಹೇಳಿ. ಆಗ ಪಂಚಾಯಿತಿಗೆ ಬರುತ್ತಿದ್ದ ಆದಾಯವೇನು? ಮಾನ್ಯ ಪ್ರಕಾಶ್‌ರವರು ಹೇಳಿದ ಹಾಗೆ ತಲಾ

ಆದಾಯದಲ್ಲಿ ಎರಡೂವರೆ ಪರ್ಸೆಂಟನ್ನು ಜಿಲ್ಲಾ ಪಂಚಾಯಿತಿಗೆ ಕೊಡುತ್ತಿದ್ದರು. ಏಳೂವರೆ ಪರ್ಸೆಂಟನ್ನು ಪಂಚಾಯಿತಿಗಳಿಗೆ ಕೊಡುತ್ತಿದ್ದರು. ಒಟ್ಟು ಎಷ್ಟಾಯಿತು ಅಲ್ಲಿಗೆ 10 ಆಯಿತು. 10 ಸಾವಿರ ಇರತಕ್ಕ ಒಂದು ಮಂಡಲ ಪಂಚಾಯಿತಿಗೆ ಎಷ್ಟು ಬರುತ್ತಿತ್ತು ? ಒಂದು ಲಕ್ಷ ರೂ. ಈಗ ಸಣ್ಣ ಪಂಚಾಯಿತಿ ಎಲ್ಲಾ ಪಂಚಾಯಿತಿಗಳಿಗೆ ಒಂದು ಲಕ್ಷ ರೂ. ಬರುತ್ತಿದೆ.

ಶ್ರೀ ಎಂ. ಪಿ. ಪ್ರಕಾಶ್ : ಈಗ ಏನಾಗಿದೆ ಅಂದರೆ 43ಜನ ಸದಸ್ಯರು ಇರತಕ್ಕ ಒಂದು ಪಂಚಾಯಿತಿಗೂ ಒಂದು ಲಕ್ಷ ರೂ. 7 ಜನ ಸದಸ್ಯರು ಇರತಕ್ಕ ಒಂದು ಪಂಚಾಯಿತಿಗೂ ಒಂದು ಲಕ್ಷ ರೂ.

ಶ್ರೀ ಕಾಗೋಡು ತಿಮ್ಮಪ್ಪ : ಆವಾಗ ಏನಿತ್ತು ?

ಶ್ರೀ ಎಂ. ಪಿ. ಪ್ರಕಾಶ್ : ಆಗ ಹಾಗೆ ಇರಲಿಲ್ಲ, ಜನಸಂಖ್ಯೆಯ ಆಧಾರದ ಮೇಲೆ ಇರುತ್ತಿತ್ತು.

ಶ್ರೀ ಕಾಗೋಡು ತಿಮ್ಮಪ್ಪ : 10 ಸಾವಿರ ಜನಸಂಖ್ಯೆ ಇರುವ ಕಡೆ ಒಂದು ಲಕ್ಷ ಬರುತ್ತಿತ್ತು. 5 ಸಾವಿರ ಜನ ಸಂಖ್ಯೆ ಇರುವ ಕಡೆ 50 ಸಾವಿರ ಬರುತ್ತಿತ್ತು. 15 ಸಾವಿರ ಜನಸಂಖ್ಯೆ ಇರುವ ಕಡೆ ಒಂದೂವರೆ ಲಕ್ಷ ರೂ. ಬರುತ್ತಿತ್ತು.

ಶ್ರೀ. ಎಂ. ಪಿ. ಪ್ರಕಾಶ್ : ಆಗ ಏನಾಗುತ್ತಿತ್ತು, ಆ ಗ್ರಾಮಪಂಚಾಯಿತಿಯ ಅವಶ್ಯಕತೆಯ ಅನುಗುಣವಾಗಿ, 43 ಜನ ಸದಸ್ಯರು ಇರತಕ್ಕ ಗ್ರಾಮಪಂಚಾಯಿತಿಯವರು ಒಂದು ಲಕ್ಷ ರೂಪಾಯಿ ಅನುದಾನ ತೆಗೆದುಕೊಂಡು ಏನು ಕೆಲಸ ನಿರ್ವಹಿಸುತ್ತಾರೆ ? ಚಿಂತರಪಳ್ಳಿ, ಹಗರಿ ಬೊಮ್ಮನಹಳ್ಳಿ ತಾಲ್ಲೂಕು ಅಲ್ಲಿ 43 ಜನ ಗ್ರಾಮಪಂಚಾಯಿತಿ ಸದಸ್ಯರು ಇದ್ದಾರೆ. ತಾವು ಮಲೆನಾಡನ್ನು ಗುರುತು ಇಟ್ಟುಕೊಂಡು ಹೇಳಿದರೆ ಹೇಗೆ ? ಬನ್ನಿ ನಮ್ಮ ಕಡೆಗೆ ಗೊತ್ತಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : 10 ಸಾವಿರ ಪಾಪ್ಯುಲೇಷನ್ ಇರತಕ್ಕ ಒಂದು ಪಂಚಾಯಿತಿ ಎಂದು ತಿಳಿದುಕೊಳ್ಳೋಣ. 10 ಸಾವಿರ ಸಂಖ್ಯೆಗೆ 400 ಜನರ ಪ್ರಕಾರ ಎಷ್ಟು ಸೀಟುಗಳು ಬರುತ್ತವೆ. ಎರಡೂವರೆ ಅಂದರೆ 25 ಜನ ಆಗುತ್ತಾರೆ. 25 ಜನ ಇರತಕ್ಕ ಪಂಚಾಯಿತಿಗೆ ಎಷ್ಟು ಬರುತ್ತದೆ ಒಂದು ಲಕ್ಷ ರೂಪಾಯಿ ಬರುತ್ತದೆ. ಆವಾಗ ಎಷ್ಟು ಬರುತ್ತಿತ್ತು? ಅಷ್ಟೇ. ಆದ್ದರಿಂದ ಆದಾಯದ ಮೂಲ ಇದೆಯಲ್ಲಾ ಅದು ಈಗ ಹೆಚ್ಚುಕಡಿಮೆ ಜಾಸ್ತಿಯೆಂದು ತಿಳಿದುಕೊಳ್ಳಬೇಕು. ಹೋಗಲಿ, ಈಗ ದೊಡ್ಡ ಪಂಚಾಯಿತಿ ಮಾಡುತ್ತಾರಲ್ಲಾ....

ಶ್ರೀ ಜೆ. ಸಿ. ಮಾಧುಸ್ವಾಮಿ : ನೀವು ಒಂದು ವಿಚಾರ ತಿಳಿದುಕೊಳ್ಳಿ, ನೀವು ಪಂಚಾಯಿತಿವಾರು ಹಂಚಿಕೆ ಮಾಡಿದಿರಿ. ಗ್ರಾಂಟ್ ಬರುತ್ತಿದ್ದುದು ತಲಾನುದಾವನೇ. ಜನಸಂಖ್ಯೆಯ ಆಧಾರದ ಮೇಲೆ ಗ್ರಾಂಟ್ ಬರುತ್ತಿತ್ತು. ನೀವು ಹಂಚುವಾಗ ನಿಮಗೆ ರಗಳೆ ಬೇಡವೆಂದು ಪಂಚಾಯಿತಿವಾರು ಹಂಚಿಬಿಟ್ಟಿರಿ. ನಿಮಗೆ ಕೇಂದ್ರ ಸರ್ಕಾರದವರು ಹಣಕೊಟ್ಟರೆ ಮತ್ತೊಂದು ಹಣ ಬಂದರೆ ತಲಾನುದಾನ ಬಿಟ್ಟರೆ ನಿಮಗೆ ಪಂಚಾಯಿತಿ ಆಧಾರದ ಮೇಲೆ ಬರುತ್ತದೆ ಎಂದು ನಾವು ತಿಳಿದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಇದನ್ನು ಕರೆಕ್ಟ್ ಮಾಡಬೇಕು. ತಲಾನುದಾನ ಎಂದು ಅದಕ್ಕೆ ಸ್ಪಷ್ಟವಾದ ಹೆಸರೇ ಇಟ್ಟಿದ್ದಾರೆ. ಈ ಸಲ ಏನು ಅಡ್ವಾನ್‌ಟೇಜ್ ಆಯಿತು ಮಾನ್ಯ ಪ್ರಕಾಶ್‌ರವರು ಬಂದಮೇಲೆ ಸ್ವಲ್ಪ ನಿಮಗೆ ಸ್ಟಾಂಪ್

ಡ್ಯೂಟಿ ಅರಿಯರ್ಸ್ ಎಲ್ಲಾ 10ನೇ ಹಣಕಾಸು ಕಮೀಷನ್‌ನಿಂದ ಹಣ ಬಂದಿದ್ದನ್ನು ಹಣ ಡೈವರ್ಟ್ ಮಾಡಿದ್ದರಿಂದ ಪಂಚಾಯಿತಿಗಳಿಗೆ ಈ ಸಲನೇ ಸ್ವಲ್ಪ ಹಣ ಜಾಸ್ತಿ ಬಂದಿರುವುದು. ಎರಡನೆಯದು ತಮಗೆ ಗೊತ್ತಾಗಬೇಕು, ಆಗ ತಾಲ್ಲೂಕು ಪಂಚಾಯಿತಿ ಇರಲಿಲ್ಲ. ಎರಡೇ ಏಜೆನ್ಸಿಗಳು ಇದ್ದುದು. ಜಿಲ್ಲಾ ಪಂಚಾಯಿತಿ ಮತ್ತು ಮಂಡಲಪಂಚಾಯಿತಿ.

ಶ್ರೀ ಅರಗಜ್ಞಾನೇಂದ್ರ : ಆಗ ಸ್ಟಾಂಪ್ ಡ್ಯೂಟಿ ಹಣ ಪಂಚಾಯಿತಿಗೆ ಹೋಗುತ್ತಿತ್ತು. ಈಗ ತಾಲ್ಲೂಕು ಪಂಚಾಯಿತಿ.

ಶ್ರೀ ಕಾಗೋಡುತಿಮ್ಮಪ್ಪ : ರೋಜ್‌ಗಾರ್ ಹಣ ನೇರವಾಗಿ ಪಂಚಾಯಿತಿಗೆ ಬರುತ್ತಿತ್ತು. ನಿಮ್ಮ ತಲೆಯಾಗೆ ಏನಿದೆ ರಾಜ್ಯಸರ್ಕಾರ ಕೊಟ್ಟಿದೆಯೆಂದು, ಅದಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಪಂಚಾಯಿತಿಗೆ ರೋಜ್‌ಗಾರ್, ಸ್ಟಾಂಪ್ ಡ್ಯೂಟಿ, ತಲಾನುದಾನ ಎಲ್ಲಾ ಹೋಗುತ್ತಿತ್ತು. ಕೆಲವು ಕಡೆ ಅವರದೇ ರಿಸೋರ್ಸ್ ಇತ್ತು. ನಿಜವಾಗಿ ನಿಮಗೆ ಹೇಳಬೇಕೆಂದರೆ ಒಳ್ಳೆಯ ಪಂಚಾಯಿತಿಯವರು ಮೈನ್ಸ್ ಇರುವ ಕಡೆ ಲೆವಿ ಕೂಡ ಕಲೆಕ್ಟ್ ಮಾಡಿದ್ದಾರೆ. ಸೆಸ್ ಕೂಡ ಕಲೆಕ್ಟ್ ಮಾಡಿದ್ದಾರೆ ಆಗ.

ಶ್ರೀ ಕಾಗೋಡು ತಿಮ್ಮಪ್ಪ : ಈಗ ವಯಬಲಿಟಿ ಮಾಡಬೇಕೆಂದು ಹೇಳುತ್ತಾರಲ್ಲಾ, ವಯಬಲಿಟಿ ಅಂದರೆ ಹಣಕಾಸು ತಾನೇ ಈಗ ? ಹಣಕಾಸು ಚೆನ್ನಾಗಿದ್ದರೆ ವಯಬಲಿಟಿ ಆಗುವುದು. ಇಲ್ಲದಿದ್ದರೆ ಇಲ್ಲ. ಒಂದು ಲಕ್ಷ ಕೊಡುವ ಕಡೆ ಎರಡು ಲಕ್ಷ ಕೊಡಿರಿ. ವಯಬಲಿಟಿ ಆಗಿಯೇ ಆಗುತ್ತದೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಸಾರ್ ಈಗ Viability can be both ways ನೀವು ಎಕ್ಸ್‌ಪೆಂಡಿಚರ್ ಕಡಿಮೆ ಮಾಡಿದರೂ ವಯಬಲ್ ಆಗಬಹುದು. If you can reduce the unnecessary Expenditure or overhead, it is stillviable. ಮೂರು ಪಂಚಾಯಿತಿಯ ಸ್ಟಾಫ್‌ಗೆ ಕೊಡುವ ಸಂಬಳವನ್ನು ಇವತ್ತು ಗ್ರಾಮೀಣಪ್ರದೇಶದ ಅಭಿವೃದ್ಧಿಗೆ ಖರ್ಚು ಮಾಡತಕ್ಕದ್ದು ತಪ್ಪೆಂದು ತಾವು ಹೇಳುತ್ತೀರಾ ?

SRI M.P. PRAKASH : Rightly you have pointed out, ಮಾನ್ಯ ಕಾಗೋಡುತಿಮ್ಮಪ್ಪನವರೆ, 36% of the the non-land revenue expenditure has been earmarked for the local-self Government. Out of 360, 85% is given to Panchayatraj system and the remaining 15% is given to local bodies. Because of this acceptance of,the 10th Finance Commission's recommendations, not less than Rs. 60,000 each gram panchayat is getting; not less than Rs.5 lakhs, the taluka Panchayats is getting. Not less than Rs. 32 lakhs, they are getting it.

ಶ್ರೀ ಜೆ. ಸಿ. ಮಾಧುಸ್ವಾಮಿ : ಅದರ ಜೊತೆಗೆ ಕೇಳಿ, ಅವೊತ್ತು ಮಂಡಲಪಂಚಾಯಿತಿ ಅಧ್ಯಕ್ಷರು would have been automatically Ex-officio taluk Panchayat Advisory Commitee member. He was involved in the entire taluk development. ಇವತ್ತು

ಆ ಸ್ಥಿತಿಯಿಲ್ಲ. ಪಂಚಾಯಿತಿ ಅಧ್ಯಕ್ಷರಾಗಿ ಆಗಲು ಯಾರೂ ಲಾಯಕ್ಕಿಲ್ಲ ಗೌರವಸ್ಥರು. ಇವತ್ತು ಪಂಚಾಯಿತಿಗೆ ಬರುವ ಗ್ರಾಂಟ್ಸ್ ಟಿಪಿಎಸ್‌ಗೆ ಕಟ್ ಆಗುತ್ತದೆ. ಇನ್ನೊಂದು ಕಾಲಕಾಲಕ್ಕೆ ಸರ್ಕ್ಯುಲರ್, ಇಂಥಿಂಥವರಿಗೆ ಇಂಥಿಂಥ ಇಲಾಖೆಯ ಮೇಲಿನ ಅಧಿಕಾರವನ್ನು ಕೊಡುತ್ತಿದ್ದೇವೆಂದು ಹೇಳಿ. ಇವತ್ತು ಪಂಚಾಯಿತಿಯವರು ಎಲ್ಲಿ ಕೆಲಸ ಮಾಡಬೇಕು? ತಾಲ್ಲೂಕು ಪಂಚಾಯಿತಿ ಏನು ಕೆಲಸ ಮಾಡಬೇಕು? ಜಿಲ್ಲಾ ಪಂಚಾಯಿತಿ ಹೇಗೆ ಕೆಲಸ ಮಾಡಬೇಕೆನ್ನುವುದು ಇವತ್ತು ಜಿಜ್ಞಾಸೆಯಾಗಿದೆ.

ಶ್ರೀ ಕಾಗೋಡುತಿಮ್ಮಪ್ಪ : ಆಕ್ಟ್‌ನಲ್ಲಿ ಇಲ್ಲವಾ ?

ಶ್ರೀ ಜೆ. ಸಿ. ಮಾಧುಸ್ವಾಮಿ : ಯಾವ ಆಕ್ಟ್ ಹೇಳುತ್ತೀರಿ, ಸರ್ಕ್ಯುಲರ್ ಇಲ್ಲವಾ ಇವತ್ತು; ಎಷ್ಟು ಸರ್ಕ್ಯುಲರ್‌ಗಳು ಬರುತ್ತವೆ? ದಿನನಿತ್ಯ ಬರುತ್ತಿವೆ. ಎರಡು ಮೂರು ಪಂಚಾಯಿತಿಯ ವ್ಯಾಪ್ತಿಯಿಂದ ಬರುವ ಟಿಪಿಎಸ್ ಮೆಂಬರ್‌ಗಳು ಅವರವರಿಗೆ ಬೇಕಾದ ಒಂದೇ ಪಂಚಾಯಿತಿಯಲ್ಲಿ ಹಣ ಖರ್ಚು ಮಾಡುತ್ತಿರುವ ನೂರಾರು ಹಗರಣಗಳು ನಮ್ಮ ಹತ್ತಿರ ಇದೆ. ಪ್ರತಿ ಮೀಟಿಂಗ್‌ನಲ್ಲಿ ಕೂತು ಹೇಳುತ್ತೇವೆ, ಎಂಟೈರ್ ಕಾನ್ಸ್‌ಸ್ಟಿಟ್ಯುಯೆನ್ಸಿಗೆ ಖರ್ಚುಮಾಡಿಯೆಂದು. ಅವರಿಗೆ ಆಸಕ್ತಿಯಿರುವುದಿಲ್ಲ. ಇವತ್ತು ನೀವು ಅವರಿಗೆ ಕೊಡುತ್ತಿರುವ ಹಣ 15-20 ಪರ್ಸೆಂಟ್ ಹಣ ಒಂದೇ ಕಡೆ ಖರ್ಚಾಗುತ್ತದೆ. ಈಗ ಏನು ಎಂ. ಪಿ. ಗ್ರಾಂಟ್ ಒಂದೇ ಕಡೆ ಖರ್ಚು ಆಗುತ್ತಿದೆಯೆಂದು ಮಾತನಾಡುತ್ತಿದ್ದೇವೆ, ಡಿಸ್ಟ್ರಿಕ್ಟ್‌ಗೆ ಬರಬೇಕಾದ ಗ್ರಾಂಟ್ ಯಾವುದೇ ಒಂದೇ ಕಡೆ ಖರ್ಚಾಗಿ ಇಂಬ್ಯಾಲೆನ್ಸ್ ಆಗಿದೆಯೆಂದು ತಾವು ಟಿಪಿಎಸ್ ವ್ಯವಸ್ಥೆ ಜಾರಿಗೆ ತಂದಮೇಲೆ ಅದೇ ಸೃಷ್ಟಿ ಆಯಿತು. ಪಂಚಾಯಿತಿಗಳು ಅನ್‌ವೀಲ್ಡಿ ಆದಮೇಲೆ, ನೀವು ಒಂದೇ ಒಂದು ಮೆಂಬರ್ಸ್ ಜಾಸ್ತಿಯಾದಾಗ, ತಮಗೆ ಸತ್ಯವಾದ ಮಾತನ್ನು ಹೇಳುತ್ತಿದ್ದೇನೆ. ಪಂಚಾಯಿತಿಗಳಲ್ಲಿ ಯಾವ ಕಾಮಗಾರಿ ಕೆಲಸ ಮಾಡಬೇಕೆನ್ನುವ ವ್ಯವಸ್ಥೆಯಿಲ್ಲ. ಮೆಂಬರ್‌ವಾರು ಹಂಚಿಕೆ. ನೀವು ಕೊಡುವ ಅನುದಾನವನ್ನು ಮೆಂಬರ್‌ವಾರು ಹಂಚಿಕೆ ಮಾಡಿಕೊಂಡು ಅವರವರ ಕಾನ್ಸ್‌ಸ್ಟಿಟ್ಯೂಯೆನ್ಸಿಗೆ ಅವರವರ ಹೆಸರಿಗೆ ಇಷ್ಟಿಷ್ಟು ಎಂದು ಖರ್ಚು ಹಾಕಿಬಿಡುವುದು.

ನೀವು ಎಲ್ಲಿ ಖರ್ಚು ಮಾಡುತ್ತೀರಿ, ಏನು ಖರ್ಚು ಮಾಡುತ್ತೀರಿ ಎಂಬುದಕ್ಕೆ ಇವತ್ತು ಅಕೌಂಟಬಲಿಟಿ ಇಲ್ಲ. ಸ್ವಲ್ಪ ಯೋಚನೆ ಮಾಡಿ. ದೊಡ್ಡ ಪಂಚಾಯ್ತಿಯಾಗಿ, ಮೆಂಬರ್ಸ್ ಕಡಿಮೆಯಾದರೆ, ಕನಿಷ್ಟ ನೀವು ಕೊಡುವ ಹಣವನ್ನು ಯಾವುದಾದರೂ ಪರ್ಮನೆಂಟ್ ಸ್ಟ್ರಕ್ಚರ್‌ಗೆ ಅಸೆಟ್ ಜನರೇಟ್ ಆಗುವಕಡೆ ಖರ್ಚು ಮಾಡಲಿಕ್ಕೆ ಅನುಕೂಲವಾಗುತ್ತದೆ. ಅದನ್ನು ಬಿಟ್ಟು ನೀವು ಮಾಡಿದ್ದಿರಿ ಎಂಬ ಒಂದು ಕಾರಣಕ್ಕೆ, ಇದೇ ಸ್ಥಿತಿ ಇರಬೇಕೆಂದು ಕೇಳುವುದರಲ್ಲಿ ಏನು ಅರ್ಥ ಇಲ್ಲ. ಸನ್ಮಾನ್ಯ ಅಧ್ಯಕ್ಷರೇ, ನಾವು ಸನ್ಮಾನ್ಯ ಘೋರ್ಪಡೆಯವರಿಗೆ ಭಾರಿ ಗೌರವ ಕೊಡುತ್ತಾ ಇದ್ದೇವೆ. ಏಕೆಂದರೆ, ಅವತ್ತು ಇದೆಲ್ಲಾ ಅವರಿಗೆ ಅರ್ಥವಾಗಿತ್ತು. ಆದರೆ, ಇದನ್ನೆಲ್ಲಾ ಇಂಪ್ಲಿಮೆಂಟ್ ಮಾಡುವುದಕ್ಕೆ ಆಗಲಿಲ್ಲ. ನಾವು ಅಲ್ಲಿ ಕೂತು ಕೇಳಿದ್ದೇವೆ. ಡಿ.ಸಿ.ಗಳಿಗೆ ಇಷ್ಟು ಅಧಿಕಾರ ಕೊಡಬೇಡಿ. ಇ. ಓ. ಗಳಿಗೆ ಇಷ್ಟು ಅಧಿಕಾರ ಕೊಡಬೇಕು, ಅವರು ಬಂದು ನಮ್ಮ ತಲೆ ಮೇಲೆ ಸವಾರಿ ಮಾಡುವ ಅಧಿಕಾರವನ್ನು ಬಿಲ್ಲಿನಲ್ಲಿ ಕೊಟ್ಟಿದ್ದೀರಿ ಎಂದು ಅವತ್ತೇ ನಾವು ಕೇಳಿದೆವು. ನಾವು ಆ ಕಡೆ ಕುಳಿತಾಗ, ಈ ಕಡೆಯವರಿಗೆ ಅರ್ಥವಾಗಿರಲಿಲ್ಲ. ಆದರೆ, ಅವರಿಗೆ ಅರ್ಥವಾಯಿತು. He was forced to go

out of this august House. ನಮಗೆ ಇವತ್ತೂ ನೋವು ಇದೆ. ನಾನು ನಿಜವಾಗಿಯೂ ಹೇಳುತ್ತಿದ್ದೇನೆ. ಮಾನ್ಯ ಘೋರ್ಪಡೆಯವರು ರಾಜಿನಾಮೆ ಕೊಡುವಂಥ ಸ್ಥಿತಿ ಅವತ್ತು ಏಕೆ ನಿರ್ಮಾಣವಾಗಿತ್ತು. ? ನಾನು ರಾಜಕಾರಣ ಬಿಟ್ಟು ಮಾತನಾಡಬೇಕೆಂದರೆ, ಇವತ್ತೇನು ಬಿಲ್ ತಂದಿದ್ದಾರೆ, ಇದಕ್ಕೆ ಸ್ವಲ್ಪ ತಿದ್ದುಪಡಿಗಳನ್ನು ಗ್ರಾಮೀಣ ಸಚಿವರು ಮಾಡುಕೊಳ್ಳಬೇಕಾಗುತ್ತೆ. 8 ಕಿಲೋಮೀಟರ್ ಎಂಬುದನ್ನು 5 ರಿಂದ 6 ಕಿಲೋಮೀಟರಿಗೆ ಇಳಿಸಬೇಕು. ಪ್ರಾತಿನಿಧಿಕ ಸಂಖ್ಯೆ ಏನಿದೆ, ಒಂದು ಸಾವಿರ ತುಂಬಾ ಜಾಸ್ತಿಯಾಗುತ್ತದೆ. ಇದನ್ನು ಕಡಿಮೆ ಮಾಡಬೇಕು. ಮತ್ತೆ ಪಂಚಾಯ್ತಿಗಳನ್ನೂ 10ಸಾವಿರದಿಂದ 16 ಸಾವಿರ ಭಾರಿ ಹ್ಯೂಜ್ ಗ್ಯಾಪ್ ಆಯಿತು. ಅಷ್ಟೊಂದು ಮಾಡುವುದಕ್ಕಾಗುವುದಿಲ್ಲ. ಇದನ್ನು ಮಾಡ ಬೇಕೆಂದು ಕೇಳಿಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀಮತಿ ಪ್ರಮೀಳಾ ನೇಸರ್ಗಿ(ಚಾಮರಾಜಪೇಟೆ) : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ಸಂಪೂರ್ಣವಾಗಿ ಸನ್ಮಾನ್ಯ ಘೋರ್ಪಡೆಯವರು ಹೇಳಿದಂತಹ ಮಾತನ್ನು ಒಪ್ಪುತ್ತೇನೆ. ಅವರು ಅಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಏನು ಹೇಳಿದ್ದಾರೆ. ಅದಕ್ಕೆ ಇದು ತದ್ವಿರುದ್ಧವಾಗಿ ಆಗಿದೆ. ಇದರ ಬಗ್ಗೆ ಅವರು ವಿವರಣೆ ಕೊಡಬೇಕಾಗುತ್ತದೆ. ಸಂವಿಧಾನದಲ್ಲಿ ಇರತಕ್ಕಂಥಾದ್ದು ಮತ್ತು ಆಕ್ಟ್‌ನಲ್ಲಿರತಕ್ಕಂಥಾದ್ದು ಒಂದೇ ಆಗಿದೆ. ಈಗ ಅದರಲ್ಲಿ ಭೇದಭಾವ ಇದೆಯೆಂದು ಆಬ್ಜೆಕ್ಟ್ ಅಂಡ್ ರೀಸನ್ಸ್‌ನಲ್ಲಿ ಹೇಳಿ ಜಸ್ಟಿಫೈ ಮಾಡಿಕೊಳ್ಳುವುದಕ್ಕೆ ಏನು ಹೋಗಿದ್ದಾರೆ, ಅದು ಸರಿಯಾದುದಲ್ಲ. ಈ ಸಂದರ್ಭದಲ್ಲಿ ಎರಡು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ರಿಪಿಟೇಷನ್ ಮಾಡುವುದಕ್ಕೆ ಇಷ್ಟ ಪಡುವುದಿಲ್ಲ. ಏಕೆಂದರೆ, ಕಾನೂನಿನ ಪ್ರಕಾರ ಹೇಳಬೇಕಾದುದನ್ನು ಈಗಾಗಲೇ ಸನ್ಮಾನ್ಯ ಘೋರ್ಪಡೆಯವರು ಹೇಳಿದ್ದಾರೆ. ನಾನು ಎರಡು ಮಾತು ಹೇಳುವುದೇನೆಂದರೆ, ಸೆಕ್ಷನ್ 4 ಮತ್ತು 5ಕ್ಕೆ ತಾವೇನು ಅಮೆಂಡ್‌ಮೆಂಟ್ ತರುವುದಕ್ಕೆ ಹೊರಟಿದ್ದೀರಿ, ಇದು ನಮ್ಮ ಅಸೆಂಬ್ಲಿ ಸಾರ್ವಭೌಮತ್ವ ನಮ್ಮ ಹಕ್ಕನ್ನು ಯಾರೂ ಕೂಡ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಎಷ್ಟು ಜನ ಇರಬೇಕು, 400 ಜನಕ್ಕೆ ಒಬ್ಬ ಪ್ರತಿನಿಧಿ ಇರಬೇಕೇ ಅಥವಾ ಸಾವಿರ ಜನಕ್ಕೆ ಪ್ರತಿನಿಧಿ ಇರಬೇಕೇ ಅಥವಾ ಕೆಲವು ಸದಸ್ಯರು ಹೇಳಿದಹಾಗೆ 800 ಜನರಿಗೆ ಪ್ರತಿನಿಧಿ ಇರಬೇಕೇ ಅದು ನಮ್ಮ ವಿಸ್‌ಡಮ್. ನಮ್ಮ ವಿಸ್‌ಡಮ್ ಪ್ರಕಾರವಾಗಿ ನಾವು ತೀರ್ಮಾನ ಮಾಡುವುದು. ಈ ಹಕ್ಕನ್ನು ತೆಗೆದುಕೊಳ್ಳುವುದಕ್ಕೆ ಯಾರಿಗೂ ಕೂಡ ಹಕ್ಕು ಇಲ್ಲ. ಅಥವಾ ಆ ಅಮೆಂಡ್‌ಮೆಂಟ್ ತರುವುದಕ್ಕೆ ಹಕ್ಕಿಲ್ಲವೆಂದು ನಾವು ಹೇಳುವುದಕ್ಕಾಗುವುದಿಲ್ಲ. ಕಾನೂನಿನ ಬಗ್ಗೆ ಹಕ್ಕು ತರುವುದಕ್ಕೆ ತಮಗೆ ಸಂಪೂರ್ಣವಾದ ಅಧಿಕಾರ ಇದೆ. ಆದರೆ, ತಾವು ಯಾವುದೇ ಕಾನೂನು ತರತಕ್ಕ ಸಂದರ್ಭದಲ್ಲಿ, ರಾಜ್ಯಾಂಗಕ್ಕೆ ವಿರುದ್ಧವಾಗಿ ಯಾವುದೇ ಕಾನೂನು ತರುವುದಕ್ಕೆ ಆಗುವುದಿಲ್ಲ. We are bound by the Constitution. ----- -- 243(ಇ)ಇಲ್ಲಿ "not later than 5 years" ------------ಎಂದು ಹೇಳಿದ್ದಾರೆ. ಯಾವುದೇ ಸದಸ್ಯರು 5 ವರ್ಷದ ನಂತರ ಇರುವುದಕ್ಕೆ ಅಧಿಕಾರ ಇಲ್ಲ. ಇಂತಾದ್ದರ ಬಗ್ಗೆ under the guise of transitory provision ಎಂದು ತಾವು ತರುವುದಕ್ಕೆ ಬರುವುದಿಲ್ಲ. ಪರೋಕ್ಷವಾಗಿ ತಾವು ಹೇಳುವುದಕ್ಕೋಸ್ಕರ ಯಾವುದೇ ಕಾರಣದಿಂದಲೂ ತರುವುದಕ್ಕೆ ಬರುವುದಿಲ್ಲ. ಅದೇರೀತಿಯಾಗಿ ಸಂವಿಧಾನದಲ್ಲಿ ರೊಟೇಷನ್ ಇರಬೇಕೆಂದು ಹೇಳಿದಾಗ, ನೀವು ಡಿಲೀಟ್ ಎಂದು ಹೇಳಿ, ಸೆಕ್ಷನ್

5ಗೆ ಏನು ಅಮೆಂಡ್‌ಮೆಂಟ್ ತಂದು, ಸೆಕ್ಷನ್ 2 ಟು ಪ್ರಾವಿಷೋ 4 ತೆಗೆದು ಡಿಲೀಟ್ ಮಾಡುವುದಾಗಿ ಹೇಳುತ್ತೀರಲ್ಲ. ಅದನ್ನು ತೆಗೆಯುವುದಕ್ಕೆ ಬರುವುದಿಲ್ಲ. The deletion is illegal. ನೀವು ಹೇಳಬೇಕಾದರೆ ಬಹುಶ:ಅಬ್ಜಕ್ಟ್ ಅಂಡ್ ರೀಸನ್ಸ್‌ನಲ್ಲಿ ಲೀಡರ್‌ಷಿಫ್ ಬೆಳೆಸಬೇಕು, ಒಂದೇಕಡೆ ಇರಬೇಕಾಗುತ್ತದೆ ಎಂದು ಹೇಳುತ್ತೀರಿ. ಇದನ್ನು ಮಾಡಬೇಕಾದರೆ ಮೆಥೆಡ್ ಇದೆ. There must be method in madness also. ಎಂದು ಹೇಳುತ್ತಾರೆ. ಆ ರೀತಿ ಇದ್ದರೆ ತಾವು ಹೇಳಬಹುದಾಗಿತ್ತು. ರೊಟೇಷನ್ ಐದು ವರ್ಷಕ್ಕೊಂದು ಸಲ ಎಂಬುದಕ್ಕೆ ಬದಲಾಗಿ 10 ವರ್ಷಕ್ಕೊಂದು ಸಲ ಎಂದು ಹೇಳಬಹುದಾಗಿತ್ತು. ಅಥವಾ 15 ವರ್ಷಕ್ಕೊಂದು ಸಲ ಎಂದು ಹೇಳಬಹುದಾಗಿತ್ತು. ಅದರೆ, ರೊಟೇಷನ್ನೇ ಇಲ್ಲ, ತೆಗೆದು ಹಾಕುತ್ತೇವೆಂದು ಹೇಳತಕ್ಕಂತಾದ್ದು ರಾಜ್ಯಾಂಗದ ಮುಖಾಂತರವಾಗಿ ನಿಲ್ಲತಕ್ಕಂತಾದ್ದಲ್ಲ. ಈ ಪ್ರಾವಿಸೋಗೆ ರೀಸೆಂಟಾಗಿ ಏನು ಮಾಡಿದ್ದೀರಿ, ಇದು ಕೋರ್ಟಿನಲ್ಲಿ ನಿಲ್ಲತಕ್ಕದ್ದಲ್ಲ. It is quite contrary to the Constitution. It will never be held valid in the Court

ನೀವು ದಯವಿಟ್ಟು ಆರ್ಡಿನೆನ್ಸ್ ಹೇಗಿದ್ದರೂ ಅಪ್ ಹೋಲ್ಡ್ ಮಾಡಿದ್ದರು. ಸುಮ್ಮನೆ ಆರ್ಡಿನೆನ್ಸ್‌ಗೆ ಹೆಚ್ 4 ಅಂಡ್ 5 ಏನಾಗಿತ್ತು. ಅದಕ್ಕೆ ಸುಮ್ಮನೇ ಇರುವುದು ಬಿಟ್ಟು ಒಂದು ಅಡಿಷನಲ್ transitory provision ಹಾಕಿಕೊಂಡಿದ್ದೀರಿ. ನನಗನ್ನಿಸುತ್ತದೆ. under the guise of transitory provision,

ಇರಬೇಕಾದ್ದು, ಇಲ್ಲದ್ದು ಎಲ್ಲವನ್ನೂ ತಂದುಕೊಟ್ಟಿದ್ದಾರೆ. ಒಂದೇ ಒಂದು ಉದಾಹರಣೆ ಹೇಳಬೇಕಾದರೆ, ಸಿವಿಲ್ ಅಂಡ್ ಕ್ರಿಮಿನಲ್ ಲೈಯಾಬಿಲಿಟಿ ಬೇರೆ ಮುನಿಸಿಪಾಲಟಿಗೆ ಅಥವಾ ಗ್ರಾಮಪಂಚಾಯ್ತಿಗೆ criminal liability, I have yet to come across, Civill liability, I can understand. ಸಾಲ ಯಾರಾದರೂ ಕೊಡಬೇಕಾದರೆ, ಇನ್ನೊಂದು ಸಿವಿಲ್ ಲೈಯಾಬಿಲಿಟಿ ಕೊಡಬೇಕಾಗುತ್ತದೆ ಎಂದು. ಆದರೆ, ಕ್ರಿಮಿನಲ್ ಲೈಯಾಬಿಲಿಟಿ ಕೂಡ ಸಬ್ಸಿಕ್ವೆಂಟ್ಲಿ ಬರತಕ್ಕಂತಾದ್ದು. ಗ್ರಾಮ ಪಂಚಾಯ್ತಿಗೆ, ಮರ್ಜ್ ಆಗಿದ್ದಕ್ಕೆ ದೊಡ್ಡ ಪಂಚಾಯ್ತಿಗೆ ಹೋಗುತ್ತದೆಂಬುದನ್ನು ಯಾರೂ ಕಂಡಿಲ್ಲ. ಯಾರೋ ಮರ್ಡರ್ ಮಾಡಿದರೆ, ಇನ್ನೊಬ್ಬರ ಮೇಲೆ ಹಾಕುವುದಕ್ಕೆ ಅಥವಾ ಯಾವುದಾದರೂ ಲೈಯಾಬಿಲಿಟಿ, ಕ್ರಿಮಿನಲ್ ಲೈಯಾಬಿಲಿಟಿ ಎಂದೂ ಕೂಡ ಯಾವ ಕೋರ್ಟಿನಲ್ಲೂ ಊರ್ಜಿತವಾಗತಕ್ಕದ್ದಲ್ಲ. ಇದನ್ನು ಸ್ವಲ್ಪ ನೋಡಬೇಕಾಗಿತ್ತು. ಈ transitory provision ಏನು ತಂದಿದ್ದೀರಿ, ಇದು ಮಾಡುವುದಕ್ಕೆ ಖಂಡಿತವಾಗಿಯೂ ಬರುವುದಿಲ್ಲ. ಈ ಪ್ರಾವಿಷನ್ ಅಡಿಯಲ್ಲಿ ತಾವು ಏನೂ ಮಾಡುವುದಕ್ಕಾಗುವುದಿಲ್ಲ. transitory provision ಯಾವಾಗ ಬರುತ್ತದೆ ಎಂದರೆ, 5 ವರ್ಷದೊಳಗೆ ಸಂವಿಧಾನದ ಪ್ರಕಾರ ಏನು ಗ್ರ್ಯಾಂಟ್ ಕೊಟ್ಟಿದ್ದಾರೆ, ಯಾವ ಅನುಮತಿ ಕೊಟ್ಟಿದ್ದಾರೆ, 5 ವರ್ಷ ಗ್ರಾಮ ಪಂಚಾಯಿತಿ ಇರಬೇಕು ಎಂದು ಹೇಳಿದ್ದಾರೆ, ಅವರ ಟರ್ಮ್ 5 ವರ್ಷ ಇದೆಯೆಂದು ಹೆಳಿದ್ದಾರೆ. ಆ ಸಂದರ್ಭದಲ್ಲಿ ಯಾವುದಾದರೂ ಕಾರಣಗಳಿಂದ, ಆ ಗ್ರಾಮ ಪಂಚಾಯಿತಿ ಇಲ್ಲದೇ ಇರತಕ್ಕಂಥ ಸಂದರ್ಭ ಬಂದಾಗ only between that particular period - - - - - - ನೀವು ಈ ಅಧಿಕಾರ ಮಾಡುವುದಕ್ಕೆ ಬರುತ್ತದೆಯೇ ಹೊರತು 5 ವರ್ಷ ಆದ ನಂತರ, you cannot use

transitory provision

ಈ ಕಾನೂನನ್ನು ತಾವು ರಾಜ್ಯಾಂಗಕ್ಕೆ ವಿರುದ್ಧವಾಗಿ ಮಾಡಿ, ಇದರಡಿಯಲ್ಲಿ ಈಗಿರತಕ್ಕ ಹಳೆಯ ಮೆಂಬರುಗಳನ್ನು, ಮತ್ತು ಡೆಪ್ಯುಟಿ ಕಮೀಷನರ್ ಅಧಿಕಾರದಿಂದ ಅವರನ್ನು ಎಕ್ಸ್‌ಟೆಂಡ್ ಮಾಡುತ್ತೇನೆ, ಅಥವಾ ಅವರನ್ನೇ ಕಂಟಿನ್ಯೂ ಮಾಡುತ್ತೇವೆಂದು ಹೇಳುವುದು ರಾಜ್ಯಾಂಗಕ್ಕೆ ವಿರುದ್ಧವಾಗುತ್ತದೆ; ಇದು ಊರ್ಜಿತವಾಗತಕ್ಕದ್ದಲ್ಲ. ಆದ್ದರಿಂದ ಸೆಕ್ಷನ್ -4 ಪರವಾಯಿಲ್ಲ, ಸೆಕ್ಷನ್ 5ರಲ್ಲಿ, ಫಸ್ಟ್ ಮಾತ್ರ. Section 2 proviso delition will never be held valid in any court of law. It will not stand the scrutiny of court of law. ದಯವಿಟ್ಟು, ತಾವು ಇದರ ಬಗ್ಗೆ ಯೋಚನೆ ಮಾಡಿ ನೋಡಿ. ಸರಿಯಾಗಿ ತಂದರೆ ಉಳಿಯುತ್ತದೆ. ಇಲ್ಲದಿದ್ದರೆ ಮತ್ತೊಮ್ಮೆ ಕೋರ್ಟಿಗೆ ಯಾರಾದರೂ ಹೋಗುತ್ತಾರೆ, ನಾವಾದರೂ ಹೋಗಬಹುದು ಅಥವಾ ಯಾವ ಸಾರ್ವಜನಿಕರಾದರೂ ಹೋಗಬಹುದು. ಆ ರೀತಿ ಕೋರ್ಟಿಗೆ ಹೋದರೆ, ಮತ್ತೆ ಇದರ ಬಗ್ಗೆ ಜಂಜಾಟ ಆರಂಭವಾಗುತ್ತದೆ. ಇದಕ್ಕೆ ತಾವು ಅವಕಾಶ ಕೊಡಬಾರದಾಗಿತ್ತು. ಆದರೂ ಕೊಟ್ಟಿದ್ದೀರಿ. Timing is also not proper. ನಿಮ್ಮ ಉದ್ದೇಶ ಒಳ್ಳೆಯದಾಗಿದ್ದರೆ, 5 ವರ್ಷ ದೊಳಗಡೆಯೇ ಈ ಕಾನೂನು ತರಬಹುದಾಗಿತ್ತು. ಆದರೆ, ನೀವು ತಂದಿಲ್ಲ. ಯಾವುದೋ ಕಾರಣಗಳಿಂದ 5 ವರ್ಷ ಆದ ಮೇಲೆ ತಂದಿದ್ದೀರಿ. Timing also is not appropriate. We have to see in between the lines. ಇದಕ್ಕೆ ಏನೋ ಕಾರಣ ಇದೆ ಎನ್ನುವುದನ್ನು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಾಣಬರುತ್ತಿದೆ. ಆದ್ದರಿಂದ, ಇದು ಊರ್ಜಿತವಾಗತಕ್ಕಂತಾದ್ದಲ್ಲ ಎಂಬುದನ್ನು ತಮ್ಮ ಮುಖಾಂತರ ಸನ್ಮಾನ್ಯ ಪ್ರಕಾಶ್‌ರವರಿಗೆ ತಿಳಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಈಗಾಗಲೇ ಅನೇಕ ಸದಸ್ಯರು ಮಾತನಾಡಿದ್ದಾರೆ, ನಾನು ಹೆಚ್ಚು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗಾಗಲೇ ಘೋರ್ಪಡೆಯವರು, ಶ್ರೀಮಾನ್ ವೀರಪ್ಪ ಮೊಯ್ಲಿಯವರು ಮತ್ತು ಪ್ರಮೀಳಾರವರು ಸಂವಿಧಾನಾತ್ಮಕವಾಗಿ, ಹೇಗೆ ಇದು ವಿರೋಧವಾಗಿದೆ ಎಂಬುದನ್ನು ಸ್ಪಷ್ಟವಾಗಿ ತೋರಿಸಿದ್ದಾರೆ. ಮತ್ತು ತಂದಿರುವಂಥ ಈ ಬಿಲ್ ಏನಿದೆ, ಇದನ್ನು ಒಂದು ಸದುದ್ದೇಶದಿಂದ ತಂದಿಲ್ಲ. ಇದು ದುರುದ್ದೇಶದಿಂದ ಕೂಡಿದೆ ಎನ್ನತಕ್ಕ ಮಾತು ಸ್ಪಷ್ಟವಾಗಿದೆ. ಏಕೆಂದರೆ, ಅಮೆಂಡ್‌ಮೆಂಟ್ 4ರಲ್ಲಿ ತಾವು ಹೆಚ್ಚಿಗೆ ಮಾಡಿ, ವೋಟರ್ಸ್‌ನ್ನು ಹೆಚ್ಚಿನ ರೀತಿಯಲ್ಲಿ ಸುಮಾರು ಈಗಿರತಕ್ಕಂಥ 400 ರಿಂದ 1000ಕ್ಕೆ ಏರಿಸತಕ್ಕಂತಾದ್ದು, ಆಮೇಲೆ 5 ಸಾವಿರದಿಂದ 7 ಸಾವಿರ ಇದ್ದುದನ್ನು 10 ಸಾವಿರದಿಂದ 14 ಸಾವಿರ ಮಾಡತಕ್ಕಂತಾದ್ದು ಇದು ಅಷ್ಟೊಂದು ಸಮಂಜಸವಲ್ಲವೆಂದು, ನಿಮಗೆ ಬೆಂಬಲ ನೀಡತಕ್ಕ ಸದಸ್ಯರೂ ಕೂಡ ಹೇಳುತ್ತಿದ್ದಾರೆ. ಇದು ವಯಬಲ್ ಅಲ್ಲವೆಂದು ಹೇಳಿದರೂ ಕೂಡ, ನೀವು ತಂದದ್ದು ಕೂಡ ಅನ್‌ವೀಲ್ಡಿ ಇದು ಅಷ್ಟೊಂದು ಸರಿಯಲ್ಲವೆಂದು ನಿಮಗೆ ಸಪೋರ್ಟ್ ಮಾಡತಕ್ಕಂಥವರು, ನಿಮ್ಮ ಬೆಂಬಲಕ್ಕೆ ನಿಂತಂಥವರು ಹೇಳುತ್ತಿದ್ದಾರೆ. ಅಂದಾಗ, ನೀವು ಇವತ್ತು ಯಾವ ಯಾವ ಪ್ರಾವಿಷನ್ ತಂದಿದ್ದೀರಿ, ಅದಕ್ಕೆ ನಿಮಗೆ ಸಹಾಯ ಮಾಡತಕ್ಕವರೂ ಅದರ ವಿರುದ್ಧ ಇದ್ದಾರೆ. ಮತ್ತು ನಾವಂತೂ ಇದನ್ನು ಮಾಡಲೇಬಾರದು ಎನ್ನುವ ನಿಲುವನ್ನು ತಾಳಿದ್ದೇವೆ. ಆ ಕಾರಣ, ಈಗಾಗಲೇ 5363

ಪಂಚಾಯ್ತಿಗಳೇನಿವೆ ಇವು ಚಿಕ್ಕಪಂಚಾಯ್ತಿಯಾದರೂ ಕೂಡ ಈಗಿರತಕ್ಕ ಪರಿಸ್ಥಿತಿಯಲ್ಲಿ ವೈಯಿಬಲ್ ಕೂಡ ಇವೆ ಮತ್ತು ಪ್ರತಿಯೊಂದು ಹಳ್ಳಿಗಳಲ್ಲಿ ಲೀಡರ್‌ಷಿಪ್ ಕೊಡತಕ್ಕ ಶಕ್ತಿ ಆ ಪಂಚಾಯ್ತಿಗಳಿಗೆ ಇದೆ. 400 ಜನಸಂಖ್ಯೆ ಇರತಕ್ಕ ಜಾಗದಲ್ಲಿ, ಒಬ್ಬ ಪಂಚಾಯ್ತಿ ಸದಸ್ಯ ಆರಿಸಿಬಂದರೆ, ಆ ಹಳ್ಳಿಯ ಕುಂದುಕೊರತೆಗಳು ಮತ್ತು ಆ ಹಳ್ಳಿಯಲ್ಲಿ ನಡೆಯುತಕ್ಕ ವ್ಯವಸ್ಥೆ ಇದನ್ನು ಅರಿತುಕೊಂಡು ಪಂಚಾಯ್ತಿಯಲ್ಲಿ ಕೆಲಸ ಮಾಡುವುದಕ್ಕೆ ಅವರಿಗೆ ಸಾಧ್ಯವಾಗುತ್ತದೆ. ನೀವು ಅನ್ ವೀಲ್ಡ್ ಪಂಚಾಯ್ತಿ ಮಾಡಿದರೆ, ಇವತ್ತು ಖಂಡಿತವಾಗಿಯೂ ನಾನು ಹೇಳಬೇಕಾಗುತ್ತದೆ. 10-15 ಹಳ್ಳಿಗೆ ಒಬ್ಬೊಬ್ಬರು ಪಾಳೇಗಾರರನ್ನು ಮಾಡಿದ ಹಾಗೆ ಆಗುತ್ತದೆ. ಆ 10-15 ಹಳ್ಳಿಗಳಿಗೆ ಒಬ್ಬೊಬ್ಬರು ಪಾಳೇಗಾರರನ್ನು ನೇಮಿಸುತ್ತಾ ಹೋದರೆ, ಖಂಡಿತವಾಗಿಯೂ ಮುಂದೆ ತಾಲ್ಲೂಕು ಪಂಚಾಯ್ತಿಯಾಗಲೀ, ಜಿಲ್ಲಾ ಪಂಚಾಯ್ತಿಯಾಗಲೀ, ಅಸೆಂಬ್ಲಿಯಲ್ಲಾಗಲೀ, ಪಾರ್ಲಿಮೆಂಟ್ ನಲ್ಲಾಗಲೀ ಅದರ ಪರಿಣಾಮವನ್ನು ಬೀರತಕ್ಕಂತಾದ್ದು ಆಗುತ್ತದೆ. ಮತ್ತು ನಿಷ್ಪಕ್ಷಪಾತವಾದಂಥ ಚುನಾವಣೆಗಳೂ ಕೂಡ ನಡೆಯತಕ್ಕಂತಾದ್ದು ಆಗುವುದಿಲ್ಲವೆಂಬ ಮಾತನ್ನು ತಮಗೆ ಹೇಳುತ್ತೇನೆ.

7.50 ಪಿ.ಎಂ.

ಏಕೆಂದರೆ, ನಮ್ಮ ವ್ಯವಸ್ಥೆಯೇ ಹಾಗಿದೆ. ನಾವು ಎಷ್ಟೇ ಸದುದ್ದೇಶದಿಂದ ಮಾಡಿದರೂ ಅಲ್ಲಲ್ಲಿರುವ ವಾತಾವರಣ ಮತ್ತು ನಾವು ಅನೇಕ ಸಾರಿ ನಮ್ಮ ಅಧಿಕಾರವನ್ನು ದುರುಪಯೋಗ ಮಾಡಿದ್ದು ತಮಗೆ ಗೊತ್ತಿದೆ. ಅಧಿಕಾರದ ಚಲಾವಣೆ ಮಾಡುವಾಗ ಸಾಮಾಜಿಕ ನ್ಯಾಯ ಕೊಡುವುದಾಗಲಿ, ಅಧಿಕಾರವನ್ನು ನ್ಯಾಯೋಚಿತವಾಗಿ ಉಪಯೋಗ ಮಾಡಿಕೊಳ್ಳುವುದು ಬಹಳ ಕಡಿಮೆ. ನಾವು ಅವರಿಗೆ ಅಧಿಕಾರ ಕೊಡಬಾರದೆಂದು ಹೇಳುತ್ತಿಲ್ಲ. ಆದರೆ ವ್ಯವಸ್ಥೆ ಆ ರೀತಿ ಇದೆ. ಆದ್ದರಿಂದ ನಾವು ಪುನಃ ದೊಡ್ಡದನ್ನು ಮಾಡಿ ಡೆವಲಪ್‌ಮೆಂಟ್‌ಗೆ ತೊಂದರೆಯಾಗತಕ್ಕದ್ದು ಆಗಬಾರದು. ತಮ್ಮ ಹೇಳಿಕೆಯ ಪ್ರಕಾರ ನಮ್ಮ ಸಧ್ಯದ 5363 ಪಂಚಾಯಿತಿಗಳು ಹೋಗಿ 2500 ಆಗುತ್ತವೆಂದರೆ ಎಲ್ಲಾ ಹಳ್ಳಿಗಳಲ್ಲಿ ಮತ್ತೆ ಜಗಳ ಪ್ರಾರಂಭವಾಗುತ್ತದೆ. ಯಾವ ಹಳ್ಳಿಯಲ್ಲಿ ಹೆಡ್‌ಕ್ವಾರ್ಟರ್ಸ್ ತೆಗೆಯುತ್ತೀರಿ ಆ ಹಳ್ಳಿಗಳಲ್ಲಿ ಕಿತ್ತಾಟವಂತೂ ನಡೆದೇ ನಡೆಯುತ್ತದೆ. ಜೊತೆಗೆ ನಮ್ಮ ಊರಿನಲ್ಲಿ ಹೆಡ್‌ಕ್ವಾರ್ಟರ್ಸ್ ಮಾಡಿ, ಅಲ್ಲಿ ನೋಟಿಫಿಕೇಷನ್ ಮಾಡಿ ಎಂದು ತಮ್ಮ ಮೇಲೆ ಪ್ರಭಾವ ಬೀರಲು ಬರುತ್ತಾರೆ. ರಾಜ್ಯ ಚುನಾವಣಾ ಆಯೋಗದವರು ಈ ಚುನಾವಣೆ ಮಾಡುತ್ತಾರೆ, ಇದರಲ್ಲಿ ನಮ್ಮ ಕೈವಾಡವೇನೂ ಇರುವುದಿಲ್ಲವೆಂದು ತಾವು ಹೇಳಬಹುದು, ಆದರೆ ಸರ್ಕಾರದ ಕಾರ್ಯದರ್ಶಿಯವರಿಂದ ಸೂಚನೆಗಳು ಹೋಗುವುದು ಖಚಿತ. ಇಂಥ ಕಡೆಯೇ ಹೆಡ್‌ಕ್ವಾರ್ಟರ್ಸ್ ಮಾಡಿಯೆಂದು ಹೇಳತಕ್ಕದ್ದು ಅನೇಕ ಸಂದರ್ಭದಲ್ಲಿ ನಡೆಯುತ್ತದೆ. ಆದ್ದರಿಂದ ತಾವೇನು ದೊಡ್ಡ ಪಂಚಾಯಿತಿ ಮಾಡಲು ತಿದ್ದುಪಡಿಯನ್ನು ತಂದಿದ್ದೀರಿ. ಇದು ಸರಿಯಲ್ಲ. ಮಾನ್ಯ ಪ್ರಮೀಳನೇಸರ್ಗಿಯವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ಸಹ ಅದನ್ನು ಓದಿ ಹೇಳುತ್ತೇನೆ. ಅದೇನೆಂದರೆ, ಅಮೆಂಡ್‌ಮೆಂಟ್ ಸೆಕ್ಷನ್ 5 ಸಬ್ ಕ್ಲಾಸ್ 24 ಏನು ಇದೆ in Sub Sec. (4) the first proviso shall be omitted ಎಂದು ಏನು ಮಾಡಿದ್ದೀರಿ ಇದು ಸಂವಿಧಾನ ವಿರುದ್ಧವಿದೆ. ಇದು ತಮಗೂ ಗೊತ್ತಿರಬಹುದು. ಹಾಗಿದ್ದರೂ ಏಕೆ ಇದನ್ನು ಮಾಡುತ್ತಿದ್ದೀರಿ ಎಂಬುದು ನನಗೆ ಗೊತ್ತಿಲ್ಲ. Art. 234(d) :

"**Reservation of Seats**: Seats shall be reserved for Scheduled Castes and Scheduled Tribes in every Panchayat and the number of seats so reserved shall bear as nearly as may be, the same proportion to the total number of seats to be filled by direct election in that Panchayat as the population of the Scheduled Caste and Scheduled Tribes in that Panchayat area, or of the Scheduled Castes in that Panchayat area bears to the total population of that area and such seats may be allotted by rotation to different constituencies in a Panchayat."

ಈ ರೀತಿ ಮ್ಯಾಂಡೇಟರಿ ಪ್ರಾವಿಷನ್ ಸಂವಿಧಾನದಲ್ಲಿ ಇದ್ದರೂ ಸಹ ನೀವು ಅದನ್ನು ಡಿಲೀಟ್ ಮಾಡಿ ನಾವು ಲೀಡರ್ ಶಿಫ್ ಬೆಳೆಸುವುದಕೋಸ್ಕರ, ಎಲ್ಲಿಬೇಕೋ ಅಲ್ಲಿ ಅದನ್ನೇ ಖಾಯಂ ಆಗಿ ಇಡುತ್ತೇವೆಂದು ಹೇಳಿದರೆ ಸಂವಿಧಾನದ ವಿರುದ್ಧ ಕಾನೂನನ್ನು ಮಾಡಿದಂತಾಗುತ್ತದೆ. ಸಂವಿಧಾನದ ವಿರುದ್ಧ, ಈ ಕಾನೂನನ್ನೇನು ತಂದಿದ್ದೀರಿ ಇದು ಸರಿಯೇ? contrary to the constitutional mandatory provision.

ಆರ್ಟಿಕಲ್ 243 'ಡಿ' ವಿರುದ್ಧ ನೀವು ಇದನ್ನು ಹೇಗೆ ತಂದಿರಿ? ಅದು ಸಂವಿಧಾನದಲ್ಲಿ ಇಲ್ಲವೆಂದಿದ್ದರೆ ಎಲ್ಲಾದರೂ ಮಾಡಬಹುದಾಗಿತ್ತು. ಆದರೆ ಅವರು ಇದು ಹಾರ್ಟ್‌ಬರ್ನಿಂಗ್ ಆಗಬಾರದು ಎಂಬ ಉದ್ದೇಶದಿಂದ ಆ ರೀತಿ ಮಾಡಿದ್ದಾರೆ. ಒಂದೇ ಕಡೆ ಸತತವಾಗಿ ಐದು, ಹತ್ತು, ಇಪ್ಪತ್ತು ವರ್ಷ ಇರಬಾರದು ಎಂಬ ಉದ್ದೇಶದಿಂದ ಮಾಡಿದ್ದಾರೆ. ಎಂ.ಎಲ್.ಎ, ಎಂ.ಪಿ. ಸೀಟುಗಳಿಗೆ ಸತತವಾಗಿ ಇರುವುದರಿಂದ ಡೀಲಿಮಿಟೇಷನ್ ಸಮಿತಿಗೆ ಸೇರದಿರುವುದರಿಂದ ಕೆಲವು ಕ್ಷೇತ್ರಗಳಲ್ಲಿ ಹತ್ತು, ಇಪ್ಪತ್ತು ವರ್ಷ ಒಬ್ಬರೇ ಇರುವುದರಿಂದ ಎಷ್ಟು ದಿನ ಅವರೇ ಇರುತ್ತಾರೆ ಎಂಬ ಪ್ರಶ್ನೆ ಮುಖ್ಯವಾದುದು. ಇದರಿಂದ ಸಮಾಜದ ಮೇಲೆ ಕೆಲವು ಸಾರಿ ಹಾರ್ಟ್‌ಬರ್ನ್ ಆಗುವುದಕ್ಕೆ ಇಲ್‌ವಿಲ್ ಕ್ರಿಯೇಟ್ ಆಗುವುದಕ್ಕೆ, ಪ್ರಿಜ್ಯೂಡಿಸಿಸ್ ಆಗಲು ಕಾರಣಕರ್ತವಾಗಿವೆ. ಇಲ್ಲಿ ಅದೇ ರೀತಿ ಪ್ರಾವಿಷನ್ ಮಾಡಿದ್ದಾರೆ. ಇಲ್ಲಿ ಇಲ್‌ವಿಲ್ ಕ್ರಿಯೇಟ್ ಆಗಬಾರದು. ಪ್ರಿಜ್ಯುಡಿಸಿಸ್ ಕ್ರಿಯೇಟ್ ಆಗಬಾರದು, ಇದನ್ನು ರೊಟೇಷನ್‌ನಲ್ಲಿ ಮಾಡಿದರೆ ಎಲ್ಲರಿಗೂ ಅವಕಾಶ ಸಿಗುತ್ತದೆ. ಆ ಏರಿಯಾದಲ್ಲಿ ಒಂದು ಸಲ ಜನರಲ್ ಆಗಬಹುದು, ಒಂದು ಸರಿ ಬ್ಯಾಕ್‌ವರ್ಡ್‌ನವರು ಆಗಬಹುದು, ಒಂದು ಸಲ ಮೀಸಲಾತಿಯವರು ಆಗಬಹುದು, ಒಂದು ಸಲ ಮಹಿಳೆಯರು ಆಗಬಹುದು. ಎಲ್ಲರಿಗೂ ಅವಕಾಶ ಸಿಗಲಿ ಎಂಬ ದೃಷ್ಟಿಯಿಂದ "Such seats may be allotted by rotation to different constituencies in a Panchayat. ."ಎನ್ನತಕ್ಕ ಮಾತನ್ನು ಸ್ಪಷ್ಟವಾಗಿ ಹೇಳಿದರೂ ಸಹ, ಸಂವಿಧಾನದಲ್ಲಿ ಈ ಮಾತು ಇದ್ದರೂ ಸಹ, ನಿಮ್ಮ ಕಾನೂನಿನಲ್ಲಿ ಇದು ಏಕೆ ಬಂತು? ಯಾವ ಆಧಾರದ ಮೇಲೆ ತಾವು ಇದನ್ನು ಡಿಲೀಟ್ ಮಾಡಿದಿರಿ? ಹಾಗಾದರೆ ನಾವು ಸಂವಿಧಾನದ ವಿರುದ್ಧ ಕಾನೂನನ್ನು ರಚನೆ ಮಾಡಬಹುದೇ? ನಮಗೆ ಅಧಿಕಾರವಿದೆ, ನಾವು ಅದನ್ನು ಮಾಡುತ್ತೇವೆ, ಬೇಕಾದರೆ ಸುಪ್ರೀಮ್ ಕೋರ್ಟ್‌ನಲ್ಲಿ ಸ್ಟ್ರಕ್‌ಡೌನ್ ಆಗಲಿ, ನಾವು ಮಾಡುವುದನ್ನು ಮಾಡುತ್ತೇವೆ, ಆಗುವುದು ಏನಾದರೂ ಆಗಲಿ ಎಂದರೆ ಹೇಗೆ? ಯಾವುದೇ ಕಾನೂನು contrary to the constitution

ಇದ್ದರೆ ನಾವು ಅದನ್ನು ಒಪ್ಪಲು ಸಾಧ್ಯವಾಗುವುದಿಲ್ಲ. ಆದ್ದರಿಂದ ತಾವೇನು ಸಂವಿಧಾನದ ವಿರುದ್ಧ ತಿದ್ದುಪಡಿಯನ್ನು ತಂದಿದ್ದೀರಿ, ಅದಕ್ಕೆ ಒಪ್ಪುವುದಿಲ್ಲವೆಂದು ನಾವು ಮೊದಲಿನಿಂದಲೂ ಹೇಳುತ್ತಿದ್ದೇವೆ. ಆದರೆ ಅದರ ಬಗ್ಗೆ ಸರ್ಕಾರ ಯೋಚನೆ ಮಾಡುತ್ತಿಲ್ಲ. ಸರ್ಕಾರ ಪದೇ ಪದೇ ಏನು ಮಾಡಿದ್ದಿರಿ, ಅವರೇನು ಮಾಡಿದ್ದಾರೆ ಎಂದು ಹೇಳಿಕೊಂಡು ಹೋಗುತ್ತಿದೆ. ಸಂವಿಧಾನದ 243 'ಇ'ನಲ್ಲಿ ಸಹ ಐದು ವರ್ಷ ಇರಲೇ ಬೇಕು, ಐದು ವರ್ಷಗಳಾದ ಮೇಲೆ ಪುನಃ ಚುನಾವಣೆ ಆಗಲೇ ಬೇಕು ಎಂಬ ದೃಷ್ಟಿಯಿಂದ ಸಂವಿಧಾನದಲ್ಲಿ ಆ ಪ್ರಾವಿಷನ್ ಮಾಡಿದ್ದು. ಯಾವುದಾದರೂ ಪ್ರಸಂಗ ಬಂದಾಗ ಡೆಪ್ಯುಟಿ ಕಮೀಷನರ್‌ರವರು ಆಡಳಿತಾಧಿಕಾರಿಯಾಗಬಹುದು ಎಂಬುದನ್ನು ತಂದಿದ್ದು ತೊಂದರೆಗಳು ಬಂದಾಗ ಅಂಥದ್ದು ಇರಲಿ ಎಂಬ ಉದ್ದೇಶದಿಂದ ಅದನ್ನು ತಂದಿರತಕ್ಕದ್ದು. ಶಾಶ್ವತ ಪರಿಹಾರಕ್ಕೆ ಅದನ್ನೇ ಉಪಯೋಗ ಮಾಡಬೇಕು ಎಂಬ ದೃಷ್ಟಿಯಿಂದ ಮಾಡಿದ್ದಲ್ಲ. ಆದರೆ ತಾವು ಸೀರೀಸ್ ಆಗಿ ಮಾಡಿದ್ದೀರಿ. ಒಂದು ಪಂಚಾಯಿತಿಯಲ್ಲಿ 23 ಜನ ಸದಸ್ಯರುಗಳು ಇದ್ದರೆಂದರೆ ಅಲ್ಲಿಗೆ ಆಡಳಿತಾಧಿಕಾರಿಯವರನ್ನು ನೇಮಕ ಮಾಡಿ 23 ಜನರನ್ನು ನಾಮಿನೇಟ್ ಮಾಡಿದಿರಿ, ಅಧ್ಯಕ್ಷ, ಉಪಾಧ್ಯಕ್ಷರನ್ನು ನಾಮಿನೇಟ್ ಮಾಡಬಹುದು. ನಾಳೆ ಇದು ರಚನೆಯಾದಮೇಲೆ, ಆ ಸದಸ್ಯ ತಮಗೆ ಸರಿಯಾಗಿಲ್ಲವೆಂದು ಕಂಡುಬಂದಾಗ, ತಮ್ಮ ಮನಸ್ಸಿನ ವಿರುದ್ಧವಾಗಿ ನಡೆದುಕೊಳ್ಳುತ್ತಾರೆಂದು ಕಂಡುಬಂದರೆ ಅವರನ್ನು ತಾವು ತೆಗೆದು ತಮಗೆ ಬೇಕಾದವರನ್ನು ನೇಮಕ ಮಾಡಿಕೊಳ್ಳಬಹುದು. ಅಂದರೆ ತಾವು ಹೇಗೆ ಬೇಕೋ ಹಾಗೆ ವರ್ತನೆ ಮಾಡಬಹುದು. ಆರು ತಿಂಗಳಿನಲ್ಲಿ ಆರು ಸಲ ಬೇಕಾದರೆ ಬದಲಾವಣೆ ಮಾಡಬಹುದು. ಆ ರೀತಿಯಾಗಿ ಅಧಿಕಾರ ತೆಗೆದುಕೊಂಡಿದ್ದೀರಿ. ರಚನೆ ಮಾಡಿದ್ದ ಒಂದು ಸಮಿತಿ ಸರಿಯಾಗಿ ಕೆಲಸ ಮಾಡುವುದಿಲ್ಲ, ಅವರ ಬಗ್ಗೆ ದೂರು ಬಂದಿದೆ. ಆದ್ದರಿಂದ ಅದನ್ನು ತೆಗೆದುಹಾಕುವ ಕೆಲಸ ಮಾಡಬಹುದು. ಇನ್ನೊಂದು ಸಲ ಸಹ ಹಾಗೆಯೇ ಮಾಡಬಹುದು. ಆದ್ದರಿಂದ ತಾವು ಇವತ್ತು ಅಡ್ಮಿನಿಸ್ಟ್ರೇಟೀವ್ ಕಮಿಟೀಸ್ ಮಾಡುವ ಹಾಗೆ ಡೆಪ್ಯುಟಿ ಕಮೀಷನರ್ ಮೂಲಕ ಹಿಂಬಾಗಿಲಿನ ಮೂಲಕ ಏನು ಹೊರಟಿದ್ದೀರಿ ಇದು ಸರಿಯಲ್ಲ. ಈ ವಿಧಾನ ಸಭಾ ಚುನಾವಣೆಗೆ ಏನು ಎಂಟು ತಿಂಗಳ ಅವಧಿ ಇದೆ ಅಷ್ಟರಲ್ಲಿ ಈ ಕ್ಲಾಸ್‌ನ್ನು ದುರುಪಯೋಗ ಮಾಡುವುದಕ್ಕಾಗಿ ಇದನ್ನು ತಂದಿದ್ದೀರಿ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಏಕೆಂದರೆ, ತಮಗೆ ಎಲ್ಲಿ ಬೇಕೋ ಅಲ್ಲಿ ಆ ಪಂಚಾಯಿತಿಯನ್ನು ಮುಂದುವರೆಸುತ್ತೀರಿ, ಎಲ್ಲಿ ಬೇಕಾಗಿಲ್ಲ ಅಲ್ಲಿಗೆ ಯಾವುದಾದರೂ ಕುಟುನೆಪ ಹೇಳಿ ಅದನ್ನು ತೆಗೆದುಹಾಕುತ್ತೀರಿ ಮತ್ತು ತಮಗೆ ಬೇಕಾದ ಸದಸ್ಯರಿಗೆ ಡೆಪ್ಯುಟಿಕಮೀಷನರ್ ಮೂಲಕ ನಾಮಿನೇಟ್ ಮಾಡಿಕೊಂಡು ಪ್ರತಿಯೊಂದು ಪಂಚಾಯಿತಿಯನ್ನು ತಮ್ಮ ಕಂಟ್ರೋಲ್‌ಗೆ ತೆಗೆದುಕೊಳ್ಳಲು ಮತ್ತು ಪ್ರಜಾಪ್ರಭುತ್ವ ನಿಯಮದ ಪ್ರಕಾರ ಚುನಾಯಿತರಾದ ಸದಸ್ಯರನ್ನು ತೆಗೆದುಹಾಕಿ ಅವರ ಸಮಾಧಿ ಮಾಡಲು ಈ ಕಾನೂನನ್ನು ತಂದಿದ್ದೀರೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಇಲ್ಲದಿದ್ದರೆ ತಮಗೆ ಇಷ್ಟೊಂದು ಸ್ವೀಪಿಂಗ್ ಪವರ್ಸ್ ಏಕೆ ಬೇಕು? ಚುನಾವಣೆ ಮಾಡಲು ಏನಾದರೂ ತೊಂದರೆ ಇದ್ದರೆ, ಆರು ತಿಂಗಳ ಕಾಲ ಐದು ಜನರ ಸಮಿತಿ ರಚನೆ ಮಾಡುವುದು ಇಲ್ಲದಿದ್ದರೆ ಆಡಳಿತಾಧಿಕಾರಿಯನ್ನು ನೇಮಕ ಮಾಡಲು ಮೊದಲಿನಿಂದಲೂ ಸೆಕ್ಷನ್ 8ನಲ್ಲಿದೆ. ಆ ರೀತಿ ಇದ್ದಾಗ, ಡೆಪ್ಯುಟಿಕಮೀಷನರ್‌ರವರ ಮೂಲಕ ಪಂಚಾಯಿತಿ ಸದಸ್ಯರನ್ನು ನಾಮಿನೇಟ್ ಮಾಡಬಹುದು,

ಚುನಾಯಿತರಾಗಿರುವ ಸದಸ್ಯರನ್ನು ತೆಗೆಯಲೂ ಬಹುದು, ಅದರಲ್ಲೇ ಪುನಃ ಅಧ್ಯಕ್ಷರು, ಉಪಾಧ್ಯಕ್ಷರನ್ನು ಮಾಡಲೂ ಬಹುದೆಂದರೆ ಇವತ್ತು ಇದನ್ನು ಒಪ್ಪಿಕೊಂಡ ಕೂಡಲೇ ನಾಳೆಯೇ 5363 ಗ್ರಾಮಪಂಚಾಯಿತಿಗಳಿಗೆ ಚುನಾವಣೆಯಾಗಿ ಸದಸ್ಯರು ನೇಮಕವಾಗುವವರೆಗೆ ಇವರ ಇಚ್ಛೆ ಬಂದಂತೆ ಇವರ ಪಕ್ಷದ ಸದಸ್ಯರಿಗೆ ಸದಸ್ಯರನ್ನಾಗಿ ಮಾಡುತ್ತಾರೆ. ಅದಕ್ಕಾಗಿ ಈ ಕಾನೂನನ್ನು ತಂದಿದ್ದಾರೆಯೇ ಹೊರತು ಮತ್ತಾವ ಉದ್ದೇಶದ್ದಾಗಿಯೂ ಇದನ್ನು ತಂದಿಲ್ಲ. ಒಳ್ಳೆಯ ಆಡಳಿತ ಕೊಡಬೇಕು, ಒಳ್ಳೆ ಗ್ರಾಮಪಂಚಾಯಿತಿ ವ್ಯವಸ್ಥೆ ತರಬೇಕು ಎಂಬ ಉದ್ದೇಶದಿಂದ ಇದನ್ನು ತರುತ್ತಿಲ್ಲ. ಇದು ದುರುದ್ದೇಶದಿಂದ ಕೂಡಿರುವ ಕಾನೂನಾಗಿದೆ. ಸೆಕ್ಷನ್ 4 ರಿಂದ ಪ್ರಾರಂಭವಾಗಿ 1,2,3 ಎಲ್ಲವೂ ಸರ್ಕಾರಕ್ಕೆ ಅನುಕೂಲವಾಗುವ ದೃಷ್ಟಿಯಿಂದ ಮಾಡಿದ್ದಾರೆ. ಸಾಮಾನ್ಯ ಜನರಿಗೆ, ಪ್ರಜಾಪ್ರಭುತ್ವ ತತ್ವದಲ್ಲಿ ನಂಬಿಕೆ ಇಟ್ಟು ಗ್ರಾಮಪಂಚಾಯಿತಿಯನ್ನು ನಡೆಸಬೇಕು ಎಂಬ ಉದ್ದೇಶದಿಂದ ಇದನ್ನು ತಂದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಅದಕ್ಕೆ ಕಾರಣಗಳೂ ಇದೆ. ಏಕೆಂದರೆ ಇದು ಕಾನೂನಿನ ವಿರುದ್ಧ, ಸಂವಿಧಾನದ ವಿರುದ್ಧ ಇದೆ. ಪ್ರಜಾಪ್ರಭುತ್ವ ತತ್ವವನ್ನು ಅಳವಡಿಸಿಕೊಂಡು ಇದು ಹೋಗುವುದಿಲ್ಲವೆಂದು ಗೊತ್ತಿದ್ದರೂ ಸಹ ಇವತ್ತು ಡೆಪ್ಯುಟಿಕಮೀಷನರ್‌ಗಳಿಗೆ ಇಂಥ ಅವಕಾಶವನ್ನು ಮಾಡಿಕೊಟ್ಟರೆ ಸರ್ಕಾರದವರು ಹೇಳಿದ್ದ ವ್ಯಕ್ತಿಯನ್ನು ಅವರು ನಾಮಿನೇಟ್ ಮಾಡುತ್ತಾರೆಯೇ ಹೊರತು ನಾವು ಹೇಳಿದವರನ್ನು ನಾಮಿನೇಟ್ ಮಾಡುವುದಿಲ್ಲ. ಅಂದರೆ ಅಧಿಕಾರ ಯಾರ ಕೈಗೆ ಹೋಯಿತು ಎಂದರೆ directly/or indirectly/they want to control all 5363 Panchayats and they want to put their own people, their own members ; they want to have their own administration and before election they are going to misuse this.

ಎಂದು ಸ್ಪಷ್ಟವಾಗಿ ಹೇಳುತ್ತೇನೆ. ಆದ್ದರಿಂದ ಇದಕ್ಕೆ ನಾವು ಅವಕಾಶ ಮಾಡಿಕೊಡುವುದಿಲ್ಲ. ದಯವಿಟ್ಟು ತಾವು ತಂದಿರುವ ಬಿಲ್ಲನ್ನು ವಾಪಸ್ ತೆಗೆದುಕೊಳ್ಳಬೇಕು, ಹಿಂದೆ ಯಾವ ರೀತಿ ಇತ್ತು ಅದರ ಪ್ರಕಾರ ಇರಲಿ, ಚುನಾವಣೆಯನ್ನು ಸಹ ಅದರ ಪ್ರಕಾರಮಾಡಬೇಕು ಎಂಬ ಮಾತನ್ನು ಹೇಳಬಯಸುತ್ತೇನೆ. ಇಷ್ಟೊಂದು ಜನ ಹೇಳಿದ ಮೇಲೆ ಮಾನ್ಯ ಪ್ರಕಾಶರವರು ಒಪ್ಪಿಕೊಂಡು ಸಂವಿಧಾನಕ್ಕೆ ಮುನ್ನಡೆ ಕೊಡುತ್ತಾರೆ ಕಾನೂನಿಗೆ ಮನ್ನಣೆ ಕೊಡುತ್ತಾರೆ ಎಂದು ನಾನು ಭಾವಿಸುತ್ತೇನೆ.

ಶ್ರೀ ಎಂ. ನಾರಾಯಣಸ್ವಾಮಿ (ಬೇತಮಂಗಲ) : ಕಾಂಗ್ರೆಸ್‌ನ ಹಿರಿಯ ನಾಯಕರೆಲ್ಲಾ ಪಂಚಾಯತ್ ಬಗ್ಗೆ ಮಾತನಾಡಿದ್ದಾರೆ. ನಜೀರ್‌ಸಾಬರ ಮಂಡಲಪಂಚಾಯಿತಿಗಳಲ್ಲಿ ಅವರು ಹೋದ ಸಲ ಅಧಿಕಾರಕ್ಕೆ ಬಂದರು. 1990ರ ಡಿಸೆಂಬರ್‌ನಲ್ಲಿ ಬಸವಲಿಂಗಪ್ಪನವರು ಸಚಿವರಾಗಿದ್ದರು. ನಾನು ಮಾಧುಸ್ವಾಮಿಗಳೆಲ್ಲಾ ಆ ಕಡೆ ಕೂತಿದ್ದೆವು. ಚುನಾವಣೆಗ ಒಂದೂವರೆ ವರ್ಷ ಇತ್ತು, ಅಡ್ಮಿನಿಸ್ಟ್ರೇಟರ್‌ನ್ನು ಹಾಕಬೇಕೆಂದು ನಾವು ಧರಣಿ ಮಾಡಿದೆವು. ಆಮೇಲೆ 1992ರಿಂದ 93 ಡಿಸೆಂಬರ್‌ವರೆಗೆ ಆಡಳಿತಾಧಿಕಾರಿಯನ್ನು ಹಾಕಿದರು. ಮಾನ್ಯ ಘೋರ್ಪಡೆಯವರ ಬಗ್ಗೆ ಬಹಳ ಗೌರವ ಇದೆ. ಯಾಕೆ ಹೇಳುತ್ತಿದ್ದೇನೆ ಅಂದರೆ ನಮ್ಮ ಪಕ್ಷದ ಪ್ರಣಾಳಿಕೆಯಲ್ಲೇ ಪ್ರಕಟಿಸಿದ್ದೆವು, ಹೊಸದಾಗಿ ತಿದ್ದುಪಡಿ ಮಾಡುತ್ತಿಲ್ಲ. ನಮ್ಮ ಪಕ್ಷದ ಪ್ರಣಾಳಿಕೆಯಲ್ಲಿ ನಾವು ಅಧಿಕಾರಕ್ಕೆ ಬಂದರೆ ಮಂಡಲ ಪಂಚಾಯಿತಿ ವ್ಯವಸ್ಥೆಯನ್ನು ಪುನರ್ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದೆವು. ಜೊತೆಗೆ

ಅವರು ಎಸ್. ಕೆ. ಡೇ ಬಗ್ಗೆ ಹೇಳಿದರು. ಎಸ್‌ಕೆಡೇ ಅವರನ್ನು ನಾವು ಶ್ರೀ ರಾಮಕೃಷ್ಣ ಹೆಗಡೆಯವರ ಕಾಲದಲ್ಲಿ ಕರೆದು ಸುಮಾರು 56,000 ಜನ ಯಾರು ಗೆದ್ದಿದ್ದರು ಅವರ ಮುಂದೆ ಡೇ ಅವರಿಂದ ಭಾಷಣ ಮಾಡಿಸಿ, ಆ ಕೀರ್ತಿ ನಮ್ಮ ಪಕ್ಷಕ್ಕೆ ಸೇರಬೇಕು. ಮೊದಲು ಮಂಡಲ ಪಂಚಾಯಿತಿ ಎರಡು ಟಯರ್‌ಸಿಸ್ಟಂ ಇತ್ತು. ಅನೇಕ ವಿಧವಾದ ಕೆಲಸ ಮಾಡಿದರು. ಇವನ್ನು ತೆಗೆಯಬೇಕು, ಆಡಳಿತಾಧಿಕಾರಿಯನ್ನು ಹಾಕಬೇಕೆಂದು. ಆದರೆ ಇವತ್ತು ಮೂರು ಟಯರ್ ಸಿಸ್ಟಂ ಆಗಿದೆ, ಅಷ್ಟು ಬಲವಾದ ವ್ಯವಸ್ಥೆ ಇಲ್ಲ. ಬರೀ ಪುಸ್ತಕಗಳಲ್ಲಿ ಬರೆದರೆ ಶಕ್ತಿ ಬರುವುದಿಲ್ಲ. ಪಂಚಾಯಿತಿಗಳು ಚೆನ್ನಾಗಿ ನಡೆದು ಕೆಲಸ ಮಾಡಿದಾಗ ಅಲ್ಲಿನ ಅಧಿಕಾರಿಗಳನ್ನು ಕಂಟ್ರೋಲ್ ಮಾಡಿದಾಗ ವ್ಯವಸ್ಥೆ ಸರಿ ಇರುತ್ತದೆ. ಇವತ್ತು 5 ಸಾವಿರ ಚಿಲ್ಲರೆ ಗ್ರಾಮಪಂಚಾಯಿತಿಗಳಿವೆ. ಅಲ್ಲಿನ ಬಿಲ್ ಕಲೆಕ್ಟರ್, ನೀರು ಬಿಡುವ ಮನುಷ್ಯ. ಇದು ಬಹಳ ಅಧೋಗತಿಗೆ ಬಂದಿದೆ. ಇದನ್ನೆಲ್ಲ ನಾವು ಒಪ್ಪಿಕೊಳ್ಳಬೇಕು. ನಾವು ಮಾಡುವ ಭಾಷಣಕ್ಕಿಂತ ವಾಸ್ತವಾಂಶ ಏನಿದೆ, ಪಂಚಾಯಿತಿ ವ್ಯವಸ್ಥೆ ಏನಾಗಿದೆ ಎಂಬುದನ್ನೂ ಸಹ ನೋಡಬೇಕು. ಕಾಂಗ್ರೆಸ್‌ನವರು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದ್ದೀರಿ ಎಂದು ಹೇಳುತ್ತಿದ್ದಾರೆ. ನಾನು ಅವರನ್ನು ಕೇಳುತ್ತೇನೆ. ಸುಮಾರು ಏಳು ವರ್ಷ ಕಾಲ ಎಪಿಎಂಸಿ ಚುನಾವಣೆ ಮಾಡಲಿಲ್ಲ. ತಾಲ್ಲೂಕು ಪಂಚಾಯಿತಿ ಚುನಾವಣೆ ಮಾಡಲಿಲ್ಲ, ಅವತ್ತು ಪ್ರಜಾಪ್ರಭುತ್ವ ಎಲ್ಲಿಹೋಗಿತ್ತು ? ನಜೀರ್ ಸಾಬರು ಹೇಳಿದ್ದರು. ಪ್ರಾಯೋಗಿಕವಾಗಿ ಮಂಡಲ ಪಂಚಾಯಿತಿ ವ್ಯವಸ್ಥೆಯನ್ನು ಕೊಡುತ್ತಿದ್ದೇವೆ ಅಲ್ಲಿರುವ ಲೋಪದೋಷಗಳನ್ನು ಗುರುತಿಸುತ್ತೇವೆ ಎಂದು ಹೇಳಿದ್ದರು. ಇವರೂ ಐದು ವರ್ಷ ಪ್ರಾಯೋಗಿಕವಾಗಿ ಎಂದು ಮಾಡಿದರು : ನಾವು ಮಂಡಲ ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿ ವ್ಯವಸ್ಥೆಗಳೆರಡನ್ನೂ ನೋಡಿದ್ದೇವೆ. ಆದ್ದರಿಂದ ಹೆಚ್ಚು ಕಡಿಮೆ ಇರುವುದನ್ನು ತಿದ್ದುಪಡಿ ಮಾಡುವುದು ಸ್ವಾಗತಾರ್ಹವಾದುದು. ಇರುವ ಸಣ್ಣಪುಟ್ಟ ಲೋಪಗಳನ್ನು ಸರಿಪಡಿಸುವುದು ಸರ್ಕಾರಕ್ಕೆ ಸಂಬಂಧಪಟ್ಟಿದ್ದು.

ಅಧ್ಯಕ್ಷರು : ಸಾಕು, ಬಿಲ್ಸ್ ಮೇಲೆ ಆಡಳಿತ ಪಕ್ಷದವರು ಶಾಸಕಾಂಗ ಪಕ್ಷದೊಳಗೆ ಮಾತನಾಡಬೇಕು ವಿರೋಧಪಕ್ಷದವರು ಮಾತನಾಡಿದ ಮೇಲೆ ಸಂಬಂಧಪಟ್ಟ ಸಚಿವರು ಉತ್ತರ ಕೊಡುವರು. ಎಲ್ಲಾ ಹೊಸ ಸಂಪ್ರದಾಯ ಮಾಡುತ್ತಿದ್ದೀರಿ. ನಾನು ಇದ್ದಿದ್ದರೆ ನಾರಾಯಣ ಸ್ವಾಮಿಯವರಿಗೆ ಹೇಳಿ ಮಾತನಾಡಲು ಬಿಡುತ್ತಿದ್ದಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಸಚಿವರು) : ಅಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರೆಲ್ಲಾ ಅನೇಕ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಪ್ರಜಾಪ್ರಭುತ್ವದ ಬಗ್ಗೆ, ಅಧಿಕಾರ ವಿಕೇಂದ್ರಕರಣದ ಬಗ್ಗೆ ಅವರು ತೋರಿಸಿದ ಕಳಕಳಿಗೆ ನನ್ನ ಧನ್ಯವಾದಗಳು. ಮನುಷ್ಯ ಯಾವಾಗಲೂ ನಿಂತ ನೀರಲ್ಲ. ಅದಕ್ಕಾಗೇ ಶರಣರು ಹರಿಯುವ ನದಿಗೆ ಮೈಯೆಲ್ಲಾ ಕಾಲು, ಉರಿವ ಬೆಂಕಿಗೆ ಮೈಯೆಲ್ಲಾ ನಾಲಿಗೆ ಎಂದು ಹೇಳಿದರು ಹಿಂದೆ ಒಂದು ಕಾಲದಲ್ಲಿ ಕೇಂದ್ರೀಕೃತ ವ್ಯವಸ್ಥೆಯಲ್ಲಿ ಅವರು ನಂಬಿಕೆ ಇಟ್ಟಿದ್ದ ಜನ. ಇವತ್ತು ಅಧಿಕಾರ ವಿಕೇಂದ್ರೀಕರಣದ ಬಗ್ಗೆ ಇಷ್ಟು ಕಾಳಜಿ ಮಮತೆ ತೋರಿಸುತ್ತಿರುವುದು ನಿಜವಾಗಿಯೂ ಆರೋಗ್ಯಕರವಾದ ಪ್ರಜಾಪ್ರಭುತ್ವ ವ್ಯವಸ್ಥೆಗೆ ಸಂದ ಜಯ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಯಾರದ್ದು ಕೇಂದ್ರೀಕರಣ, ಯಾರದ್ದು ವಿಕೇಂದ್ರೀಕರಣ ಎಂಬುದನ್ನು ನೋಡೋಣ.

ಶ್ರೀ ಎಂ. ಪಿ. ಪ್ರಕಾಶ್ : ಸ್ವಾಮಿ ನಿಮ್ಮ ಹಿಂದಿನ ಮುಖ್ಯಮಂತ್ರಿಗಳು ನಿಯೊ-ಕಾಲೊನಿಯಸಂ ಎಂದು ಕರೆದರು. ಇದೊಂದು ವಸಾಹತು ಶಾಹಿಯಾದಂಥ ಪದ್ಧತಿ ಎಂದು ಮಾತನಾಡಿದರು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾವುದನ್ನು ನೀವು ಕೊಟ್ಟಿರುತ್ತೀರಿ ಆಯಾ ಸಂದರ್ಭದಲ್ಲಿ ಸ್ವೀಕಾರ ಮಾಡುವುದಕ್ಕೆ ತಯಾರಾಗಿರಬೇಕು. ನೀವು ಹೇಳಿದ್ದನ್ನೇ ನಾವು ಕೇಳಿ ಹೋಗುವುದಾಗಿದ್ದರೆ ಇದಕ್ಕೆ ಚರ್ಚೆ ಅನ್ನುವುದಕ್ಕೆ ಆಗುವುದಿಲ್ಲ. ನಾವು ಹೇಳುವ ಮಾತನ್ನು ನೀವು ಒಪ್ಪದೇ ಹೋಗಬಹುದು. ನೀವು ಹೇಳಿದ್ದನ್ನು ನಾವು ಒಪ್ಪದೇ ಹೋಗಬಹುದು. ಆದರೆ ಹೇಳುವ ಅಧಿಕಾರ ನಿಮಗೂ ಇದೆ, ಅದಕ್ಕೆ ಉತ್ತರಿಸುವ ಅಧಿಕಾರ ನಮಗೂ ಇದೆ. ಆದ್ದರಿಂದ ತಾವು ಸ್ವಲ್ಪ ತಾಳ್ಮೆಯಿಂದ ಕೇಳಬೇಕು.

I bow down my head to Mr. Ghorpade. He never used one harsh language, but you used such a language that ' you are bringing colonialism into these things' and ' feudalism' etc. I will come back to what Dr. Ambedkar has said. Kindly listen to me.

MR. SPEAKER : Newton's third law is in force !

ಶ್ರೀ ಎಂ. ಪಿ. ಪ್ರಕಾಶ್ : ಅಧ್ಯಕ್ಷರೇ, ಈ ಅಧಿಕಾರ ವಿಕೇಂದ್ರಿಕರಣದ ವ್ಯವಸ್ಥೆಯಲ್ಲಿ ಅಭಿಪ್ರಾಯಗಳು ಎಷ್ಟು ಆತಂಕಕಾರಿಯಾಗಿರುತ್ತವೆ ಅಂದರೆ ಯಾವುದೂ ಇಲ್ಲಿ ನಿರ್ದಿಷ್ಟತೆ ಎಂದು ಹೇಳಲು ಆಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ತಮಗೆ ಗೊತ್ತಿದ್ದಂತೆ ನಮ್ಮ ಕರಡು ಸಂವಿಧಾನದಲ್ಲಿ ಈ ಅಧಿಕಾರ ವಿಕೇಂದ್ರೀಕರಣದ ಪ್ರಸ್ತಾಪವೇ ಇರಲಿಲ್ಲ. ಡಾ|| ಅಂಬೇಡ್ಕರ್‌ರವರು ಕರಡು ಸಂವಿಧಾನ ರಚನೆ ಸಮಿತಿ ಅಧ್ಯಕ್ಷರಿದ್ದರು. ಆದಾದಮೇಲೆ ಇದರ ಬಗ್ಗೆ ದೊಡ್ಡ ಒಂದು ಹೋರಾಟ ಆಯಿತು. ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯಲ್ಲಿ ನಡೆದ ಚರ್ಚೆಯೆಲ್ಲಾ ತಮಗೆ ಗೊತ್ತಿದೆ. ವೇದ್ಯವಾಗಿರುವ ವಿಷಯವೇ. ಆಗ ಒಂದು ರಾಜೀ ಸೂತ್ರವಾಗಿ ಆರ್ಟಿಕಲ್ 40 ಅನ್ನು ತಂದು ಅಲ್ಲಿ Each village should be a governing unit. ಎಂದು ತಂದಾಗ ಡಾ || ಅಂಬೇಡ್ಕರ್ ಈ ಮಾತು ಹೇಳುತ್ತಾರೆ. "Every village is a cesspool of casteism ; it is dominated by the major communities and the feudal forces. I do not believe in this ಎಂದು. ಈ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದಿವಂಗತ ನಜೀರ್ ಸಾಬ್‌ರವರು 1985-87ರ ನಡುವೆ ಮಂಡಲ ಪಂಚಾಯಿತಿ ಕಾನೂನು ತಂದಾಗ ಜಂಟಿ ಸದನ ಸಮಿತಿಯಲ್ಲಿ ಯಾವ ತರಹದ ಚರ್ಚೆಯಾಗಿತ್ತು. ದಿವಂಗತ ಬಸವಲಿಂಗಪ್ಪನವರು ತಮ್ಮದೇ ಆದ ಆತಂಕಗಳನ್ನು ವ್ಯಕ್ತಮಾಡಿದ್ದರು. ಮಾನ್ಯ ಖರ್ಗೆಯವರೂ ಕೂಡ ನ್ಯಾಯ ಪಂಚಾಯಿತಿಗಳಿಗೆ ಅಧಿಕಾರ ಕೊಡಬೇಕೆಂಬ ವಿಚಾರ ಬಂದಾಗ ಆತಂಕ ವ್ಯಕ್ತಮಾಡಿದ್ದರು. ಅದು ಸಹಜವೂ ಕೂಡ. ಅದು ಅವರ ದೃಷ್ಟಿಯಿಂದ ನಿಜವೇ. ದುರ್ಬಲ ವರ್ಗದ ಮೇಲೆ ಹಳ್ಳಿಗಾಡಿನಲ್ಲಿ ಸಹಜ ಅನ್ನುವ ಕಾರಣಕ್ಕಾಗಿ ತಮ್ಮ ಅನುಭವಗಳ ಮೂಲಕ ಮಾತನಾಡಿದ್ದರು. ಅವತ್ತಿನ ಮುಖ್ಯ ಮಂತ್ರಿಗಳಾಗಿದ್ದ ರಾಮಕೃಷ್ಣಹೆಗಡೆಯವರು ಆಗಬಹುದು, ತಾವು

ಕೊಟ್ಟ ಸಲಹೆಯನ್ನೂ ಕೂಡ ನಾವು ಮನ್ನಿಸುತ್ತೇವೆ. ಐದು ವರ್ಷಗಳ ಕಾಲ ಈ ನ್ಯಾಯಪಂಚಾಯಿತಿಗೆ ಅದರ ಪ್ರಯೋಗ ಸ್ಥಿತಿಯನ್ನು ನಾವು ತರುವುದಿಲ್ಲ. ಕಾನೂನು ಆ ರೀತಿ ಇತ್ತು. ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತು ಮತ್ತು ನ್ಯಾಯಪಂಚಾಯಿತಿಯ ಕಾನೂನು 1987 ಎಂದಿದ್ದರೂ ಕೂಡ ಐದುವರ್ಷ ಅವಧಿಗೆ ನಾವು ನ್ಯಾಯ ಪಂಚಾಯಿತಿಯನ್ನು ಜಾರಿಗೆ ಕೊಡುವುದಿಲ್ಲವೆಂಬ ಮಾತನ್ನು ಹೇಳಿದರು? ಯಾವ ಕಾರಣಕ್ಕಾಗಿ ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದ್ದು ಅಥವಾ ದಿವಂಗತ ಬಸವಲಿಂಗಪ್ಪನವರು ಪ್ರಸ್ತಾಪ ಮಾಡಿದ್ದ ಆತಂಕಗಳಿಗೆ ಕಾರಣ ಇಲ್ಲ ಎಂತಲ್ಲ. ಈ ದೇಶದ ಸಾಮಾಜಿಕ, ರಾಜಕೀಯ, ಆರ್ಥಿಕವಾಗಿರತಕ್ಕಂಥ ಧಾರ್ಮಿಕವಾದ ಹಿನ್ನೆಲೆಯಲ್ಲಿ ದಬ್ಬಾಳಿಕೆಗಳು ಹೆಚ್ಚಾಗುತ್ತವೆ ಎನ್ನುವುದು ಸಹಜವಾದ ಸ್ಥಿತಿ. ಅದನ್ನು ಅವರು ಮನಗಂಡೇ ಆ ನೋವಿನ ಮೂಲಕವಾಗಿ ಹೇಳಿದ ಮಾತನ್ನು ಅವರು ಒಪ್ಪಿದರು. ಈ ಮಾತನ್ನು ಡಾಕ್ಟರ್ ಅಂಬೇಡ್ಕರ್‌ರವರು ಕಾನ್‌ಸ್ಟಿಟ್ಯುಯೆಂಟ್ ಅಸೆಂಬ್ಲಿಯಲ್ಲಿ ಕೂಡ ಈ ವಿಚಾರದಲ್ಲಿ ಚರ್ಚೆಯನ್ನು ಮಾಡಿದ್ದಾರೆ. ಆದ್ದರಿಂದ ನೀವು ಹೇಳಿದಂತೆ ಚಿಕ್ಕ ಚಿಕ್ಕ ಪಂಚಾಯಿತಿಗಳಾದಾಗ ಅಲ್ಲಿ ದುರ್ಬಲರ ಮಾತುಗಳು ಕ್ಷೀಣವಾಗುತ್ತವೆ. ಬಲಶಾಲಿಗಳ ಮಾತು ಹೆಚ್ಚಾಗುತ್ತವೆ. ಆ ಕಾರಣಕ್ಕಾಗಿಯೇ ಕೆಲವು ಸಂದರ್ಭದಲ್ಲಿ ಕೇಂದ್ರೀಕೃತವಾದಂಥ ವ್ಯವಸ್ಥೆಯ ಬಗ್ಗೆ ಒಲವು ಇರತಕ್ಕಂಥದ್ದೂ ಕೂಡ ಇತ್ತು. ಆದರೆ ಅದು ಬರುತ್ತಾ ಬರುತ್ತಾ ನೀರಸವಾಗಿದೆ. ನಾವು ಇಂಥ ಒಂದು ಖಂಡ ಉಪಾದಿಯಾದ ರೂಪದಲ್ಲಿರುವ ವ್ಯಾಪ್ತಿಯ ದೇಶವನ್ನು ಕೇಂದ್ರೀಕೃತವಾಗಿರುವ ಆಡಳಿತದಲ್ಲಿ ನಡೆಸಲಿಕ್ಕೆ ಸಾಧ್ಯ ಇಲ್ಲ ಎಂದಾಗ ದಿವಂಗತ ಅಬ್ದುಲ್ ನಜೀರ್ ಸಾಬ್‌ರವರು ಮತ್ತು ರಾಮಕೃಷ್ಣ ಹೆಗಡೆಯವರು ಹಿಂದೆ ಮಾಡಿದ ಪ್ರಯೋಗವನ್ನು ಎಲ್ಲರೂ ಕೂಡ ಒಪ್ಪಿ ರಾಜೀವ್‌ಗಾಂಧಿಯವರು ಈ ವಿಚಾರದಲ್ಲಿ 64ನೇ ತಿದ್ದುಪಡಿಯನ್ನು ತರಬೇಕೆನ್ನುವ ಪ್ರಯತ್ನವನ್ನು ಮಾಡಿದರು. ಆದರೆ ರಾಜ್ಯಸಭೆಯಲ್ಲಿ ಅದಕ್ಕೆ ಬೇಕಾಗಿರುವ ಬಹುಮತ ಸಿಗಲಿಲ್ಲ. ಆ ಕಾರಣದಿಂದ 73ನೇ ತಿದ್ದುಪಡಿಯಾಗಿ ಇವತ್ತು ಕಾನೂನಾಗಿ ಸಂವಿಧಾನದತ್ತವಾಗಿದೆ. ಅದಕ್ಕೆ ನಾವು ಸಂಪೂರ್ಣವಾಗಿ ಕೂಡ ಶ್ಲಾಘನೆಯನ್ನು ಮಾಡಬೇಕಾಗುತ್ತದೆ. ಮತ್ತು ಅದಕ್ಕೆ ಕೊಟ್ಟಿರುವ ಬೆಂಬಲಕ್ಕಾಗಿ ಈ ಬದಲಾಗಿರುವ ನಮ್ಮ ಮನೋಸ್ಥಿತಿಯನ್ನೂ ಕೂಡ ನಾವು ಅಭಿನಂದಿಸಿಕೊಳ್ಳಬೇಕಾಗುತ್ತದೆ. ತಾವು ಈ ಒಂದು ತಿದ್ದುಪಡಿಯನ್ನು ತಂದು ರಾಜ್ಯಾಂಗಕ್ಕೆ ಅಪಚಾರವನ್ನು ಮಾಡಿದ್ದೀರಿ. ಅಲ್ಲಿರುವ ವಿಷಯವನ್ನು ನೀವು ಪ್ರತ್ಯೇಕಿಸಿದ್ದೀರಿ ಎಂದು ಹಿರಿಯ ಸದ್ಯರು ಹೇಳಿದ್ದಾರೆ. ಇಲ್ಲಿ ಖರ್ಗೆಯವರು ಪ್ರಸ್ತಾಪ ಮಾಡಿದಾಗ ಮಾನ್ಯ ಘೋರ್ಪಡೆಯವರು ಓದಿದಾಗ ಇಲ್ಲಿ ಇರುವುದನ್ನೂ ಸಹಾ ತಾವು ಯೋಚನೆ ಮಾಡಿ ನಮ್ಮ ಪಂಚಾಯಿತಿ ಆಕ್ಟ್‌ನಲ್ಲಿ ಮತ್ತು ಇಲ್ಲಿರುವ ಕಾನೂನು ಕಾನ್‌ಸ್ಟಿಟ್ಯೂಷನ್ ಆಫ್ ಇಂಡಿಯಾದಲ್ಲಿರುವ ಪ್ರಾವಿಜನ್ ಕೆಳಗೆ ಏನು ಹೇಳುತ್ತಾರೆ 243 ಡಿ ವಿಚಾರವನ್ನು ತಾವೆಲ್ಲರೂ ಪ್ರಸ್ತಾಪ ಮಾಡಿದ್ದೀರಿ. ಅದರಲ್ಲಿರುವ ಪ್ರಾವಿಸೋ 3ರ ಕೆಳಗೆ " Not less than 1/3rd including the number of seats reserved for women belonging to the Scheduled Castes and Scheduled Tribes of the total number of seats to be filled by the direct election to every panchayat shall be reserved for women and such seats may be allotted by rotation to different constituencies in panchayat." May be alloted by rotation ಎಂದರೆ ಅದನ್ನು ನೀವು ಆದಷ್ಟು ಮಟ್ಟಿಗೆ

ರೊಟೇಷನ್ ಮಾಡುವುದಾಗಬೇಕು. ಅದು ಪರಾವರ್ತನಗೊಳ್ಳಬೇಕು ಎನ್ನುವ ಮಾತು . ಆದರೆ ಮಾನ್ಯ ಫೊರ್ನಾಂಡೆಯವರು ತಂದಿರುವ ಕಾಯ್ದೆಯಲ್ಲಿ ಯಾವ ಪದವನ್ನು ಬಳಸಿದರು. ಇಲ್ಲಿರುವ ಪದ ಸೆಕ್ಷನ್ 5 ಕೆಳಗೆ ಇರುವುದರಲ್ಲಿ ಪ್ರಾವಿಸೋ 4ರ ಕೆಳಗೆ ಹೇಳುತ್ತೇನೆ. "Not less than 1/3rd of the seats reserved in such category for persons belonging to the schedule castes, scheduled tribes and backward classes and the non reserved seats of the gram panchayat shall be reserved for women provided that the seat is reserved under sub-section 2, 3 and 4 shall be allotted by rotation to different constituencies in the panchayat area." Here the word is used ' may be', here the word used is ' shall be'.

You are tying down the hands of the authorities in rotating it, where that particular community or the particular class of persons are not there. That has created an anamoly. In the beginning of it, was not felt so, because in the beginning wherever that particular community was in existence or the large number of community was congregated, that particular seat was earmaked for that particular category. ಅದು 'ಮೇ ಬಿ' ಎನ್ನುವುದು 'ಷಲ್' ಎಂದು ಬಂದಾಗ ಕೂಡ ನಾವು ಊಹಿಸಲಿಕ್ಕೆ ಸಾಧ್ಯವಾಗಲಿಲ್ಲ. ಆದರೆ ಈ ಬಾರಿ ಏನಾಗುತ್ತದೆ. ತಮಗೆಲ್ಲರಿಗೂ ಗೊತ್ತಿರತಕ್ಕಂಥದ್ದು ವೇದ್ಯವಾದಂಥದ್ದು ಯಾವುದಾದರೂ ಒಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗ ಒಂದು ಕಡೆ ಇದ್ದಾಗ 'ಷಲ್ ಬಿ ರೊಟೇಟೆಡ್' ಎಂದಾಗ ಅದನ್ನು ನಾನು ಮೊದಲನೇ ಬಾರಿಗೆ ಕೂಡ ನನಗೆ ಅರ್ಥವಾಗಿದ್ದರೂ ಮಾನ್ಯ ಗೆಳೆಯರಾದ ಮಾನ್ಯ ನಾಗೇಗೌಡರು ತಮ್ಮ ಊರಿನದೇ ಆದ ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಇದು ಎಲ್ಲರ ಅನುಭವವೂ ಆಗಿತ್ತು. ಆದ್ದರಿಂದ ಅಲ್ಲಿರುವ ಕ್ಷೇತ್ರವನ್ನು ಬೇರೆ ಕಡೆಗೆ ಕೊಡುವುದು ಆದಾಗ ಆ ಜನಾಂಗವೇ ಇಲ್ಲದೇ ಇರುವ ಪರಿಸ್ಥಿತಿ ಆಗುತ್ತದೆ ಎನ್ನುವುದು. ನಾಯಕತ್ವವನ್ನು ಬೆಳೆಸಬೇಕು ಎನ್ನುವ ವಿಚಾರದಲ್ಲಿ ಇಲ್ಲಿ ಪ್ರಸ್ತಾಪವನ್ನು ಮಾಡಿದ್ದಾರೆ. ಅದು ಅಪ್ರಸ್ತುತ ಎಂದು ನಾನು ಭಾವಿಸಿಕೊಂಡಿಲ್ಲ ಆದರೆ ಈ ವಾದಕ್ಕೆ ಪುಷ್ಟೀಕರಣ ಕೊಡಲಿಕ್ಕಾಗಿ ಒಂದು ಮಾತನ್ನು ನಾನು ಹೇಳಿದೆ. ತಾವು ಆಗಲೇ ಹೇಳಿದಂತೆ ತಮ್ಮದೇ ಆಗಿರುವ ನಮ್ಮ ಪಾರ್ಲಿಮೆಂಟಿನ ಲೋಕಸಭೆಯ ಸ್ಥಾನಗಳಾಗಬಹುದು ಅಥವಾ ಅಸೆಂಬ್ಲಿ ಸ್ಥಾನಗಳಾಗಿರಬಹುದು. ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗಕ್ಕೆ ಅವು ಮೀಸಲಾಗಿರುತ್ತವೆ. ಮೀಸಲಾಗಿರುವುದು ಬಹಳ ವರ್ಷಗಳಿಂದ ಬಂದಿರುವುದರಿಂದ ಬಹಳ ಜನರಿಗೆ ತೊಂದರೆಯಾಗುತ್ತದೆ ಎನ್ನುವ ಸಂದರ್ಭ ಬಂದಾಗ ಕೇಂದ್ರಸರ್ಕಾರದಲ್ಲಿ ಈ ವಿಚಾರದ ಬಗ್ಗೆ ಪ್ರಸ್ತಾಪ ಮಾಡಿ ನಾವು ಈ ಕೂಡಲೇ ಇದರ ಬಗ್ಗೆ ನಾವು ಬದಲಾವಣೆಯನ್ನು ಮಾಡುತ್ತೇವೆ. ಎಂದು ಹೇಳಿ ಅಂದಿನ ಪ್ರಧಾನ ಮಂತ್ರಿಗಳಾದ ನರಸಿಂಹರಾಯರು ಪ್ರಯತ್ನಮಾಡಿದಾಗ ಇವತ್ತಿನ ರಾಜ್ಯಸಭೆಯ ಸದಸ್ಯರು ಮತ್ತು ಕಾಂಗ್ರೆಸ್ ಪಕ್ಷದ ಅಂದಿನ ಕಾರ್ಯದರ್ಶಿಗಳಾದ ಮಾನ್ಯ ಹನುಮಂತಪ್ಪನವರ ನೇತೃತ್ವದಲ್ಲಿ ನೂರು ಜನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಲೋಕಸಭಾ ಸದಸ್ಯರು ಈ ರೀತಿಯಾಗಿ ನಮ್ಮ ನಮ್ಮದಾದ ಮೀಸಲು ಕ್ಷೇತ್ರಗಳನ್ನು ಬದಲಾಯಿಸುವುದರ ಮೂಲಕವಾಗಿ, ನಾವು ಆ ಕ್ಷೇತ್ರಗಳನ್ನು ಸರಿಯಾಗಿ ಸಂಪರ್ಕದಲ್ಲಿ ಇಟ್ಟುಕೊಂಡು ಅದರ ಅಭಿವೃದ್ಧಿಗೆ ನಾವು ಕೆಲಸವನ್ನು ಮಾಡಿದ್ದೇವೆ. ಅಲ್ಲಿ

ನಮ್ಮ ನಾಯಕತ್ವದ ಭಾವವನ್ನು ಬೆಳೆಸಿಕೊಂಡಿದ್ದೇವೆ, ಈಗ ನೀವೇನಾದರೂ ಅಕಸ್ಮಾತ್ ಈ ರೀತಿ ಬದಲಾವಣೆಗಳನ್ನು ತರುವುದಾಗಿದ್ದರೆ ನಾಯಕತ್ವವನ್ನು ಕುಂಠಿತ ಮಾಡಿದಂತೆ ಆಗುತ್ತದೆ ಎಂದು ಹೇಳಿ ರಾಷ್ಟ್ರಪತಿಗಳಿಗೆ ಕೊಟ್ಟಿರುವ ಮನವಿ ಏನಿದೆ ಅದು ಈ ದೇಶದ ಇತಿಹಾಸವೂ ಕೂಡ ಆಗಿದೆ. ಆ ಕಾರಣಕ್ಕಾಗಿ ಈ ವಿಷಯವನ್ನು ಅಂದಿನ ಪ್ರಧಾನ ಮಂತ್ರಿಗಳಾದ ನರಸಿಂಹರಾಯರು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿಕೊಟ್ಟಿದ್ದರು.

ಅಧ್ಯಕ್ಷರು : ನಿಮ್ಮ ಇಂಟರ್‌ಪ್ರೆಟೇಷನ್ ಪ್ರಕಾರ 243 ಡಿ ನಲ್ಲಿ number of seats to be reserved shall .... rotation is nil.

ಶ್ರೀ ಎಂ. ಪಿ. ಪ್ರಕಾಶ್ : ಸರಿಯಾದ ಅರ್ಥ ಸನ್ಮಾನ್ಯ ಅಧ್ಯಕ್ಷರೇ.

ಅಧ್ಯಕ್ಷರು : ಇವರ ಕಾಲದಲ್ಲಿ ತಂದ ಪ್ರಕಾರ ರೊಟೇಷನ್‌ನ್ನು 'ಷಲ್' ಮಾಡಿದ್ದಾರೆ

SRI M. Y. GHORPADE : It is very clear. Number of offices reserved under this clause shall be allotted by rotation to different panchayats at each level. ಇದರಲ್ಲಿ ಒಂದು ಕ್ಲಿಯರ್ ಇದೆ. ರಿಸರ್ವೇಷನ್ಸ್ ಮಾಡಲೇಬೇಕು. ಎಸ್‌ಸಿ/ ಎಸ್. ಟಿ ರಿಸರ್ವೇಷನ್ ಆಗಲೇಬೇಕು. ಹೆಣ್ಣುಮಕ್ಕಳಿಗೆ ರಿಸರ್ವೇಷನ್ಸ್ ಮಾಡಲೇಬೇಕು. ಆದರೆ ಇದು ರೊಟೇಷನ್ಸ್ ಬೇಸಿಸ್ ಮೇಲೆ ನಡೆಯಬೇಕು. ಬರೀ ಮೆಂಬರ್‌ಷಿಪ್‌ನಲ್ಲಿ ಅಲ್ಲ ಇದೇ ಆಧಾರದ ಮೇಲೆ chairpersons ಸೀಟನ್ನು ಏನು ರಿಸರ್ವ್ ಮಾಡುತ್ತೀರಿ, provided that number of offices of chairpersons reserved for scheduled tribes ಇದೂ ಕೂಡ ರೊಟೇಷನ್ ಬೇಸಿಸ್ ಮೇಲೆ. ಇದು ಬರೀ ಮೆಂಬರ್ಸ್ ಪ್ರಶ್ನೆ ಅಲ್ಲ. ರಿಸರ್ವೇಷನ್ಸ್ ಆಧಾರದ ಮೇಲೆ ಮೆಂಬರ್ಸ್ ಆಗಲಿ, ಛೇರ್ ಪರ್ಸನ್ಸ್ ಆಗಲಿ, ಏನು ಅವರಿಗೆ ಸ್ಥಾನ ರಿಸರ್ವ್ ಮಾಡುತ್ತೇವೆ, ತಮಗೆ ಗೊತ್ತಿದೆ, 'ಮೇ ಷಲ್' ಮೇ ಅಂದರೂ ಕೂಡ ಷಲ್ಲೇ. ಷಲ್ ಎಂದು ಹೇಳಿ ನೀವು ವಾದ ಮಾಡುವುದಕ್ಕಾಗುವುದಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ತಾವು, ಅಧ್ಯಕ್ಷರು, ಈ ವಿಚಾರವನ್ನು ಬಹಳ ಸ್ಪಷ್ಟವಾಗಿ ಅರ್ಥೈಸಿದ್ದೀರಿ. ಇದರಲ್ಲಿರುವುದು ದಿ ಜನರಲ್ ಕ್ಲಾಸಸ್ ಆಕ್ಟ್‌ನಲ್ಲಿ ತಾವು ನೋಡಬಹುದು. Where a 'May' can be read as "Shall", where a " Shall" has to read as a "May"

ಇದೆಲ್ಲಾ ಜನರಲ್ ಕ್ಲಾಸಸ್ ಆ್ಯಕ್ಟ್‌ನಲ್ಲಿ ಅದೆಲ್ಲಾ ಪ್ರಸ್ತಾಪವಾಗುತ್ತದೆ. ಅನೇಕ ಜಡ್ಜ್‌ಮೆಂಟ್‌ಗಳು ಈ ವಿಚಾರದಲ್ಲಿವೆ. ಆ ವಿಚಾರದಲ್ಲಿ ಪ್ರಶ್ನೆನೇ ಇಲ್ಲ. ಇಲ್ಲದೇ ಹೋಗಿದ್ದರೆ. ಮೇ ಮತ್ತು ಷಲ್‌ಗೆ ಅರ್ಥ ಇರುತ್ತಿರಲಿಲ್ಲ. ಈಗ ಅರ್ಥ ಇರುವುದು ಇಲ್ಲಿ ನೀವು ಸೀಟುಗಳನ್ನು ನಿರ್ಧಾರ ಮಾಡುವುದು ಷಲ್. ಅದು ಆಗಲೇಬೇಕು. ಆದರೆ ಅದು ಪರಾವರ್ತನೆಗೊಳ್ಳುವುದು ಏನು ಇದೆ, ಅದು ಐಚ್ಛಿಕ ಮೇ ಬಿ. ಏಕೆಂದರೆ ಅಲ್ಲಿರುವ ವಸ್ತುಸ್ಥಿತಿಯನ್ನು ನೋಡಿಕೊಂಡು ಆ ಜನಾಂಗ ಅಲ್ಲಿ ಇದೆಯೋ ಇಲ್ಲವೋ ಎನ್ನುವುದನ್ನು ತಿಳಿದುಕೊಂಡು ಅದು ಪರಾವರ್ತನಗೊಳ್ಳಲಿಕ್ಕಾಗಿಯೇ ಮೇ ಎನ್ನುವ ಶಬ್ದವನ್ನು ಕಾನ್‌ಸ್ಟಿಟ್ಯೂಷನ್‌ನಲ್ಲಿ ಉಪಯೋಗಿಸಿಕೊಂಡಿದ್ದಾರೆ. ಆದರೆ ತಾವು ತಮ್ಮ ಯಾಚನೆಯಲ್ಲಿ ಬರೆದಾಗ ತಾವು ದುರುದ್ದೇಶದಿಂದ ಮಾಡಿದ್ದೀರಿ ಎನ್ನುವ ಮಾತಲ್ಲ. ಯಾರಿಗಾದರೂ ಕೂಡ ಕಣ್ಣು ತಪ್ಪು ಆಗುವುದು ಇದೆ. ಅನುಭವ ಇಲ್ಲದೇ ಇರುವ ರೀತಿಯಲ್ಲಿ ಆಗುವುದು ಇದೆ.

"Provided that the seats reserved under Sub-section 2, 3 and 4 shall be allotted by rotation to different constituencies in the panchayat area."

It ties down the hands of the Deputy commissioner.,

Though under the supervision and overall control of election Commissioner, the Deputy commissioner or any other delegated authority had no other option except to change the constituencies.

ಶ್ರೀ ಎಂ.ವೈ ಘೋರ್ಪಡೆ : ಮೇ ಎನ್ನುವ ಶಬ್ದ ವಿಮೆನ್‌ಗೆ ಸಂಬಂಧಪಟ್ಟಹಾಗೆ 'ಮೆ' ಎಂದು ಓದಿದ್ದಾರೆ. ಎಸ್ ಸಿ ಎಸ್‌ಟಿಗೆ ಷಲ್ ಎಂದು ಇದೆ. ಹಾಗೆ ಅಂದಾಕ್ಷಣ ಇದು ವ್ಯತ್ಯಾಸ ಇದೆ ಎಂತಲ್ಲ. ಷಲ್ಲೇ,

ಅಧ್ಯಕ್ಷರು : ಘೋರ್ಪಡೆಯವರು ತಂದಿರುವ ಆ್ಯಕ್ಟ್‌ನಲ್ಲಿ ಏನು ಹೇಳಿದ್ದಾರೆ.

ಶ್ರೀ ಎಂ ವೈ. ಘೋರ್ಪಡೆ : ಷಲ್ ಇದೆ.

ಶ್ರೀ ಎಂ. ಪಿ.ಪ್ರಕಾಶ್ : ಘೋರ್ಪಡೆಯವರು ತಂದಿರುವ ಕಾಯ್ದೆಯಲ್ಲಿ ಹಿಂದಿನ ಭಾಗವನ್ನು ಓದುತ್ತೇನೆ.

MR.SPEAKAR : Read with reference to Section 2,3,4,.

ಶ್ರೀ ಎಂ.ಪಿ.ಪ್ರಕಾಶ್ : ಅಂಡರ್ ಸೆಕ್ಷನ್ 5 ಆಫ್ ದಿ ಗ್ರಾಮ ಪಂಚಾಯಿತಿಯೊಳಗೆ ಪ್ರಾವಿಸೋ 4 ರ ಕೆಳಗೆ ಅಲ್ಲಿಂದಲೇ ಓದಿಬಿಡುತ್ತೇನೆ.

"Not less than 1/3rd of the seats reserved in each category for persons belonging to scheduled castes, scheduled tribes and backward classes, under the non-reserved seats in the gram panchayats shall be reserved for women in all category :

Provided that the seats reserved under sub-section: 2,3 and 4 shall be allotted by rotation to different constituencies in the panchayat area."

8.20 ಪಿ.ಎಂ.

"Shall be rotated" - which was not said in the constitution they brought this during their period. In the Constitution they said "May be"...

SRI M.Y.GHORPADE : Not at all. "Shall" is mentioned.

MR. SPEAKER : What is your intended amendment?

SRI M.Y.GHORPADE : There is no 'may' or shall'. may and shall becomes an academic discussion.

SRI. M.P.PRAKASH : Kindly see Section 243 -Reservation of Seats:

"Seats shall be reserved for scheduled castes, the scheduled tribes in every panchayat and the number of seats so reserved shall bear as nearly

as may be the same proportion to the total number of seats to be filled by a direct election in that panchayat as the population of the scheduled castes in the panchayat area or the scheduled tribes in that panchayat area bears to the total population of that area and such seats may be allotted by rotation to different constituencies in the panchayat."

It is very clear. "May be allotted" - What does it mean? ರಾಜ್ಯಾಂಗದಲ್ಲಿ ಯಾವ ವಿಚಾರ ಹೇಳಿಲ್ಲವೋ ಅದನ್ನು ಇವರು ತಮ್ಮ ಕಾನೂನಿನಲ್ಲಿ ತಂದರು. ಸುಪ್ರೀಂ ಕೋರ್ಟಿನ ತೀರ್ಪನ್ನು ಕಾಯಬೇಕು.

SMT. PRAMILA NESARG : That is not before the supreme court.

SRI M.P.PRAKASH : Then, "Chairpersons".

"The offices of the chairpersons in the panchayat at the village or any other level shall be reserved for scheduled castes, the scheduled tribes and women in such manner as the legislature of a State may, by law, provide, provided that the number of offices of the chairpersons reserved for scheduled castes and scheduled tribes in the panchayat at each level in any State shall bear as nearly as may be the same proportion to the total number of such as may be the same proportion to the total number of such offices in the panchayat at such level as the population of the scheduled castes and scheduled tribes in the State bears to the population of the State provided further that not less than 1/3rd of the total number of the chairpersons in the panchayat at each level shall be reserved for.. women, provided also that the number of offices reserved under the clause shall be allotted by rotation to different panchayats at each level."

ಆಫೀಸ್ ಛೇರ್ ಪರ್ಸನ್‌ಗೆ ಸಂಬಂಧಪಟ್ಟಿದ್ದು ಇಲ್ಲಿ ಬರತಕ್ಕದ್ದರಲ್ಲಿ 'ಮೇ' ಉಪಯೋಗಿಸುತ್ತಾರೆ 243 ಬಿ ಕೆಳಗೆ ಬಂದಾಗ 'ಶಲ್' ಉಪಯೋಗಿಸುತ್ತಾರೆ.

ಶ್ರೀಮತಿ ಪ್ರಮೀಳಾ ನೇಸರ್ಗಿ : ಮೇ ಆರ್ ಶಲ್ . .

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ : ರೊಟೇಷನ್ ಆಗಬೇಕು ಎನ್ನುವ ಕಾರಣದಿಂದ ಆ ಪ್ರಾವಿಷನ್ ಹಾಕಿದ್ದು.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ಕೂಡ ಇಲ್ಲಿ ರಾಜ್ಯಾಂಗ ಪಂಡಿತರಾಗುವಂತಹ ಪ್ರಯತ್ನ ಇಲ್ಲಿ ಮಾಡಬೇಕಾದಂತಹ ಅಗತ್ಯ ಇಲ್ಲ. ಇದು ದುಸ್ಸಾಹಸ. ಇಲ್ಲಿ ಒಂದು ಕಡೆಗೆ ಅದೇ ಅದೇ ರಾಜ್ಯಾಂಗದಲ್ಲಿ 'ಮೇ' ಉಪಯೋಗಿಸಿ ಮತ್ತೊಂದು ಕಡೆ 'ಶಲ್' ಉಪಯೋಗಿಸಿಕೊಳ್ಳುವುದಕ್ಕೆ ರಾಜ್ಯಾಂಗದಲ್ಲಿ ಇದನ್ನು ಬರೆಯುವಾಗ ಅದಕ್ಕೆ ಒಂದು ಉದ್ದೇಶ

ಇದೆ. ಆ ಉದ್ದೇಶ, ಅಲ್ಲಿಯ ಪರಿಸ್ಥಿತಿಯನ್ನು, ವಾಸ್ತವ ಸಂಗತಿಯನ್ನು ತಿಳಿದುಕೊಂಡು ಅದನ್ನು ಸೀಟುಗಳನ್ನು ರೊಟೇಷನ್ ಮಾಡತಕ್ಕದ್ದರಲ್ಲಿ 'ಮೇ' ಉಪಯೋಗಿಸಿಕೊಂಡು ಛೇರ್ ಪರ್ಸನ್ಸ್ ಮಾಡುವಾಗ 'ಶಲ್' ಎಂಬ ಪದವನ್ನು ಉಪಯೋಗಿಸಿಕೊಂಡಿದ್ದಾರೆ. ಆ 'ಶಲ್' ಎಂಬ ಪದವನ್ನು ಉಪಯೋಗಿಸುವಾಗ ಅದನ್ನು ಮಾನ್ಯ ಘೋರ್ಪಡೆಯವರಿಗೆ ತಪ್ಪು ಅಭಿಪ್ರಾಯಾವೋ ಅಥವಾ ಗೊತ್ತಾಗದೆಯೋ 'ಶಲ್' ಎಂದು ಉಪಯೋಗಿಸಿಕೊಂಡಿದ್ದರೆ ನಮಗೆ ಇಲ್ಲಿ ನಮಗೆ ಇಂತಹ ಅನಾಹುತಕ್ಕೆ ಕಾರಣವಾಗಿದೆ. ಈಗ ಈ ವಿಚಾರದಲ್ಲಿ ನಾವೆಲ್ಲರೂ ಕೂಡ ಅದನ್ನು ಚರ್ಚೆ ಮಾಡಬೇಕಾದ ಅಗತ್ಯ ಇಲ್ಲ. ಇದನ್ನು ಇಲ್ಲಿಗೇ ಕೈಬಿಡುತ್ತಿದ್ದೇನೆ. ಆದ್ದರಿಂದ ನಾವು ರಾಜ್ಯಾಂಗಕ್ಕೆ ವಿರೋಧವಾಗಿರತಕ್ಕಂಥ ನಿಯಮಾವಳಿಗಳನ್ನು ನಾವು ಮಾಡಿಲ್ಲ. ಒಂದು ವೇಳೆ ರಾಜ್ಯಾಂಗಕ್ಕೆ ವಿರೋಧವಾಗಿರುವಂತಹ ನಿಯಮಾವಳಿಗಳು ಆಗಿದ್ದರೆ ಖಂಡಿತವಾಗಿಯೂ ನಮ್ಮಲ್ಲಿರತಕ್ಕ ರಾಜ್ಯ ಹೈಕೋರ್ಟಿನ ತೀರ್ಮಾನದಲ್ಲಿ ಈ ವಿಷಯ ಪ್ರಸ್ತಾಪಿಸಲ್ಪಡುತ್ತಿತ್ತು.

ಶ್ರೀ ಕಾಗೋಡು ತಿಮ್ಮಪ್ಪ : ಹೈಕೋರ್ಟಿಗೆ ಹೋಗೇ ಇಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ತಾವು ತಮ್ಮ ಧರ್ಮಸಿಂಗ್ ಅವರನ್ನು ಕೇಳಿ ಯಾವ ವಿಚಾರದಲ್ಲಿ ಹೋಗಿದ್ದಾರೆ ಎಂದು. ಮಾನ್ಯ ಬಿ.ಕೆ. ಚಂದ್ರಶೇಖರ್ ಅವರು ಹೋಗಿದ್ದಾರೆ. ಅದನ್ನು ತಾವು ಕೇಳಿ. ಅವರು ಕಾರ್ಯದರ್ಶಿಯಾಗಿದ್ದಾರೆ. ಒಬ್ಬರು ಹಿಂದಿನ ಅಧ್ಯಕ್ಷರಾಗಿದ್ದಾರೆ. ಅವರೇ ಹೋಗಿದ್ದಾರೆ. ಮಾನ್ಯ ಬಿ.ಕೆ.ಚಂದ್ರಶೇಖರ್ ಅವರು ಈ 1993ರ ಕಾನೂನಿನಲ್ಲಿ ನೀವು ಇವತ್ತಿನ ದಿವಸ 'ನಗೆಯು ಬರುತಿದೆ' ಎಂದು ದಾಸರು ಹೇಳಿದಂತೆ ಇವತ್ತು ನಗೆ ಬರುತ್ತಿದೆ. ಮಾನ್ಯ ಘೋರ್ಪಡೆಯವರು ಪ್ರಜಾಪ್ರಭುತ್ವದ ವಿಷಯದಲ್ಲಿ ಕೆಲವು ಸಲ ತೆಗೆದುಕೊಂಡಿರತಕ್ಕಂಥ ನಿರ್ಣಯವನ್ನು ನಾನು ಅಭಿನಂದಿಸುತ್ತೇನೆ. ಅವರು ತೋರಿಸಿದಂತಹ ದಿಟ್ಟ ನಿಲುವಿಗೆ ಅಭಿನಂದಿಸುತ್ತೇನೆ, ಗೌರವದಿಂದ ತಲೆ ಬಾಗಿದ್ದೇನೆ. ಅಂತಹ ದಿಟ್ಟತನ ನಮಗೆ ಇಲ್ಲ ಅಂಜುಕುಳಿತನ ನಮಗೆ ಇದೆ. ಆದರೆ ಅವರೂ ಕೂಡ ಅವತ್ತಿನ ದಿವಸ ಅಸಹಾಯಕರು ಆಗಿದ್ದರು ಅಥವಾ ಅನ್ಯ ಕಾರಣಗಳಿಗೆ ಆಗಿದ್ದರೋ ಗೊತ್ತಿಲ್ಲ. ಜಿಲ್ಲಾ ಪಂಚಾಯತಿಯ ಅಧ್ಯಕ್ಷರಿಗೆ, ತಾಲ್ಲೂಕು ಪಂಚಾಯಿತಿಯ ಅಧ್ಯಕ್ಷರುಗಳಿಗೆ ಅದಕ್ಕಿಂತ ಹೆಚ್ಚಿಗೆ ಅಲ್ಲಿರುವಂತಹ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರವನ್ನು ಕೊಟ್ಟರು. ಅವರು ಚುನಾಯಿತ ಪ್ರತಿನಿಧಿಯ ಮೇಲೆ ನಂಬಿಕೆ ಇಟ್ಟುಕೊಳ್ಳಲಿಲ್ಲ. ಅದನ್ನು ನಾವು ಬಂದು ಸರಿಪಡಿಸಬೇಕಾಯಿತು. ಇವತ್ತು ಯಾರು ಅಧಿಕಾರ ವಿಕೇಂದ್ರೀಕರಣದ ಬಗ್ಗೆ, ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಮಾತನಾಡುತ್ತಾರೆ ಅಲ್ಲಿ ಚುನಾಯಿತರಾಗಿರುವಂತಹ ಅಧ್ಯಕ್ಷ, ಉಪಾಧ್ಯಕ್ಷರಿಗೆ ಅಧಿಕಾರವನ್ನು ಕೊಡದೇ ಒಬ್ಬ ಐ.ಎ.ಎಸ್ ಅಧಿಕಾರಿಗೆ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಅಧಿಕಾರವನ್ನು ಕೊಟ್ಟಿದ್ದರು. ಇವರಿಗೆ ಓವರ್ ಆಲ್ ಕಂಟ್ರೋಲ್ ಅಂಡ್ ಸೂಪರ್‌ವಿಷನ್ ಎನ್ನತಕ್ಕ ಶಬ್ದಕ್ಕೆ. ಇದರಲ್ಲೇನು ಸೂಪರ್‌ವಿಷನ್?

SRI. M.Y. GHORPADE : I must contradict this. The Panchayat Raj Act 1993 does not give power to the officials. On the other hand, his own expert committee has said, it gives more power to the elected persons than the officials. The expert group has said, as a matter of fact, the 1993 Act gives more power to the non-officials than the officials. So, it is com-

pletely wrong to say and it has been made very clear that power is vested in the elected body and the elected body exercises supervision and control over all the officers. There is no question. This is built-up propaganda. Executive Head is only a designation. That doesn't mean that the Executive Head has more power than the elected body.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಇವತ್ತು ಒಬ್ಬ ಮಂತ್ರಿ ತಮ್ಮ ಕೈಕೆಳಗೆ ಇರತಕ್ಕ ಎಲ್ಲಾ ಜನಗಳ ಮೇಲೆ ಒಂದು ಉಸ್ತುವಾರಿ ಮಾಡುವಂತಹ ಅದನ್ನು ನಿಯಂತ್ರಿಸುವ ಅಧಿಕಾರ ಇದೆ ಎನ್ನುವುದಾಗಿದ್ದರೆ ಅವರಿಗೆ ಯಾರು ಕಡತವನ್ನು ಕಳುಹಿಸಿಕೊಡುತ್ತಾರೆ? ಅವರಿಗೇ ಎಲ್ಲಾ ಅಧಿಕಾರವನ್ನು ಕೊಟ್ಟು ಬಿಡಬಹುದಿತ್ತಲ್ಲ. ಅವತ್ತಿನ ದಿವಸ ಇವತ್ತು ನಿಮ್ಮ ಕಾರ್ಯದರ್ಶಿಗಳಾಗಿರತಕ್ಕಂಥ ಮಾನ್ಯ ಪ್ರೊ: ಬಿ.ಕೆ. ಚಂದ್ರಶೇಖರ್ ಅವರು ಡೆಕ್ಕನ್ ಹೆರಾಲ್ಡ್‌ನಲ್ಲಿ ಯಾವ ತರಹವಾದ ಆರ್ಟಿಕಲ್‌ನ್ನು ಬರೆದಿದ್ದರು ಎಂಬುದನ್ನು ದಯವಿಟ್ಟು ಓದಿ. ನಾವು ಅದನ್ನು ಕಳುಹಿಸಿಕೊಡುತ್ತೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮ ಜೊತೆಯಲ್ಲಿರುವಾಗ ತಮ್ಮ ಪರವಾಗಿ ಬರೆದರು. ನಮ್ಮ ಜೊತೆಯಲ್ಲಿರುವಾಗ ನಮ್ಮ ಪರವಾಗಿ ಬರೆಯುತ್ತಾರೆ.

ಶ್ರೀ ಎಂ.ಪಿ. ಪ್ರಕಾಶ್ : ತಾವು ಅವರ ಬಗ್ಗೆ ಈ ಅಭಿಪ್ರಾಯವನ್ನು ಇಟ್ಟುಕೊಂಡಿದ್ದರೆ ಅದರಿಂದ ಸಂತೋಷ. ಅದರ ಬಗ್ಗೆ ನಮಗೇನೂ ಭಿನ್ನಾಭಿಪ್ರಾಯ ಇಲ್ಲ.

ಅಧ್ಯಕ್ಷರು : ಏನಾಯಿತು, ನಾನು ಸರಿಯಾಗಿ ಗಮನಿಸಲಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ನಿಮ್ಮ ಜೊತೆಗೆ ಇದ್ದಾಗ ಸರಿಯಾದಂತಹ ಮಾರ್ಗದರ್ಶನ ಮಾಡುತ್ತಿರಲಿಲ್ಲ. ಈಗ ನಮ್ಮ ಜೊತೆಗೆ ಬಂದ ಮೇಲೆ ಚರ್ಚೆ ಮಾಡಿ ಸರಿಯಾದಂತಹ ಮಾರ್ಗದರ್ಶನ ಮಾಡಿದರು.

ಶ್ರೀ ಎಂ.ಪಿ. ಪ್ರಕಾಶ್ : ತಾವು ಆಗಲೇ ಮಾನ್ಯ ಮೊಯಿಲಿಯವರು ಹೇಳುವಾಗ ಹೇಳಿದ್ದರೆ I would have confined myself to those things and all that. He has brought those things on record.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ನಮ್ಮ ಜೊತೆಗೆ ಸರಿಯಾಗಿದ್ದಾರೆ. ನಿಮ್ಮ ಜೊತೆಗೆ ಇರುವಾಗ ಅದು ಸಹವಾಸ ದೋಷ. ಸರಿ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಬಿ.ಕೆ. ಚಂದ್ರಶೇಖರ್ ಅವರು ಆ ಕಡೆಗೆ ಇರುವಾಗ ನಿಮ್ಮ ಪರ ಇದ್ದರು, ಈ ಕಡೆಗೆ ಇರುವಾಗ ನಮ್ಮ ಪರ ಇದ್ದಾರೆ ಎಂದು ಮಾನ್ಯ ಮೊಯಿಲಿಯವರು ಹೇಳಿದರು. ಈಗ ಸಮರ್ಥನೆ ಮಾಡಿಕೊಳ್ಳುವುದಕ್ಕೆ ಯಾರು ಅವರ ಪರ?

ಶ್ರೀ ಎಂ.ಪಿ. ಪ್ರಕಾಶ್ : ತರಬೇಕಾದ್ದು ಇಲ್ಲ. ಇನ್ಸಿಡೆಂಟಲಿ ಈ ವಿಚಾರ ಮಾತನಾಡಿದ್ದೇವೆಯೇ ಹೊರತು ಬೇರೆ ಅಲ್ಲ.

ಶ್ರೀ ವಾಟಾಳ್ ನಾಗರಾಜ್ : ನೀವೇ ತಂದುಬಿಟ್ಟರೆ ಸರಿ ಆಗುತ್ತದೆಯೇ?

ಶ್ರೀ ಎಂ.ಪಿ. ಪ್ರಕಾಶ್ : ಈಗ ಅವರು ಈ ಸದನದ ಸದಸ್ಯರು ಅಲ್ಲ. ಆ ವಿಚಾರವನ್ನು ಇಲ್ಲಿಗೇ ಬಿಡೋಣ. ಈ ದೊಡ್ಡ ನಗರಗಳು, ದೊಡ್ಡಪಂಚಾಯಿತಿ ಆದರೆ ಗ್ರಾಮ ಸಭೆ ಆಗತಕ್ಕದು ಕಷ್ಟ ಆಗುತ್ತದೆ ಎನ್ನುವಂತಹ ಮಾತನ್ನು ಕೂಡ ಹೇಳಿದ್ದಾರೆ. ಗ್ರಾಮ ಸಭೆ ವಿಚಾರದಲ್ಲಿ ಇವತ್ತಿಗೂ ಸಹ ದೊಡ್ಡ ಗೊಂದಲ ಇದೆ. ಗ್ರಾಮ ಸಭೆಯಲ್ಲಿ ಎಷ್ಟು ಕೋರಂ ಇರಬೇಕು ಎನ್ನುವ ವಿಚಾರದಲ್ಲಿ ನಿರ್ಣಯ ಇಲ್ಲ. ಗ್ರಾಮ ಸಭೆ ತೆಗೆದುಕೊಳ್ಳತಕ್ಕ ನಿರ್ಣಯದಲ್ಲಿಯೇ, ಅವರು ಕೊಡುವಂತಹ ಕ್ರಿಯಾಯೋಜನೆಗೆ ಒಪ್ಪಿಗೆ ಕೊಟ್ಟರೆ ಪಂಚಾಯಿತಿಯವರು ಮಾಡಿದಂತಹ ಕ್ರಿಯಾ ಯೋಜನೆಗೆ ಏನು ಬೆಲೆ ಬರುತ್ತದೆ ಎನ್ನತಕ್ಕ ವಿಚಾರಗಳೂ ಕೂಡ ಚರ್ಚೆಗೆ ಅರ್ಹವಾಗಿವೆ. ಅದರಲ್ಲಿ ಕರ್ನಾಟಕ ರಾಜ್ಯ ಪ್ರಥಮವಾಗಿ ನಾವು ಅದರ ಬಗ್ಗೆ ಆಸಕ್ತಿಯನ್ನು ತಾಳಿ amendments to the amendments ಎನ್ನ ತಕ್ಕ ವಿಚಾರದಲ್ಲಿ ರಾಜ್ಯಾಂಗದ ಕೆಲವು ತಿದ್ದುಪಡಿಗಳು ಏನು ಇವೆ, the rigidity of language and otherwise of it also ಇದರ ಬಗ್ಗೆ ಚರ್ಚೆ ಆಗಬೇಕು ಎನ್ನುವ ಕಾರಣಕ್ಕಾಗಿ ಒಂದು ದೊಡ್ಡ ವಿಚಾರ ಸಂಕಿರಣವನ್ನು ಏರ್ಪಾಡು ಮಾಡಿದ್ದೇವೆ. ಈಗ ಅಖಿಲ ಭಾರತ ಮಟ್ಟದಲ್ಲಿ ಮಾನ್ಯ ಬಾಬಾ ಗೌಡ ಪಾಟೀಲ್ ಅವರು ನನ್ನ ಅಧ್ಯಕ್ಷತೆಯಲ್ಲಿ ಒಂದು ಸಬ್ ಕಮಿಟಿಯನ್ನು ಮಾಡಿದ್ದಾರೆ. ಗ್ರಾಮ ಸಭೆಗೆ ಸಂಬಂಧಿಸಿರುವ ವಿಷಯದಲ್ಲಿ ತಾವು ಮೂರು ತಿಂಗಳೊಳಗಾಗಿ ಒಂದು ಅಧ್ಯಯನ ಮಾಡಿ ಒಂದು ವರದಿಯನ್ನು ಕೊಡಬೇಕೆಂದು ಹೇಳಿದ್ದಾರೆ. ಇದಕ್ಕೆ ಚಂದನ್ ದತ್ತಾ ಎಂಬುವರು ಸದಸ್ಯರಾಗಿದ್ದಾರೆ. ಹಿಂದೆ ಐ.ಎ.ಎಸ್. ಅಧಿಕಾರಿಯಾಗಿ ರಾಜೀನಾಮೆ ಕೊಟ್ಟು ಮಧ್ಯಪ್ರದೇಶದ ಬಸ್ತಾರ್ ಎಂಬ ಟ್ರೈಬಲ್ ಏರಿಯಾದಲ್ಲಿ ಕೆಲಸ ಮಾಡತಕ್ಕ ಡಾ: ಶರ್ಮಾ ಎಂಬುವರೂ ಒಬ್ಬ ಸದಸ್ಯರಾಗಿದ್ದಾರೆ. ಈಗ ನಾವು ಮೊದಲನೇ ಮೀಟಿಂಗನ್ನು ಮಾಡಿದ್ದೇವೆ.

ಎರಡನೆಯ ಸಭೆಯನ್ನೂ ಕೂಡ ನಡೆಸುವವರಿದ್ದೇವೆ. ಗ್ರಾಮಸಭೆ ಎನ್ನುವುದೊಂದು ಆದರ್ಶವಾದ ಕಲ್ಪನೆಯಾಗಿದ್ದು, ಇದನ್ನು ನೇರವಾಗಿ ನಾವು ಅನುಷ್ಠಾನಗೊಳಿಸುವ ಸಂದರ್ಭದಲ್ಲಿ ಬರುವಂಥ ಕೆಲವು ಕ್ರಿಯಾತ್ಮಕ ತೊಡಕುಗಳೇನಿವೆ, ಅದನ್ನು ಸರಿಪಡಿಸಿಕೊಂಡು ಹೋಗುವುದು. ಮಾನ್ಯ ಹಿರಿಯ ಸದಸ್ಯರಾದ ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿರುವಂತೆ ಅದು ಆಗಿಂದಾಗ್ಗೆ ತತ್‌ಕ್ಷಣ ಸರಿಯಾಗಿರುವುದಕ್ಕೆ ಸಾಧ್ಯವಾಗುವುದಿಲ್ಲ, ಅನುಭವಗಳ ಮೂಲಕ ಅದನ್ನು ಸರಿಪಡಿಸುತ್ತಾ ಹೋಗಬೇಕಾಗುತ್ತದೆ. ಆ ದೃಷ್ಟಿಯಿಂದ ಗ್ರಾಮಸಭೆ ದೊಡ್ಡ ಗ್ರಾಮಗಳಾದಾಗ ಆಗುವುದಿಲ್ಲವೆನ್ನುವುದೇನಿದೆ, ಅದೇ ಒಂದು ತಾರ್ಕಿಕವಾದ ನಿಲುವು ಆಗತಕ್ಕಂಥಾದ್ದಲ್ಲ. ನಮ್ಮ ದೃಷ್ಟಿಯಲ್ಲಿ ಇವೊತ್ತು ಅಂತಹ ಮಂಡಲ ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಇದ್ದುದರಿಂದ ಮಾನ್ಯ ಸದಸ್ಯರುಗಳಾದ ಜೆ. ಸಿ. ಮಾಧುಸ್ವಾಮಿ, ಎಂಸಿ. ನಾಣಯ್ಯ, ಚಂದ್ರಶೇಖರಯ್ಯ ಇನ್ನು ಅನೇಕ ಹಿರಿಯ ಸದಸ್ಯರುಗಳು ಜಿಲ್ಲಾ ಪಂಚಾಯಿತಿ ಸದಸ್ಯರಾಗಿ ಕಾರ್ಯನಿರ್ವಹಿಸಿಯೇ ಇಲ್ಲಿಗೆ ಬಂದಿರುವವರಾಗಿದ್ದಾರೆ. ಆದುದರಿಂದ, ರೊಟೇಷನ್ ಸಿಸ್ಟಂನಲ್ಲಿ ಒಂದು ನಾಯಕತ್ವವನ್ನು ಬೆಳೆಸಬೇಕೆನ್ನುವ, ಅಲ್ಲಿ ಜನಾಂಗ ಇರದಂಥ ಕಡೆಗಳಲ್ಲಿ ಅದನ್ನು ಸೇರಿಸಬಾರದೆನ್ನುವ ಕಾರಣಕ್ಕಾಗಿಯೇ ಇದನ್ನು ತಂದಿರುವುದು. ಅಲ್ಲದೆ, ನೀವು ಸಂಪೂರ್ಣವಾದ ಅಧಿಕಾರವನ್ನು ಡಿ.ಸಿ.ಯವರಿಗೆ ಕೊಟ್ಟಿದ್ದೀರಿ ಎಂಬ ಎರಡನೇ ವಾದವನ್ನು ಮಂಡಿಸಿದ್ದೀರಿ. ಪ್ರಜಾಪ್ರಭುತ್ವದಲ್ಲಿ ಅಷ್ಟು ನಂಬಿಕೆಯಿರುವ

ಘೋರ್ಪಡೆಯವರು ಸೆಕ್ಷನ್ 8 ಅನ್ನು ಏತಕ್ಕಾಗಿ ತರಬೇಕಾಗಿತ್ತು? ಅದರಲ್ಲಿ ಏನು ಹೇಳುತ್ತಿದ್ದರು? "Appointment of an Administrative Committe or an Administrator on a failure to elect the Members of the Grama Panchayat. (a) If the Deputy Commissioner is satisfied that the Grama Panchayat for a village or a group of villages, immediately after the establishment of such Grama Panchayats which cannot be constituted by a reason of : (1) any difficulty in holding an election of the Members of the Grama Panchayat or failure to elect such members at two successive elections held under sub section (6) of Section 5, or any other sufficient reason whatsoever." If I also were to make such hair-splitting argument, what was the necessity for you to include proviso three? I can understand a contingency where for successive period if election is not held, if Grama Sabha election or Grama Panchayat election is not held for certain reasons beyond the control. But where was the necessity for you to include this particular provision. "Any other sufficient reason whatsoever"? That means, the Deputy Commissioner had the pleasure on the capacity and the authority to interpret in whatever way he wanted to have it. There was no necessity for you if you were to have the conviction that the Deputy Commissioner should not have it. "for any other sufficient reason".

SHRI. M.Y. GHORPADE : The Hon'ble Minister knows that this is a contingency provision. If it becomes inevitable, then the Deputy Commissioner can do that, that too, for a very limited number of times. As you know, not once the Deputy Commissioner has exercised this power when we were in Government.

SHRI M.P.PRAKASH : Sir, I never doubted the bonafide of your argument. I never even doubted that it was only an enabling provision under certain difficult situations. But here is a clause. You should have stopped at that.

ನಾನು ಏಕೆ ಇದನ್ನೆಲ್ಲವನ್ನೂ ಹೇಳಿದೆನೆಂದರೆ, ಈ ಕುರಿತಾದ ವಿಚಾರವನ್ನು ನಾನು ಹಿಂದಿನ ಸಂದರ್ಭದಲ್ಲಿಯೇ ಹೇಳಿದ್ದೇನೆ. ಹೆರಾಲ್ಡ್ ವಿಲ್ಸನ್‌ರವರು ಪ್ರಧಾನಮಂತ್ರಿಗಳಾಗಿದ್ದಾಗ ಎಡ್ವರ್ಡ್ ಹಿತ್‌ರವರು ವಿರೋಧ ಪಕ್ಷದ ನಾಯಕರಾಗಿದ್ದರು. ಒಮ್ಮೆ ಬಿ.ಬಿ.ಸಿ.ಯವರು ಅವರಿಬ್ಬರನ್ನೂ ಲೇವಡಿಗೊಳಿಸುವ ಉದ್ದೇಶದಿಂದ ದೂರದರ್ಶನದಲ್ಲಿ ಎಡ್ವರ್ಡ್ ಹಿತ್‌ರವರ ಮುಖದ ಭಾವ ತೋರಿಸಿ ಹೆರಾಲ್ಡ್ ವಿಲ್ಸನ್‌ರವರ ಭಾಷಣ ಹಾಕುತ್ತಿದ್ದರು. ಹಾಗೆಯೇ ಹೆರಾಲ್ಡ್ ವಿಲ್ಸನ್‌ರವರ ಮುಖ ಭಾವ ತೋರಿಸಿ ಎಡ್ವರ್ಡ್ ಹಿತ್‌ರವರ ಭಾಷಣ ಹಾಕುತ್ತಿದ್ದರು. ತಾವು ಇಲ್ಲಿ ಕುಳಿತಾಗ ಅದೇ ತಮ್ಮ ಡಿ.ಸಿ.ಯವರನ್ನು ನಂಬುತ್ತೀರಿ, ಮತ್ತು ಅದೇ ಡಿ.ಸಿ.ಯವರ ಮುಖಾಂತರ ವಿಚಾರವನ್ನೂ ಪ್ರಸ್ತಾಪ ಮಾಡುತ್ತೀರಿ. ಆದರೆ, ನೀವು ಆಕಡೆ ಹೋದ ತಕ್ಷಣ ಈ ಕಡೆ ಕುಳಿತಂಥ ಎಲ್ಲರೂ ಕೂಡ ಅದೇ ಜಿಲ್ಲಾಧಿಕಾರಿಗಳನ್ನು ನಾವು ದುರುಪಯೋಗ ಪಡಿಸಿಕೊಳ್ಳುತ್ತಿದ್ದೇವೆಂದು ತಾವೇಕೆ ಭಾವಿಸುತ್ತೀರಿ?

ಆ ರೀತಿ ಭಾವಿಸಬೇಕಾದಂಥ ಅಗತ್ಯವಿಲ್ಲ. ಇಲ್ಲಿದ್ದಾಗ ತಾವು ಹೇಗೆ ಮಾಡಿದ್ದಿರೋ ಅದೇ ತರಹದ ಕಂಟಿಂಜೆಂಟ್ ಕ್ಲಾಸ್ ನಮ್ಮ ಮುಂದಿದೆ. ಅತ್ಯಂತ ವಿನಯದಿಂದ ಹಿರಿಯ ಸದಸ್ಯರುಗಳಿಗೆ ಹೇಳುತ್ತಿರುವುದೇನೆಂದರೆ, ಆರ್ಟಿಕಲ್ 243(ಡಿ) ಅಥವಾ 243(ಇ)ರ ಕೆಳಗೆ ನಾವು ಅವಧಿಯನ್ನು ವಿಸ್ತರಿಸುವುದಕ್ಕೆ ಸಾಧ್ಯವಿಲ್ಲ. ಆದರೂ ಅವಧಿಯನ್ನು ವಿಸ್ತರಿಸಿದ್ದೇವೆ. ಮಾನ್ಯ ಸದಸ್ಯರುಗಳಾದ ಶ್ರೀಮತಿ ಪ್ರಮೀಳಾ ನೇಸರ್ಗಿ ಹಾಗೂ ಮಾನ್ಯ ವೀರಪ್ಪ ಮೊಯಿಲಿಯವರು ಕೆಲವು ವಿಚಾರಗಳ ಬಗ್ಗೆ ಮಾತನಾಡುತ್ತಾ ill-timing ಎನ್ನುವ ಮಾತನ್ನಾಡಿದರು. Yes it may be an ill-timing. ಘೋರ್ಪಡೆಯವರೇ, ತಾವೂ ಕೂಡ ಹೇಳಿದಿರಿ. 'ಮಾನ್ಯ ಮುಖ್ಯಮಂತ್ರಿಗಳು 9ನೇ ತಾರೀಖಿನ ದಿವಸ ನಮ್ಮೆಲ್ಲರ ಸಭೆ ಕರೆದಾಗ ಮತ್ತು ಸಭೆಯಲ್ಲಿ ಚರ್ಚೆಯಾಗಿ ಇದನ್ನು ಚಿಕ್ಕದಾಗಿ ಮಾಡಬೇಕೆಂದು ಪ್ರಸ್ತಾಪವಾದಾಗ ಎರಡೂ ಪಕ್ಷದವರೂ ಸೇರಿಕೊಂಡು ಅದು ಹೇಗಿದೆಯೋ ಹಾಗೇ ಇರಲಿ, ದೊಡ್ಡದಾಗಿ ಮಾಡಬೇಕಾದ ಅಗತ್ಯವಿಲ್ಲವೆಂದು ನಾವು ಹೇಳಿದೆವು, ಅದೂ ಕೂಡ ತಾವು ಮಾಡಿದ್ದೀರಿ' ಎನ್ನುವ ಮಾತನ್ನು ಹೇಳಿದಿರಿ. ಅಷ್ಟರ ಮಟ್ಟಿಗೆ ನಾನು ತಮ್ಮ ಮಾತಿಗೆ ಗೌರವ ಕೊಡುತ್ತೇನೆ. ಆದರೆ, ಹಿಂದಿನ ಪಂಚಾಯಿತಿಗಳಲ್ಲಿ ನಮಗಾದ ಅನುಭವದಿಂದ ಅದನ್ನು ಮಾಡಬೇಕಾಗಿತ್ತು ಮತ್ತು ನಮ್ಮ ಚುನಾವಣಾ ಪ್ರಣಾಳಿಕೆಯಲ್ಲಿ ಯಾವ ಮಾತನ್ನು ಹೇಳಿದ್ದೇವೆಂದರೆ ನಾವು ಅಧಿಕಾರಕ್ಕೆ ಬಂದರೆ ನಜೀರ್‌ಸಾಬ್‌ರವರ ಕಾಲದಲ್ಲಿದ್ದಂಥ ಕಾನೂನನ್ನು ಮತ್ತೆ ತರುವುದಕ್ಕಾಗಿ 1993ರ ಕರ್ನಾಟಕ ಪಂಚಾಯತ್ ರಾಜ್ ಕಾನೂನನ್ನು ಇಡಿಯಾಗಿ ತೆಗೆದುಹಾಕುತ್ತೇವೆಂದೆವು. ಇದು ನಮ್ಮ ಪ್ರಣಾಳಿಕೆ. ಆದರೆ, ಚುನಾವಣೆಯಲ್ಲಿ ನಾವು ಗೆದ್ದು ಬಂದರೂ ಕೂಡ ಒಂದು ವಾದ ಆ ಸಂದರ್ಭದಲ್ಲಿ ಬಂತು. ಪದೇ ಪದೆ ಪಕ್ಷಗಳು ಅಧಿಕಾರ ವ್ಯತ್ಯಾಸವಾದಂಥ ಸಂದರ್ಭದಲ್ಲಿ ಇಂತಹ ಒಂದು ಮಹತ್ವವಾಗಿರುವ ವ್ಯವಸ್ಥೆ ಬೇರೂರಬೇಕಾದಂಥ ಸಂದರ್ಭದಲ್ಲಿ ಸ್ಥಳಾಂತರ ಮಾಡತಕ್ಕಂಥಾದ್ದಾಗಲಿ, ಆ ಪ್ರಯೋಗದಲ್ಲಿ ಪಕ್ಷಗಳು ಪದೇ ಪದೇ ಕೈಹಾಕತಕ್ಕಂಥದ್ದಾಗಲೀ ಸರಿಯಲ್ಲ. ನಿಮ ಅಭಿಪ್ರಾಯದ ಪ್ರಕಾರ 1993ರ ಕರ್ನಾಟಕ ಪಂಚಾಯತ್ ರಾಜ್ ಕಾನೂನಿನಲ್ಲಿ ಯಾವ ಯಾವುದೋ ದೌರ್ಬಲ್ಯಗಳು ಅಥವಾ ನ್ಯೂನತೆಗಳಿವೆ, ಅರ್ಥಪೂರ್ಣವಾಗಿ ಅಧಿಕಾರದ ವಿಕೇಂದ್ರಕರಣವಾಗಿಲ್ಲ, ಅದನ್ನು ನೀವು ತಿದ್ದುಪಡಿಗಳ ಮೂಲಕ ಸರಿಪಡಿಸುವುದಕ್ಕೆ ಒಂದು ತಜ್ಞರ ಸಮಿತಿ ಮಾಡಿ, ಆ ತಜ್ಞರು ಕೊಡುವ ವರದಿಯ ಆಧಾರದ ಮೇಲೆ ಸಮಗ್ರ ತಿದ್ದುಪಡಿ ತರುವುದು ಒಳ್ಳೆಯದೇ ವಿನಾ ನಾವು ಕಾಯ್ದೆಯನ್ನು ಬದಲಾಯಿಸಬಾರದೆನ್ನುವ ಮಾತನ್ನು ಹೇಳಿದಿರಿ. ಆದೊಂದು ಕಾರ್ಯಸಾಧುವಾದ ವಿಚಾರವೂ ಆಗಿತ್ತು. ಆದುದರಿಂದ, ನಾವು ಅದನ್ನು ಒಪ್ಪಿಕೊಂಡೆವು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಮಗೆ ಗೊತ್ತಿರುವಂತೆ ಆರ್ಟಿಕಲ್ 243(ಬಿ)ಪ್ರಕಾರ ನಿಮ್ಮ ಮ್ಯಾನಿಫೆಸ್ಟೊ ರೀತ್ಯ ಮಾಡುವುದಕ್ಕಾಗುವುದಿಲ್ಲ. It is a three-tier system. It is a mandatory provision. Even if you want to wish you cannot do.

ಶ್ರೀ ಎಂ. ಪಿ. ಪ್ರಕಾಶ್ : ನಾನು ತ್ರಿ ಟೈರ್ ಸಿಸ್ಟಂ ಬಗ್ಗೆ ಹೇಳಲಿಲ್ಲ. ನಾನು ಏನು ಹೇಳಿದೆನೆಂದರೆ, ಅದರ ಹಿಸ್ಟಾರಿಕಲ್, ಕ್ರೊನೊಲಾಜಿಕಲ್ ವಿಚಾರದಲ್ಲಿ ಚರ್ಚಿಸುತ್ತಾ ಹೇಳಿದೆ. ಈಗ ತಾವೇ ಯೋಚನೆ ಮಾಡಿ. ಮಾನ್ಯ ಸದಸ್ಯರಾದ ನಾರಾಯಣಸ್ವಾಮಿಯವರು ಒಳ್ಳೆಯ ವಿಷಯ ಪ್ರಸ್ತಾಪ ಮಾಡಿದರು.

ಹಿಂದೆಯೇ 1993ರ ಕರ್ನಾಟಕ ಪಂಚಾಯತ್ ರಾಜ್ ಕಾನೂನನ್ನು ತರುವುದಕ್ಕೆ ತಮಗೆ ಅಂತರ್ಗತವಾಗಿ ಸಂಪೂರ್ಣ ಅಧಿಕಾರವಿತ್ತು. You had the mandate of the people.

ಆದುದರಿಂದ, ತಮಗನ್ನಿಸಿದ್ದನ್ನು ತರುವುದಕ್ಕೆ ತಮಗೆ ಸಾಧ್ಯತೆಯಿತ್ತು. ಆದರೆ, ಜಿಲ್ಲಾ ಪಂಚಾಯಿತಿ ಅವಧಿ ಮುಗಿದ ತಕ್ಷಣ ತಾವು ಆಡಳಿತಾಧಿಕಾರಿಯನ್ನು ನೇಮಕ ಮಾಡಿದಿರಿ. ಆಡಳಿತಾಧಿಕಾರಿಯನ್ನು ಏಕೆ ನೇಮಕ ಮಾಡಬೇಕಾಗಿತ್ತು? ನಾವು ಅಧಿಕಾರದಲ್ಲಿರುವ ಐದು ವರ್ಷದೊಳಗೆ ಈ ತಿದ್ದುಪಡಿಯನ್ನೇಕೆ ತರಲಿಲ್ಲವೆಂದು ತಾವು ಈಗ ಪ್ರಶ್ನೆ ಕೇಳುತ್ತಿದ್ದೀರಲ್ಲ, ತಿದ್ದುಪಡಿಯನ್ನು ನಾವು ಉದ್ದೇಶಪೂರ್ವಕವಾಗಿ ತರಲಿಲ್ಲವೆಂದಲ್ಲ, ಸದುದ್ದೇಶದ ಕಾರಣಕ್ಕಾಗಿಯೇ ನಾವು ತಿದ್ದುಪಡಿ ತರಲಿಲ್ಲ. ಏಕೆಂದರೆ, ಐದು ವರ್ಷಗಳ ಅವಧಿಗೆ ಗ್ರಾಮ ಪಂಚಾಯಿತಿಯ ಸದಸ್ಯರು ಆಯ್ಕೆಯಾಗಿದ್ದಾರೆ. ನಾವು ಅದರಲ್ಲಿ ಏನಾದರೊಂದು ಹೊಸದಾದ ವ್ಯವಸ್ಥೆ ತಂದಾಗ ಆ ಐದು ವರ್ಷದ ಅವಧಿ ಅವರಿಗೆ ಮೊಟಕುಗೊಳ್ಳುತ್ತದೆ. ಆ ಮೊಟಕುಗೊಳ್ಳುವಂಥ ಅವಧಿಯ ಮೂಲಕ ಅವರಿಗೆ ತೊಂದರೆಯಾಗ ಬಾರದೆಂಬ ಕಾರಣಕ್ಕಾಗಿ ಅವರ ಐದು ವರ್ಷದ ಅವಧಿ ಮುಗಿದ ತಕ್ಷಣ ನಾವು ಈ ತಿದ್ದುಪಡಿಯನ್ನು ಸಮಗ್ರವಾಗಿ ತಂದಿದ್ದೇವೆ. ಸಮಗ್ರವಾದ ಹೊಸ ತಿದ್ದುಪಡಿಯ ಮಸೂದೆ ಕೆಳಗೆ ಚುನಾವಣೆಯಾಗಲೆನ್ನುವ ಕಾರಣಕ್ಕಾಗಿ ತಂದಿದ್ದೇವೆಯೇ ವಿನಾ ಇದರಲ್ಲಿ ಯಾವುದೇ ದುರುದ್ದೇಶ ಇಟ್ಟುಕೊಂಡಿಲ್ಲ. ಆವೊತ್ತು ನಾವು ಇದೇ ತರ್ಕವನ್ನು ಮುಂದುವರೆಸಿದರೆ ಅಂದಿನ ಮುಖ್ಯ ಮಂತ್ರಿಗಳಾಗಿದ್ದ ವೀರಪ್ಪ ಮೊಯಿಲಿಯವರಲ್ಲಿ ನಾನು ಅರಿಕೆ ಮಾಡಿಕೊಳ್ಳುತ್ತಿರುವುದೇನೆಂದರೆ, ತಾವು ನಿಜವಾಗಿಯೂ ಈ ಅಭಿಪ್ರಾಯಕ್ಕೆ ಬದ್ಧರಾದಂಥವರಾಗಿದ್ದರೆ ಅವೊತ್ತಿನ ಜಿಲ್ಲಾ ಪಂಚಾಯಿತಿಗಳಿಗೆ ಆಡಳಿತಾಧಿಕಾರಿಗಳನ್ನು ನೇಮಕ ಮಾಡಬೇಕಾದ ಅಗತ್ಯವಿರಲಿಲ್ಲ. ಚುನಾವಣೆಗಳನ್ನು ನಡೆಸಿ ತಮಗೆ ಅಂತರ್ಗತವಾಗಿದ್ದ ಅಧಿಕಾರವನ್ನು ತಾವು ಉಪಯೋಗಿಸಿ ಹೊಸ ಕಾನೂನನ್ನು ತರಬಹುದಾಗಿತ್ತು. ಆದರೆ, ತರಲಿಲ್ಲ. ಅದಕ್ಕೋಸ್ಕರವೇ 'ಎನಗೆ ನಗೆಯು ಬರುತಿದೆ' ಎಂಬ ದಾಸರ ಪದ ಜ್ಞಾಪಕಕ್ಕೆ ಬಂತು. ಯಾರು ಯಾರು ಇದಕ್ಕೆ ವಿರುದ್ಧವಾಗಿದ್ದರೋ ಅವರು ಇವೊತ್ತು ಎಡ್ವರ್ಡ್ ಹಿತ್‌ರಾಗಿದ್ದಾರೆ. ಒಮ್ಮೊಮ್ಮೆ ನಾವು ಹೆರಾಲ್ಡ್ ವಿಲ್ಸನ್‌ರಾಗುತ್ತೇವೆ, ಒಮ್ಮೊಮ್ಮೆ ಅವರು ಎಡ್ವರ್ಡ್ ಹಿತ್‌ರಾಗುತ್ತಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಾವು ಎರಡೂ ಆಗಿ.

ಶ್ರೀ ಎಂ. ಪಿ. ಪ್ರಕಾಶ್ : ನಾನು ಆಗುವುದಿಲ್ಲ. ನಮ್ಮಿಬ್ಬರನ್ನೂ ನೋಡುವ ಜನರು ಈಗ ಇಬ್ಬರನ್ನೂ ಗುರ್ತಿಸಿದ್ದಾರೆ.

ಶ್ರೀ ಎಂ. ವೀರಪ್ಪ ಮೊಯಿಲಿ : ತಮ್ಮನ್ನು ಮಾತ್ರ ನೋಡುತ್ತಾರೆ, ನಮ್ಮನ್ನು ನೋಡುವುದಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಇಲ್ಲ, ನಿಮ್ಮನ್ನೂ ನೋಡುತ್ತಾರೆ. ಏಕಿಲ್ಲ ?

ಶ್ರೀ ಎಂ. ವೀರಪ್ಪ ಮೊಯಿಲಿ : ಮತದಾರರನ್ನು ಬದಲಾವಣೆ ಮಾಡುವವರು ತಾವೇ ವಿನಾ ನಾವಲ್ಲ. ಆದುದರಿಂದ, ತಮ್ಮನ್ನೇ ನೋಡುತ್ತಾರೆ. ಆ ಎರಡು ಮುಖ ಕೂಡ ತಮ್ಮದೇ ಆಗಿದೆ.

ಶ್ರೀ ಎಂ. ಪಿ. ಪ್ರಕಾಶ್ : ಇಲ್ಲ, ಹಾಗೆ ಇರಲು ಸಾಧ್ಯವಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ : ಈಗ ಪ್ರಶ್ನೆಯೇನೆಂದರೆ, ನಾನು ಮುಖ್ಯಮಂತ್ರಿಯಾಗಿರುವಾಗ

ಜಿಲ್ಲಾ ಪಂಚಾಯತ್ ಅಬಾಲಿಷನ್ ಆಗಲಿಲ್ಲ. ಆ ಸಂದರ್ಭದಲ್ಲಿ ಕೇಂದ್ರದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪುನರ್ ರಚನೆ ಮಾಡುವಂಥ ಸಂವಿಧಾನದ ಒಂದು ತಿದ್ದುಪಡಿ ಇದ್ದುದರಿಂದ ಜಿಲ್ಲಾ ಪಂಚಾಯತ್ ವ್ಯವಸ್ಥೆಯನ್ನು ಮುಂದುವರೆಸುವುದಕ್ಕಾಗಲಿಲ್ಲ. Because it was underway

(ಗೊಂದಲ)

ಶ್ರೀಮತಿ ಪ್ರಮೀಳಾ ನೇಸರ್ಗಿ : ಅವರದೂ (ಜನತಾ ದಳ)ತಪ್ಪು, ನಿಮ್ಮದೂ (ಕಾಂಗ್ರೆಸ್) ತಪ್ಪು.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ : ನೀವುಗಳೆಲ್ಲರೂ ಹೀಗೆ ಒಟ್ಟಿಗೆ ಎದ್ದು ನಿಂತು ಇಷ್ಟು ಗಲಾಟೆ ಮಾಡಿದರೆ ಯಾರ್ಯಾರ ಮಾತುಗಳು ಏನೆಂದು ಅರ್ಥವಾಗುವುದಿಲ್ಲ. ಸುಮ್ಮನೆ ಬೊಬ್ಬೆ ಹಾಕಿದರೆ ಯಾರಿಗೂ ಏನೂ ಕೇಳುವುದಿಲ್ಲ. ಯಾರಾದರೊಬ್ಬರು ಚೆನ್ನಾಗಿ ಮಾತನಾಡಿದರೆ ಎಲ್ಲರಿಗೂ ಕೇಳುತ್ತದೆ.

(ಗೊಂದಲ)

ಶ್ರೀ ಎಂ. ಪಿ. ಪ್ರಕಾಶ್ : ತಾವು ಈ ಸದನದ ಹಿರಿಯ ಸದಸ್ಯರಾಗಿದ್ದು ತಮ್ಮ ಬಗ್ಗೆ ಅತ್ಯಂತ ಗೌರವವಿದೆ.

ಅಧ್ಯಕ್ಷರು : ಅವರು ಈಗ ಬೊಬ್ಬೆ ಹಾಕುತ್ತಿರುವುದರಿಂದ ನೀವು ಬೇಸರಪಟ್ಟುಕೊಳ್ಳಬಾರದು. ಈ ದಿವಸ ಅವರೆಲ್ಲಾ ಒಗ್ಗಟ್ಟಾಗಿ ಮಾತನಾಡುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.

ಶ್ರೀ ಎಸ್. ಕೃಷ್ಣಪ್ಪ : ನಾವು ಯಾವತ್ತು ಒಗ್ಗಟ್ಟಾಗಿ ಮಾತನಾಡಿಲ್ಲ ?

ಶ್ರೀ ಎಂ. ಪಿ. ಪ್ರಕಾಶ್ : ನಾವೆಲ್ಲರೂ ಈ ವ್ಯವಸ್ಥೆಯ ಶಿಶುಗಳಾಗಿದ್ದೇವೆ. ಇಂಥ ಸಂದರ್ಭದಲ್ಲಿ ನಾವು ಇಂಥ ಅನೇಕ ದ್ವಂದ್ವಗಳಿಗೆ ಒಳಗಾಗುತ್ತೇವೆ ಎಂಬ ಕಾರಣಕ್ಕೆ ಮಾನ್ಯ ವೀರಪ್ಪಮೊಯ್ಲಿಯವರು ಇದರ ಬಗ್ಗೆ ವೈಯಕ್ತಿಕವಾಗಿ ಬದ್ಧತೆಯಾಗುವುದಿಲ್ಲ ಎಂಬ ಪ್ರಶ್ನೆಯಲ್ಲ. ಅವತ್ತಿನ ವ್ಯವಸ್ಥೆಯಲ್ಲಿ ಅದು ಬದಲಾಗಬೇಕಾಗುತ್ತದೆ. ಇದನ್ನು ರಾಜ್ಯಾಂಗದಲ್ಲಿ ತಿದ್ದುಪಡಿ ತರಬೇಕು ಎಂದು ಆಗ ಚರ್ಚೆಯಾಗುತ್ತಿತ್ತು. ಚರ್ಚೆಯಾದಾಗ ಜಿಲ್ಲಾಪರಿಷತ್‌ನ ಅವಧಿ ಮುಗಿದಿತ್ತು. 1992ರಲ್ಲಿ ನಮ್ಮ ಜಿಲ್ಲಾಪಂಚಾಯಿತಿಗಳ ಅವಧಿ ಮುಗಿದಂಥ ಸಂದರ್ಭದಲ್ಲಿ ಇನ್ನು ತಿದ್ದುಪಡಿಯಾಗಿರಲಿಲ್ಲ.

ಶ್ರೀ ಎಂ. ವೀರಪ್ಪಮೊಯ್ಲಿ : ರಾಜ್ಯಸಭಾದಲ್ಲಿ ಏನಾಯಿತು? ರಾಜೀವ್‌ಗಾಂಧಿಯವರು ಅದೇ ಕಾರಣದಿಂದ ಚುನಾವಣೆಗೆ ಹೋದರು. ಇದನ್ನು ಏಕೆ ಮರೆಯುತ್ತೀರಿ? ಇದು ಇತಿಹಾಸದಲ್ಲಿದೆ. It is history. Parliament mandate because you failed in the Rajya Sabha. ಇದನ್ನು ಏಕೆ ಮರೆಯುತ್ತೀರಿ?

SRI. M.P. PRAKASH : History also repeats. And it repeats farcically also. I am not saying against that. The history has to be interpreted to the contemporary situations. ಇತಿಹಾಸ ಎಂಬುದು ಯಾವುದೋ ಒಂದು ಘಟನೆಯನ್ನು ನೆನಪು ಮಾಡಿಕೊಳ್ಳತಕ್ಕದಲ್ಲ. ಆ ಘಟನೆಯ ನೆನೆಪು ಪ್ರಸ್ತುತಕ್ಕೆ ಎಷ್ಟು ಅನ್ವಯವಾಗುತ್ತದೆ ಹಾಗೂ ಯಾವ ಕಾರಣಕ್ಕಾಗಿ ಆಗುತ್ತದೆ ಎಂಬುದನ್ನೂ ಸಹ ನೋಡಬೇಕಾಗುತ್ತದೆ. ತಾವು ರಾಜೀವ್‌ಗಾಂಧಿಯವರು

ತಂದಿದ್ದ 73 ರ ತಿದ್ದುಪಡಿಯ ಬಗ್ಗೆ ಜ್ಞಾಪಕ ಮಾಡಿಕೊಳ್ಳುವ ಸಂದರ್ಭದಲ್ಲಿ 64ನೇ ತಿದ್ದುಪಡಿಯನ್ನು ತಂದಂಥ ಪ್ರಯೋಗದ ಬಗ್ಗೆ ಸಹ ಯೋಚನೆ ಮಾಡಬೇಕಾಗುತ್ತದೆ. 64ರ ತಿದ್ದುಪಡಿ ಪ್ರಯೋಗ ಮಾಡಿದಂಥ ಸಂದರ್ಭದಲ್ಲಿ, ಶ್ರೀ ಮಣಿಶಂಕರ್‌ಅಯ್ಯರ್‌ರವರು ಇದನ್ನು ತಯಾರು ಮಾಡುವ ಸಂದರ್ಭದಲ್ಲಿ, ನಾರಾಯಣಸ್ವಾಮಿಗಳನ್ನಾಗಲಿ, ಎನ್.ಸಿ. ಜೈನ್‌ರವರನ್ನಾಗಲಿ, ಮಾನ್ಯ ಬಿ.ಕೆ. ಚಂದ್ರಶೇಖರ್‌ರವರಾಗಲಿ ಕರಡು ಸಮಿತಿಯಲ್ಲಿ ಸದಸ್ಯರಾಗಿರಲಿಲ್ಲ. ಶ್ರೀ ಎಸ್.ಆರ್.ಬೊಮ್ಮಾಯಿರವರ ನೇತೃತ್ವದಲ್ಲಿ ನಮ್ಮ ಪಕ್ಷದಲ್ಲಿಯೇ ಬೇರೆಯಾದ ಒಂದು ಸಮಿತಿ ರಚನೆಯಾಯಿತು. ಆ ಸಮಿತಿಯಲ್ಲಿ 64ನೇ ತಿದ್ದುಪಡಿಯು ಅಧಿಕಾರ ವಿಕೇಂದ್ರೀಕರಣದ ಅರ್ಥಪೂರ್ಣವಾದ ಅನುಷ್ಠಾನಕ್ಕೆ ಸರಿಯಾದುದ್ದಲ್ಲವೆಂಬ ಕಾರಣಕ್ಕೆ ನಾವು ತಂದಿರುವ ಕಾನೂನು ಬಹಳ ದೊಡ್ಡದಾಗಿ ಚೆನ್ನಾಗಿದೆ, ಅದನ್ನು ಜಾರಿಗೊಳಿಸಬೇಕು ಎಂಬ ಬಗ್ಗೆ ಮುಂದೆ ಏನಾಯಿತು ಎಂಬುದನ್ನು ಹೇಳುತ್ತೇನೆ. ಇಂದು ಬಿಹಾರದಲ್ಲೇನು ರಾಷ್ಟ್ರಪತಿಯ ಆಳ್ವಿಕೆಯನ್ನು ರಾಜ್ಯಸಭೆಯಲ್ಲಿ ತಮ್ಮ ಪಕ್ಷದ ಬಹುಮತದ ಮೂಲಕ ತಿರಸ್ಕಾರ ಮಾಡಿಸಿದ್ದೀರೋ ಅದಕ್ಕೆ ನಾವೂ ಒಪ್ಪಿದ್ದೇವೆ, ಅದಕ್ಕೆ ನಾವೂ ನಿಮ್ಮ ಜೊತೆ ಸೇರಿದ್ದೇವೆ. ಆ ಮಾತು ಬೇರೆ. ಈ ರೀತಿ ಅಂದೂ ಸಹ 64ನೇ ತಿದ್ದುಪಡಿಯು ರಾಜ್ಯಸಭೆಯಲ್ಲಿ ತಿರಸ್ಕಾರವಾಯಿತು. ಆ ಕಾರಣಕ್ಕಾಗಿ ಅದರಿಂದ ಪಾಠವನ್ನು ಕಲಿತು ತಮ್ಮ ಕಡೆಯಿಂದ ಮಣಿಶಂಕರ್‌ಐಯ್ಯರ್‌ರವರ ನೇತೃತ್ವದಲ್ಲಿ ಕರಡು ಸಮಿತಿಯನ್ನು ಮಾಡಿದ ಮೇಲೆ ಎಲ್.ಸಿ.ಜೈನ್‌ರವರನ್ನು ಮಾನ್ಯ ನಾರಾಯಣಸ್ವಾಮಿಯವರನ್ನು, ಪ್ರೊ: ಬಿ.ಕೆ. ಚಂದ್ರಶೇಖರ್‌ರವರನ್ನು ಅದರಲ್ಲಿ ಸದಸ್ಯರನ್ನಾಗಿ ಸೇರಿಸಿಕೊಂಡಿರಿ. ಒಬ್ಬರು ಅಧ್ಯಕ್ಷರಾಗಿ ಕೆಲಸ ಮಾಡಿದ್ದಂಥವರು, ಸತೀಶ್ ಚಂದ್ರನ್, ಮೀನಾಕ್ಷಿಸುಂದರಂನಂಥವರು, ಇದನ್ನು ತಯಾರು ಮಾಡಿದಂಥ ಜನರು ಅಲ್ಲಿದ್ದಾಗ ಇದರ ಅನುಭವದ ಆಧಾರದ ಮೇಲೆ ಅತ್ಯಂತ ಪ್ರಗತಿಪರವಾಗಿರತಕ್ಕ ಕಾನೂನನ್ನು ದಿವಂಗತ ಅಬ್ದುಲ್‌ನಜೀರ್‌ಸಾಬ್‌ರವರು ರಾಮಕೃಷ್ಣ ಹೆಗಡೆಯವರು ತಂದಿರುವ ಕಾರಣವನ್ನು ಮನಗಂಡು ಅದರ ಅಭೂತಪೂರ್ವವಾದ ಯಶಸ್ಸು ಮತ್ತು ಅದಕ್ಕೆ ಕೊಡಬೇಕಾಗಿರುವ ಸಂದೇಶವನ್ನು ಅರಿತುಕೊಂಡೇ ಮಾನ್ಯ ರಾಜೀವ್‌ಗಾಂಧಿಯವರು 73ನೇ ತಿದ್ದುಪಡಿಯನ್ನು ತಂದರು. ಅದಕ್ಕೆ ಎಲ್ಲರ ಒಪ್ಪಿಗೆ ದೊರೆಯಿತು, ಇವತ್ತು ಅದು ಸಂವಿಧಾನದಲ್ಲಿ ಬದ್ಧತೆಯನ್ನು ಪಡೆದುಕೊಂಡಿದೆ. ಸಂವಿಧಾನಾತ್ಮಕವಾಗಿರತಕ್ಕ ಕೆಲಸ ಇದಾಗಿದೆ. ಆದ್ದರಿಂದ ನಾವು ಅದನ್ನು ಸಂಪೂರ್ಣವಾಗಿ ಒಪ್ಪಿಕೊಳ್ಳುತ್ತೇವೆ. ನಾವು ಈಗ ತಂದಿರುವ ತಿದ್ದುಪಡಿ ಸಂವಿಧಾನ ಬಾಹಿರವಾಗಿ ಇಲ್ಲ. ಜಿಲ್ಲಾಧಿಕಾರಿಯವರಿಗೆ ನಾವು ಅಧಿಕಾರವನ್ನು ಕೊಟ್ಟಿದ್ದೇವೆಂದಲ್ಲ. ಅಧಿಕಾರವನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೇವೆಂದು ಮಾನ್ಯ ಘೋರ್ಪಡೆಯವರು ಹೇಳಬೇಕಾದರೆ ಇದರಲ್ಲಿ ಒಂದು ಕಂಟಿನ್‌ಜೆನ್ಸಿ ಪ್ಲಾನ್ ಎಂಬುದು. "any other sufficient reasons whatsoever" what does it mean. kindly enlighten this House also

SRI MALLIKARJUNA KHARGE : Does it mean, the Deputy Commisioner should appoint. .

SRI M.P. PRAKASH : Yes Sir. Your secion 8 of the Karnataka

Panchayatraj Act. ನಿಮಗೆ ಬಂದಂಥ ಸಂದರ್ಭದಲ್ಲಿ ಅದಲ್ಲ, ಆದರೆ ನಾವು ಬಂದಾಗ ಮಾತ್ರ ನಮ್ಮ ಬೋನಾಫೈಡೀಸ್‌ನ್ನು ಪ್ರಶ್ನೆ ಮಾಡತಕ್ಕ ತಾವು, ತಾವು ಅಧಿಕಾರದಲ್ಲಿದ್ದಾಗ ಈ ರೀತಿಯಾದ ಅಧಿಕಾರವನ್ನು ಜಿಲ್ಲಾ ಪರಿಷತ್‌ನಲ್ಲಿ ನೀಡಿದೆ. ನಾವು ಗ್ರಾಮ ಪಂಚಾಯಿತಿಯ ಅವಧಿಯನ್ನು ಮುಂದುವರೆಸಲು ಸಾಧ್ಯವಾಗಲಿಲ್ಲ. ರಾಜ್ಯಾಂಗದಲ್ಲಿ ಆ ರೀತಿ ಮುಂದುವರೆಸಲು ಸಾಧ್ಯವಿಲ್ಲವೆಂಬುದು ಕಂಡುಬಂದಮೇಲೆ ನಮ್ಮ ಮುಂದೆ ಇದ್ದ ಅಧಿಕಾರ ಯಾವುದೆಂದರೆ, ಒಂದು, ನಾವು ಆಡಳಿತಾಧಿಕಾರಿಯನ್ನು ನೇಮಿಸುವುದು ಅಥವಾ ಯಾವುದಾದರೂ ಸದಸ್ಯರನ್ನು ನೇಮಕ ಮಾಡಬಹುದಾಗಿತ್ತು. ಆದರೆ, ಎಂಥ ಕೆಟ್ಟದಾದ ಚುನಾಯಿತ ಪ್ರತಿನಿಧಿಯ ರಾಜ್ಯಭಾರ, ಅತ್ಯಂತ ದಕ್ಷವಾಗಿರತಕ್ಕ ಅಧಿಕಾರಿಗಳ ರಾಜ್ಯ ಭಾರಕ್ಕಿಂತ ಉತ್ತಮ ಎಂಬುದೇ ಪ್ರಜಾಪ್ರಭುತ್ವದ ಮೂಲ ಸಿದ್ಧಾಂತ. ಆದ್ದರಿಂದ ಜಿಯಾಉಲ್‌ಹಕ್‌ರವರ ಕತೆಯೇನಾಯಿತು, ಸುಹಾರ್ತೋರವರ ಕತೆಯೇನಾಯಿತು, ಆಯೂಬ್‌ಖಾನ್‌ರವರ ಕತೆಯೇನಾಯಿತು ಎಂಬ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆರ್ಟಿಕಲ್ 243 ಬಿ ಪ್ರಕಾರ

ಶ್ರೀ ಎಂ. ಪಿ. ಪ್ರಕಾಶ್ : ನಾವು ಅದನ್ನು ವಯಲೇಟ್ ಮಾಡಿಲ್ಲ

SIR MALLIKARJUNA KHARGE : He has violated

SRI M.P. PRAKASH : It is for you to interpret. I leave it at that.

SRI MALLIKARJUNA KHARGE : Administrative Committe and nomination Deputy Commissionerಗೆ ಕೊಟ್ಟು ತಮ್ಮದೆ ಆದಂಥ ಪಕ್ಷದ ಸದಸ್ಯರಿಗೆ ಮಾಡಿ ಎಲ್ಲಾ 5363 ಪಂಚಾಯಿತಿಗಳಲ್ಲಿ ತಮ್ಮ ಪ್ರಭುತ್ವವನ್ನು ಸ್ಥಾಪಿಸಿಕೊಳ್ಳಲು ಇದನ್ನು ತಂದಿದ್ದಾರೆ. ಅದರ ಬಗ್ಗೆ ಇವರು ಉತ್ತರವನ್ನೇ ಕೊಡುತ್ತಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ಅದನ್ನು ಹೇಳುವುದಕ್ಕೆ ಹೊರಟಿದ್ದೇನೆ, ಆದರೆ ತಾವು ಕೇಳಲು ತಯಾರಿಲ್ಲವಲ್ಲಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ತಾವು ಇದನ್ನು ಸಮರ್ಥನೆ ಮಾಡಿಕೊಳ್ಳುತ್ತಿದ್ದೀರಿಯೇ ಹೊರತು ಆ ಪ್ರಾವಿಷನ್ ಸರಿಯಿಲ್ಲ ಎಂದು ಹೇಳುತ್ತಿಲ್ಲ.

ಶ್ರೀ ಎಂ. ಪಿ. ಪ್ರಕಾಶ್ : ನಾನು ಅದರ ಬಗ್ಗೆ ಉತ್ತರವನ್ನು ಕೊಡುತ್ತೇನೆ. ಆ ರೀತಿ ತಾವು ಎನೇಬಲಿಂಗ್ ಪ್ರಾವಿಷನ್‌ನ್ನು ಮಾಡಿಕೊಂಡು ಕಂಟಿಜನ್ಸ್‌ಯಾಗಿ for whatever the reason ಎಂಬ ರೀತಿಯಲ್ಲಿ ಅಧಿಕಾರವನ್ನು ತಾವು ಕೊಟ್ಟಿದ್ದೀರಿ'unforeseen', that is what precisely the case here also. ನಾವೂ ಸಹ ಈ ಸದನದಲ್ಲಿ ಏನು ಹೇಳಿದ್ದೇವೆಂದರೆ, ನಾವು ಅವರನ್ನು ಈಗ ನೇಮಕಾತಿ ಮಾಡಿಬಿಟ್ಟಿದ್ದೇವೆ, ಯಾರ್ಯಾರು ಚುನಾಯಿತ ಅರ್ಹತೆಯಾಗಲಿರತಕ್ಕವರು ನಿಗದಿಪೂರ್ವವಾಗಿರತಕ್ಕ ಪಂಚಾಯಿತಿ ಸದಸ್ಯರಾಗಿದ್ದರು ಅವರನ್ನು ಸದಸ್ಯರನ್ನಾಗಿ ಜಿಲ್ಲಾಧಿಕಾರಿಯವರು ನೇಮಕಾತಿ ಮಾಡಿದ್ದಾರೆ. ಇದರಲ್ಲಿ ಎಲ್ಲಾದರೂ ವ್ಯತ್ಯಾಸವಾಗಿದೆಯೇ ಎಂಬ ಬಗ್ಗೆ ತಾವು ಒಂದು ಉದಾಹರಣೆಯನ್ನು ಕೊಡಿ. ನಿನ್ನೆ ಅಥವಾ ಇಂದಿನ ಪತ್ರಿಕೆಯಲ್ಲಿ ತಾವು

ನೋಡಿರಬಹುದು, ಅವಿಶ್ವಾಸ ಗೊತ್ತುವಳಿಯನ್ನು ಈ ರೀತಿ ನೇಮಕವಾದಂಥ ಒಬ್ಬ ಅಧ್ಯಕ್ಷನ ಮೇಲೆ ತಂದಿದ್ದಾರೆ, ಇದಕ್ಕೆ ಸಂಬಂಧಪಟ್ಟಂತೆ ನ್ಯಾಯಮೂರ್ತಿ ವಿಶ್ವನಾಥಶೆಟ್ಟಿಯವರ ತೀರ್ಪು ಇಂದಿನ ಪತ್ರಿಕೆಯಲ್ಲಿ ಪ್ರಕಟವಾಗಿದೆ. ನಾವು ನೇಮಕಾತಿಯಾಗಿರುವ ಅಧ್ಯಕ್ಷರು, ಜನಗಳಿಗೆ ಅಥವಾ ಕಾನೂನಿಗೆ ಜವಾಬ್ದಾರರಾಗಿರತಕ್ಕವರಲ್ಲ. ನಮ್ಮ ಮೇಲೆ ನೀವು ಅವಿಶ್ವಾಸ ಗೊತ್ತುವಳಿಯನ್ನು ತರಬೇಕಾದ ಅಗತ್ಯವಿಲ್ಲ ಎಂಬ ವಾದವನ್ನು ಅವರು ಮಂಡಿಸಿದಾಗ ನೇಮಕಾತಿಯಾಗಿರುವ ಸದಸ್ಯರಾದರೂ ಸಹ ಪಂಚಾಯಿತಿ ಕಾನೂನಿನ ಕೆಳಗೆ ಅವಿಶ್ವಾಸ ಗೊತ್ತುವಳಿಯನ್ನು ತರಲು ಸಾಧ್ಯತೆ ಇದೆ ತರಬಹುದು ಎಂಬುದನ್ನು ನ್ಯಾಯಮೂರ್ತಿ ವಿಶ್ವನಾಥಶೆಟ್ಟಿಯವರು ಈ ದಿನ ತಮ್ಮ ತೀರ್ಪಿನಲ್ಲಿ ಹೇಳಿದ್ದಾರೆ. ತಾವು ದಯಮಾಡಿ ಅದನ್ನು ಪರಾಮರ್ಶಿಸಬೇಕೆಂದು ಕೇಳಿಕೊಳ್ಳುತ್ತೇನೆ. ಆ ಕಾರಣಕ್ಕಾಗಿ we have used the words. "during the pleasure of the Deputy Commissioner" ಎಂದು ನಮ್ಮಲ್ಲಿ ಕಾಯ್ದೆ ಇದೆ. ಕೆಲವರು ಅಯೋಗ್ಯವಾಗಿ ವರ್ತಿಸಿದರೆ, ಘನತೆಯಿಲ್ಲದಂತೆ ವರ್ತಿಸಿದರೆ ಅಂಥ ಸದಸ್ಯರನ್ನು ಅನರ್ಹರನ್ನಾಗಿ ಮಾಡಲು ಕಾನೂನು ಇದೆ. ಆದರೆ ನಾಮಕರಣವಾಗಿರುವ ಈ ಸದಸ್ಯರು ಈ ರೀತಿ ಅನುಚಿತವಾಗಿ ವರ್ತನೆ ಮಾಡಿದರೆ ಅಂಥವರನ್ನು ತೆಗೆದುಹಾಕಬೇಕು ಎಂಬ ಕಾರಣಕ್ಕಾಗಿ ಆ ಅಂತರ್ಗತವಾದ ಹಕ್ಕನ್ನು ಜಿಲ್ಲಾಧಿಕಾರಿಯವರಿಗೆ ಕೊಟ್ಟಿದ್ದೇವೆ. ಅದು ಒಂದು ಅಪವಾದ. It is not a rule ನಾವು ಈಗ ಏಪ್ರಿಲ್ ಒಂದನೇ ತಾರೀಖಿನಲ್ಲಿದ್ದೇವೆ. ಎಲ್ಲಾ ಗ್ರಾಮಪಂಚಾಯಿತಿಗಳು ಮಾರ್ಚ್‌ನಲ್ಲಿ ಅಂತ್ಯವಾಗಿರತಕ್ಕದ್ದಾಗಿದೆ. ನಾವು ಕಳುಹಿಸಿರುವ ಆದೇಶದ ಅನುಸಾರ ಎಲ್ಲಾ ಜಿಲ್ಲಾಧಿಕಾರಿಯವರು ನೇಮಕಾತಿಯನ್ನು ಮಾಡಿದ್ದಾರೆ. ಎಲ್ಲಾದರೂ ಜನತಾಪಕ್ಷದ ಕಾರ್ಯಕರ್ತನಾಗಿರಬಹುದು ಅಥವಾ ಸರ್ಕಾರ ಸೂಚನೆ ಮಾಡಿರುವ ವ್ಯಕ್ತಿಯನ್ನು ಈ 5600 ಗ್ರಾಮಪಂಚಾಯಿತಿಗಳಲ್ಲಿ ನೇಮಕಾತಿ ಮಾಡಿದ್ದಾರೆಂದರೆ ತಾವು ಹೇಳುವುದಾಗಿದ್ದರೆ ತಾವು ಕೊಡತಕ್ಕ ಯಾವುದೇ ತೀರ್ಪಿಗೂ ಬದ್ಧನಾಗಿರುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, Now you are taking power. ನಾಳೆಯಿಂದ ಅದರ ಬಗ್ಗೆ ನೋಡಬೇಕಾಗುತ್ತದೆ. ಅದು ಈಗ ಗೊತ್ತಾಗುವುದಿಲ್ಲ. ಅವರು ಅಧಿಕಾರಕ್ಕೆ ಬಂದಮೇಲೆ ತಾನೇ ತಮಗೆ ಇದರ ಬಗ್ಗೆ ಗೊತ್ತಾಗುವುದು.

ಅಧ್ಯಕ್ಷರು : ಅವರ ಕಷ್ಟವೇನೆಂದರೆ, ಈ ಚುನಾಯಿತ ಸಂಸ್ಥೆಗಳೇನಿದ್ದವು ಅದರ ಆಡಳಿತಾವಧಿಯನ್ನು ಮುಂದುವರೆಸಲು ಬರುತ್ತಿರಲಿಲ್ಲ. ಅದಕ್ಕೆ ಪರೋಕ್ಷವಾಗಿ ನಾಮಿನೇಟೆಡ್ ಎಂದು ಹೇಳಿ ಮಾಡಿದ್ದಾರೆ. It is a contingency that has arisen.

Sr. M.P. Prakash : This is much better than appointing an Administrator.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ರೀತಿ ಅವಧಿಯನ್ನು ಮುಂದೂಡಲು ಆಗುತ್ತಿರಲಿಲ್ಲ ಎಂಬುದು ಸರಿ. ಅದರ ಜೊತೆಗೆ ಏನು ಮಾಡಿಕೊಂಡರೆಂದರೆ :

"Where an Administrative Committee is appointed under Sub Sec. (1). the Deputy Commissioner shall nominate two members of the Admin-

istrative Committee respectively as Adhyaksha or Upadhyaksha" ಇದಲ್ಲದೆ ಈಗಾಗಲೇ ಅಡಿಷನಲ್ ಮೆಂಬರ್‍ಸ್‌ನ್ನು ಮಾಡಿಕೊಳ್ಳಬಹುದು ಎಂದು ಸಮರ್ಥನೆ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ನಾನು ಹೇಳುತ್ತೇನೆಂದರೆ, ಮಾರ್ಚ್‌ನೊಳಗೆ ಅಧಿಕಾರಾವಧಿ ಅಂತ್ಯವಾಗತಕ್ಕ ಪಂಚಾಯಿತಿಗಳಲ್ಲಿ ಯಾರು ಚುನಾಯಿತ ಸದಸ್ಯರು ಇದ್ದರೋ ಅದೇ ಚುನಾಯಿತ ಸದಸ್ಯರು ಯಾವ್ಯಾವ ಸ್ಥಾನದಲ್ಲಿದ್ದರೋ ಹಾಗೆಯೇ ಮುಂದುವರೆದರೆ, ಜಿಲ್ಲಾಧಿಕಾರಿಗಳಿಂದ ನಾಮಿನೇಟೆಡ್ ಆಗಿದ್ದರೂ ಪೊಲಿಟಿಕಲ್ ಮೋಟೀವ್ಸ್ ಅಲ್ಲಿ ಏನು ಬರುತ್ತದೆ?

8.50 ಪಿ.ಎಂ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಎಲ್ಲಿ ಬರುತ್ತದೆಂದು ಈಗ ಗೊತ್ತಾಗುವುದಿಲ್ಲ. ಅದು ಎಲ್ಲಿ ಬರುತ್ತದೆಂದು ನಾನು ಹೇಳುತ್ತೇನೆ.

"The Administrator or as the case may be, the Members of the Administrative Committee including Adhyaksha or Upadhyaksha, shall subject to the pleasure of the Deputy Commissioner hold office till the new Grama Panchayat is duly constituted. ಇಲ್ಲಿ ಏನು ಮಾಡಿದ್ದಾರೆ ಎಂದರೆ, ಈಗ ಇದನ್ನು ತೋರಿಸುತ್ತಿರುವುದು ಕೇವಲ ಇಲ್ಲಿ ಬಿಲ್ ಪಾಸಾಗುವುದಕ್ಕಾಗಿ, ಪಾಸಾಗಿ ಇಲ್ಲಿಂದ ಹೊರಗೆ ಹೋಗುವುದಕ್ಕಾಗಿ ಮಾತ್ರ. ಇಲ್ಲಿಂದ ಬಿಲ್ ಪಾಸಾಗಿ ಹೋದ ತಕ್ಷಣವೇ ಅವರಿಗೆ ಎಲ್ಲೆಲ್ಲಿ ಬೇಕೋ ಅಲ್ಲಿ ಅವರ ಕಡೆಯವರನ್ನು ಜಿಲ್ಲಾಧಿಕಾರಿಗಳ ಮೂಲಕ ಅಧ್ಯಕ್ಷ ಮತ್ತು ಉಪಾಧ್ಯಕ್ಷರನ್ನಾಗಿ ಮಾಡಿಕೊಳ್ಳುತ್ತಾರೆ. ಇದು ಶೇಕಡ 100ರಷ್ಟು ನಿಜ. ಇದರ ಜೊತೆಗೆ ಕೆಲವರನ್ನು ಸದಸ್ಯರು ಮತ್ತು ಹೆಚ್ಚುವರಿ ಸದಸ್ಯರನ್ನೂ ಕೂಡ ಮಾಡಿಕೊಳ್ಳುತ್ತಾರೆ. ಏಕೆಂದರೆ ಅದಕ್ಕಾಗಿ ಇದರಲ್ಲಿ ಪ್ರಾವಿಷನ್ ಮಾಡಿಕೊಂಡಿದ್ದಾರೆ.

ಅಧ್ಯಕ್ಷರು : ಒಂದು ನಿಮಿಷ. Having been a withness to many events that have taken place in the recent past. I think individually, the Hon'ble Minister M.P.Prakash was totally unwilling for all these things. He wanted to toe your line. Probably, due to various reasons, he had to make a retreat. I feel I don't think he will be a party for such a thing. ಯಾರು ಎಲೆಕ್ಟೆಡ್ ಮೆಂಬರ್‍ಸ್ ಯಾವ್ಯಾವ ಸ್ಥಾನಗಳಲ್ಲಿದ್ದರೋ, ಪ್ರೆಸಿಡೆಂಟೋ ಅಥವಾ ವೈಸ್ ಪ್ರೆಸಿಡೆಂಟೋ whatever it is ಅದಕ್ಕೆ additions and deletions ಆಗುವುದು, ಬಿಡುವುದು I think he would even go to the extent of making a categorical assurance to this house.

SRI MALLIKARJUNA KHARGE : After all, the cabinet takes decision many a times and pressure will come ಎಂದು ಅವರೇ ಹೇಳಿದ್ದಾರೆ. ಆಗ ನಾವು ಅಸಹಾಯಕರಾಗುತ್ತೇವೆ ಎಂದೂ ಸಹಾ ಅವರು ಹೇಳಿದ್ದಾರೆ.

SRI M.P. PRAKASH : Sir, I am thankful for the sentiments you have expressed.

MR. SPEAKER : Let us be fair to anybody.

SRI. MALLIKARJUNA KHARGE : We are not speaking against any individual, or any individual Minister ಸಿಸ್ಟಮ್ ಈ ರೀತಿ ಇದೆ. ಒತ್ತಾಯದ ಮೇರೆಗೆ ನಾಳೇ . . . .

MR. SPEAKER : You want to be even more franker? ಎಲೆಕ್ಷನ್ಸ್ ಸ್ವಲ್ಪ ಮುಂದಕ್ಕೆ ಹೋಗಬೇಕಾಗಿತ್ತು. That was the desire of many people.

ಶ್ರೀ ಎಂ. ಪಿ. ಪ್ರಕಾಶ್ : ನಾನು ತಾರ್ಕಿಕವಾಗಿ ಒಂದು ವಿಷಯವನ್ನು ಹೇಳುತ್ತೇನೆ. ತಾರ್ಕಿಕವಾಗಿ ತಾವು ಒಪ್ಪುವುದಾದರೆ, ಈಗ ತಾವು 8ನೇ ಸೆಕ್ಷನ್‌ನಲ್ಲಿ ಹೇಳುವಾಗ ಏನು ಹೇಳಿದಿರಿ,

"If the Deputy Commissioner is satisfied that a Grama Panchayat for a village or a group of villages immediately after the establishment of such Grama Panchayat

i) any difficulty in holding elections to the Members of the Grama Panchayat or . . .

failure to elect such members of two successive elections held under Sec 26 of Sec. 5 . . . ಎಂದು ಅಲ್ಲಿಗೆ ತಾವು ನಿಲ್ಲಿಸಬಹುದಾಗಿತ್ತು. ಆದರೆ ತಾವು ಡೆಪ್ಯುಟಿ ಕಮೀಷನರ್‌ಗೆ ಎಂತಹ ಸ್ವೀಪಿಂಗ್ ಪವರ್ ಕೊಡುತ್ತೀರಿ ಎಂದರೆ, for any other sufficient reason whatsoever" which he subjectively think, he would have dismissed, he would have appointed anybody. ಆದರೆ ಇಲ್ಲಿ ನಾವು ಏನು ಹೇಳಿದ್ದೇವೆ ಎಂದರೆ, ಈ ರೀತಿಯಾಗಿ ನೇಮಿಸಿ ಎಂದಿದ್ದೇವೆ. ನೀವು ಮಾಡಿದಾಗ ಸದುದ್ದೇಶ ಇರುತ್ತದೆ. ನಾವು ಮಾಡಿದಾಗ ದುರುದ್ದೇಶ ಇರುತ್ತದೆ ಎಂದು ಭಾವಿಸಿ ಕೊಳ್ಳತಕ್ಕದ್ದು ಏನಿದೆ, ಇದೊಂದು ವಿತಂಡವಾದವೇ ವಿನಃ ಇದು ನಿಜವಾಗಿರತಕ್ಕಂಥ ವಾದ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅದು ಕೆಟ್ಟದಿದೆ ಎಂದು ನೀವೇ ಹೇಳುತ್ತಿದ್ದೀರಿ. ಅದಕ್ಕಿಂತ ಕೆಟ್ಟದಾದ ಕಾನೂನನ್ನು ತರಬೇಕು ಎಂಬುದೇನಾದರೂ ಇದೆಯೇ?

ಶ್ರೀ ಎಂ.ಪಿ.ಪ್ರಕಾಶ್ : ಹಾಗೇನಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಇವರಿಗೆ ಪವರ್ ಇತ್ತು ಎಂದರೆ ಅದರಲ್ಲೇ ಮಾಡಿಕೊಳ್ಳಬಹುದಾಗಿತ್ತು. ನಾನು ಈಗ ಒಂದು ಮಾತನ್ನು ಬಹಳ ಸ್ಪಷ್ಟವಾಗಿ ಹೇಳುತ್ತೇನೆ. ಅವರು ಸಂವಿಧಾನದ ವಿರುದ್ಧವಾಗಿ ಹೋಗತಕ್ಕಂಥ ಒಂದು ಕಾನೂನನ್ನು ತಂದಿದ್ದಾರೆ. ಮತ್ತು ಸಂಪೂರ್ಣವಾಗಿ ಅವರು ಜಿಲ್ಲಾಧಿಕಾರಿಗಳ ಮೇಲೆಯೇ ನಂಬಿಕೆಯನ್ನು ಇಟ್ಟುಕೊಂಡು ತಮಗೆ ಬೇಕಾದವರಿಗೆ ನಾಮಿನೇಟ್ ಮಾಡಬೇಕು ಅನ್ನತಕ್ಕಂಥ ಹಠವನ್ನು ಅವರು ಹಿಡಿದಿದ್ದಾರೆ. ಅದಕ್ಕಾಗಿ ಅವರು ಇದನ್ನು ವಿತ್‌ಡ್ರಾ ಮಾಡಿಕೊಳ್ಳಬೇಕು. ವಿತ್‌ಡ್ರಾ ಮಾಡಿಕೊಳ್ಳದಿದ್ದರೆ ನಾವು ಅದರ ವಿರುದ್ಧ ಧರಣಿ ಮಾಡುತ್ತೇವೆ.

(ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಎಲ್ಲಾ ಮಾನ್ಯ ಸದಸ್ಯರುಗಳೂ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ಸದನದ ಬಾವಿಯಲ್ಲಿ ಧರಣಿ ಹೂಡಿದರು)

ಶ್ರೀ ಎಂ. ಪಿ. ಪ್ರಕಾಶ್ : ಸನ್ಮಾನ್ಯ ವಿರೋಧ ಪಕ್ಷದ ನಾಯಕರಿಗೆ ನಾನು ಮನವಿ ಮಾಡಿಕೊಳ್ಳುವುದು ಇಷ್ಟೇ, ಇದರಲ್ಲಿ ಯಾವುದೇ ತರಹವಾದಂತಹ . . . .

ಶ್ರೀ ಎಸ್.ಸುರೇಶ್ ಕುಮಾರ್ (ರಾಜಾಜೀನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಮಾತನಾಡುತ್ತಾ ಎಡ್ವರ್ಡ್ ಹೀತ್ ಮತ್ತು ಹೆರಾಲ್ಡ್ ವಿಲ್ಸನ್‌ರವರ ಉದಾಹರಣೆಗಳನ್ನೆಲ್ಲಾ ಚೆನ್ನಾಗಿ ಕೊಟ್ಟರು. ಎಡ್ವರ್ಡ್ ಹೀತ್ ಮತ್ತು ಹೆರಾಲ್ಡ್ ವಿಲ್ಸನ್‌ರವರಿಬ್ಬರನ್ನೂ ನಾವು ಬಹಳ ಚೆನ್ನಾಗಿ ನೋಡಿದ್ದೇವೆ. ಅವರ ತಪ್ಪಿನ ಮೇಲೆ ನೀವು ರಕ್ಷಣೆ ಪಡೆಯುವುದು, ಅಥವಾ ನಮ್ಮ ಕಾಲದಲ್ಲಿ ಆಗಿಲ್ಲ, ನೀವು ಏಕೆ ಸರಿ ಮಾಡುವುದಿಲ್ಲ ಎಂದು ಅವರು ಹೇಳಿದ್ದನ್ನು ನೋಡಿದ್ದೀರಿ. ಒಂದಂತೂ ನಿಜ, ಇಷ್ಟ ಇದೆಯೋ ಇಲ್ಲವೋ, ತಪ್ಪು ಆಗಬಾರದಿತ್ತು, ಆದರೆ ತಪ್ಪು ಈಗ ಆಗುತ್ತಿದೆ. ಕಾನೂನಿನ ರಕ್ಷಣೆ ತೆಗೆದುಕೊಂಡು ಇವತ್ತು ನೀವು ಮಾಡುತ್ತಿದ್ದೀರಿ. ಆದರೆ ಬಹಳಷ್ಟು ಜನರ ಹಕ್ಕನ್ನು ನೀವು ಕಿತ್ತುಕೊಳ್ಳುತ್ತಿದ್ದೀರಿ. ಬಹಳಷ್ಟು ಜನ ಗ್ರಾಮೀಣ ಪ್ರದೇಶಗಳಲ್ಲಿದ್ದಾರೆ. ವಿಶೇಷವಾಗಿ ಈ ವರ್ಷ ಕೇಂದ್ರ ಸರ್ಕಾರದಿಂದ ಗ್ರಾಮ ಸಭೆಗಳಿಗೆ ಹೆಚ್ಚು ಆರ್ಥಿಕ ನೆರವು ಕೊಡುತ್ತಿರುವಾಗ, ಸುಮಾರು 210 ಕೋಟಿ ರೂ.ಗಳು ನಮ್ಮ ಕರ್ನಾಟಕದ ಗ್ರಾಮ ಸಭೆಗಳಿಗೆ ಬರಬೇಕಾದುದನ್ನು ಕೂಡ ನಾವು ಚುನಾವಣೆಯನ್ನು ಸರಿಯಾದ ಸಮಯದಲ್ಲಿ ಮಾಡದೇ ಇರುವುದರಿಂದ ನಾವು ಕಳೆದುಕೊಳ್ಳುತ್ತಿದ್ದೇವೆ. ತಮ್ಮ ಒಂದು ರಾಜಕೀಯ ಕಾರಣಕ್ಕೋಸ್ಕರ ನೀವೇನು ಮಾಡಲಿಕ್ಕೆ ಹೊರಟಿದ್ದೀರಿ, ಇದನ್ನು ನಾವು ಪ್ರತಿಭಟಿಸಿ, ಕರ್ನಾಟಕಕ್ಕೆ ಬರಬೇಕಾದ ನ್ಯಾಯಯುತವಾದ ಹಣವನ್ನೂ ಕೂಡ ನೀವು ಕಳೆದುಕೊಂಡಿರುವುದರಿಂದ ಅದನ್ನೂ ಕೂಡ ಪ್ರತಿಭಟಿಸಿ ನಮ್ಮ ಪಕ್ಷದವರೆಲ್ಲರೂ ಸಭಾತ್ಯಾಗ ಮಾಡುತ್ತಿದ್ದೇವೆ.

(ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ.ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಬಿಜೆಪಿಯ ಶಾಸಕಾಂಗ ಪಕ್ಷದ ಉಪನಾಯಕರಾದ ಮಾನ್ಯ ಸುರೇಶ್‌ಕುಮಾರ್‌ರವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ನಮ್ಮ ತರ್ಕದಿಂದಲೇ ಎಲ್ಲವೂ ಸರಿ ಹೋಗುತ್ತದೆಂದು ನಾನೇನೂ ಭಾವಿಸಿಲ್ಲ. ಆದರೆ ಅವರಿಗೇ ಗೊತ್ತಿದ್ದಂತೆ, ಶೇಕಡ 20ರಷ್ಟು ಭಾಗವನ್ನು ನಾವೇನು ಕತ್ತರಿಸುತ್ತೇವೆ ಎನ್ನುವಂತಹ ಮಾತನ್ನು ಹೇಳಿದ್ದಾರೆ, ಅದು ಅಸಿಂಧು ಆಗಿರತಕ್ಕಂಥದ್ದು. ಇದರ ಬಗ್ಗೆ ನಾವು ಪತ್ರ ಕೂಡ ಬರೆದಿದ್ದೇವೆ. ಆದ್ದರಿಂದ ನಮಗೆ ಬರಬೇಕಾಗಿರತಕ್ಕಂಥ ಹಣ ಬರದೇ ಇರುವುದಿಲ್ಲ ಎನ್ನುವಂತಹ ಮಾತನ್ನೂ ಕೂಡ ನಾನು ಈ ಸಂದರ್ಭದಲ್ಲಿ ಪುನರುಚ್ಚರಿಸುತ್ತಾ, ಮಾನ್ಯ ಮುಖ್ಯಮಂತ್ರಿಗಳು ಈ ವಿಚಾರದಲ್ಲಿ ಕೇಂದ್ರ ಸಚಿವರಾದ ಮಾನ್ಯ ಬಾಬಾಗೌಡ ಪಾಟೇಲ್‌ರವರಿಗೆ ಪತ್ರ ಬರೆಯುವುದರ ಜೊತೆಗೆ, ಮಾನ್ಯ ಪ್ರಧಾನ ಮಂತ್ರಿಗಳಿಗೂ ಕೂಡ ಇದರ ಬಗ್ಗೆ ಪತ್ರ ಬರೆದಿದ್ದಾರೆ. ಈಗ ನಮಗೆ ಇಎಎಸ್‌ನ ಮೂರನೇ ಕಂತೇ ಬರಲಿಲ್ಲ. ಹಿಂದೆ ಇದ್ದಂತಹ ಕಾಲದಲ್ಲಿಯೂ ಕೂಡ ಮೂರನೇ ಕಂತೇ ಬರಲಿಲ್ಲ. ಹಳೆಯದಾದಂತಹ

ಹಿಂದಿನ ವರ್ಷದ 23 ಕೋಟಿ ರೂ.ಗಳು ನಮಗೆ ಬರಲಿಲ್ಲ. ಆ ಕಾಲದಲ್ಲಿಯಾದರೂ ಒಂದು ಮಾತು ಇತ್ತು. ನಾವು ಅನಿರೀಕ್ಷಿತವಾಗಿ ಸರ್ಕಾರಿ ನೌಕರರ ಸಂಬಳವನ್ನು ಹೆಚ್ಚು ಮಾಡಿದ್ದೇವೆ, ಚುನಾವಣೆಯನ್ನು ಅನಿವಾರ್ಯವಾಗಿ ಮಾಡಬೇಕಾಗಿರುವ ಕಾರಣಕ್ಕಾಗಿಯೇ ಹೆಚ್ಚು ಹೊರೆ ಆಗಿದ್ದರಿಂದ, ನಾವು ಹಣ ಕೊಡಲಿಲ್ಲ ಎಂದು ಹೇಳಿ 1997-98ರ ಸಾಲಿನ ಉದ್ಯೋಗ ಭರವಸೆ ಯೋಜನೆ ಅಡಿಯ ಎರಡನೇ ಕಂತಿನ ಹಣವನ್ನು ಬಿಡುಗಡೆ ಮಾಡಲಿಲ್ಲ. ಆದರೆ ಈಗ ಉದ್ಯೋಗ ಭರವಸೆ ಯೋಜನೆಯ ಎರಡನೇ ಕಂತನ್ನು ಕೊಟ್ಟಿದ್ದಾರೆ. ಮೂರನೇ ಕಂತನ್ನು ಕೊಟ್ಟಿಲ್ಲ. ಆ ಕಾರಣದಿಂದ ಅಲ್ಲಿಯ ಆಡಳಿತದಲ್ಲಿ ಏನು ಸಂಪನ್ಮೂಲಗಳ ಕೊರತೆ ಎಂಬುದು ನನಗೆ ಗೊತ್ತಿಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರಿಗೆ, ಮಾನ್ಯ ವೀರಪ್ಪ ಮೊಯ್ಲಿಯವರಿಗೆ ಹಾಗೂ ಮಾನ್ಯ ಘೋರ್ಪಡೆಯವರಿಗೆ ಹಾಗೂ ಇತರರಿಗೆ ಈ ಸಂದರ್ಭದಲ್ಲಿ ಬಿನ್ನಹ ಮಾಡಿಕೊಳ್ಳತಕ್ಕದ್ದು ಇದೆ. ಮಾನ್ಯ ಮಾಧುಸ್ವಾಮಿಯವರು ಮತ್ತು ಮಾನ್ಯ ಅರಗ ಜ್ಞಾನೇಂದ್ರವರು ಕೆಲವು ಮಾತುಗಳನ್ನು ಹೇಳಿದರು. ಸುಮಾರು ನಾಲ್ಕು ಸಾವಿರ ಗ್ರಾಮ ಪಂಚಾಯಿತಿಗಳಿಗೆ ಸ್ವಂತ ಕಟ್ಟಡಗಳು ಇವೆ. ಅವುಗಳನ್ನು ಒಂದೇ ಕಡೆಗೆ ಕೇಂದ್ರ ಮಾಡಿಕೊಳ್ಳುವುದಕ್ಕೆ ಎಷ್ಟು ತೊಂದರೆಯಾಗುತ್ತದೆ ಎಂದು ಅವರು ಹೇಳಿದರು. ನಮ್ಮ ದೇಶದಲ್ಲಿ ಸಾಕಷ್ಟು ಕಟ್ಟಡಗಳಿಲ್ಲ ಎನ್ನುವಂತದ್ದು ತಮಗೆಲ್ಲಾ ಗೊತ್ತಿದೆ. ಅವುಗಳನ್ನು ಅಂಗನವಾಡಿಗಳನ್ನು ನಡೆಸಲು ಬಳಸಬಹುದು ಅಥವಾ ಸ್ವಾವಲಂಬನಾ ವಿಚಾರಕ್ಕಾಗಿಯೇ ಮಹಿಳಾ ಘಟಕಗಳಿಗೆ ಕೊಡಬಹುದು ಅಥವಾ ಯುವಕ ಸಂಘಗಳಿಗೆ ಕೊಡಬಹುದು. ಹೀಗೆ ಅನೇಕ ಬೇರೆ ಬೇರೆ ಕಾರಣಗಳಿಗಾಗಿ ಅದನ್ನು ಉಪಯೋಗ ಮಾಡಿಕೊಳ್ಳುವಂತಹ ಸಾಧ್ಯತೆಗಳು ಇದೆ. ಆದ್ದರಿಂದ ದಯವಿಟ್ಟು ಸನ್ಮಾನ್ಯ ಅಧ್ಯಕ್ಷರೇ, ಈ ವಿಧೇಯಕ ಪರ್ಯಾಲೋಚನೆ ಸಂಪೂರ್ಣವಾಗಿ ಆಗಿರುವುದರಿಂದ ಇದಕ್ಕೆ ಈ ಸದನದ ಒಪ್ಪಿಗೆಯನ್ನು ನೀಡಬೇಕೆಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಆರ್ಡಿನೆನ್ಸ್ ಅನ್ನು ತಾವು ನೋಡಿದ್ದೀರಿ. ಮಾನ್ಯ ಪ್ರಕಾಶ್‌ರವರು ಏಕೆ ಹಠ ಮಾಡುತ್ತಾರೋ ಗೊತ್ತಿಲ್ಲ. ಮಾನ್ಯ ಅಧ್ಯಕ್ಷರೇ, ತಾವು ಆರ್ಡಿನೆನ್ಸ್ ಮತ್ತು ವಿಧೇಯಕಗಳೆರಡನ್ನೂ ಕೂಡ ನೋಡಿ. ಆರ್ಡಿನೆನ್ಸೇ ಒಂದು ರೀತಿ ಇದ್ದರೆ, ವಿಧೇಯಕವೇ ಒಂದು ರೀತಿ ಇದೆ. ವಿಧೇಯಕವೂ ಕೂಡ ಸಂವಿಧಾನದ ವಿರುದ್ಧವಾಗಿದೆ. ಇದರಲ್ಲಿ ಅಡ್ಮಿನಿಸ್ಟ್ರೇಟರ್ ಪ್ರಸ್ತಾವನೆ ಇಲ್ಲ, ನಾಮಿನೇಷನ್ ಪ್ರಸ್ತಾವನೆ ಇಲ್ಲ, ಒಬ್ಬರನ್ನು ತೆಗೆದು ಬೇರೆಯವರು ಇನ್ನೊಬ್ಬರನ್ನು ನಾಮಿನೇಟ್ ಮಾಡತಕ್ಕದ್ದೂ ಕೂಡ ಇದರಲ್ಲಿ ಇಲ್ಲ. ಈ ರೀತಿಯಾಗಿ ಈ ಎರಡಕ್ಕೂ ಯಾವ ರೀತಿಯಾದಂತಹ ಸಂಬಂಧವೂ ಕೂಡ ಇಲ್ಲ. ಅಂದರೆ ಇದು ಕೇವಲ ಚುನಾವಣೆಯ ದೃಷ್ಟಿಯಿಂದ ಮಾಡಿದ್ದಾರೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಕೇವಲ ತಮಗೆ ಬೇಕಾದವರಿಗೆ ನಾಮಿನೇಟ್ ಮಾಡಿಕೊಳ್ಳುವುದಕ್ಕಾಗಿಯೇ ಇದನ್ನು ಮಾಡಿದ್ದಾರೆ ಎನ್ನುವುದು ಬಹಳ ಸ್ಪಷ್ಟವಾಗಿದೆ. ಕೇವಲ ಎಲ್ಲಾ ಪಂಚಾಯಿತಿಗಳನ್ನೂ ಕೂಡ ತಮ್ಮ ಕೈಗೇ ತೆಗೆದುಕೊಳ್ಳಬೇಕು ಎಂಬ ದೃಷ್ಟಿಯಿಂದ ಇದನ್ನು ಮಾಡಿದ್ದಾರೆ ಎಂಬುದು ಬಹಳ ಸ್ಪಷ್ಟವಾಗಿದೆ. ಪ್ರೆಸೆಂಟ್ ಮೆಂಬರ್ ಕಂಟಿನ್ಯೂ ಮಾಡಬಹುದು ಎಂದು ತಾವು ಹೇಳಿದಿರಿ. ಆ ರೀತಿ ಇದರಲ್ಲಿ ಇದೆಯೇ? ಅದನ್ನೂ ಅವರು ತರಬಹುದಾಗಿತ್ತು. ಅದನ್ನು ಮಾತ್ರ ನಾವು ಅವರ ಮಾತಿನ ಮೇರೆಗೆ, ಹೇಳಿಕೆ ಮೇಲೆ, ಓರಲ್

ಇನ್‌ಸ್ಟ್ರಕ್ಷನ್ ಮೇಲೆಯೇ ನಾವು ನಂಬಬೇಕು. ಬಾಕಿ ಎಲ್ಲಾ ಅವರಿಗೆ ಬರವಣಿಗೆಯಲ್ಲಿ ಬೇಕು. ಸೆಕ್ಷನ್ 8ರಲ್ಲಿ ಇರುವುದನ್ನು ಅವರು ಉಪಯೋಗ ಮಾಡಿಕೊಂಡು ಅಡ್ಮಿನಿಸ್ಟ್ರೇಟರ್ ಅನ್ನು ಆರು ತಿಂಗಳಿಗೋಸ್ಕರ ನೇಮಿಸಬಹುದಾಗಿತ್ತು ಅಥವಾ ಅಡ್ಮಿನಿಸ್ಟ್ರೇಟಿವ್ ಕಮಿಟಿಯನ್ನೇ ಕಂಟಿನ್ಯೂ ಮಾಡಬೇಕಾಗಿತ್ತು. ಅದನ್ನು ಬಿಟ್ಟು ಇವರು ಈ ನಾಮಿನೇಷನ್ ಮಾಡುವ ಪದ್ಧತಿಯನ್ನೇಕೆ ತಂದರು? ಅಧ್ಯಕ್ಷ ಮತ್ತು ಉಪಾಧ್ಯಕ್ಷ ಎರಡನ್ನೂ ನಾಮಿನೇಟ್ ಮಾಡುವ ಅಧಿಕಾರ ಇಟ್ಟುಕೊಂಡಿದ್ದಾರೆ. ಅದೂ ಅಲ್ಲದೇ ಅಡಿಷನಲ್ ಮೆಂಬರ್ಸ್ ಅನ್ನು ನಾಮಿನೇಟ್ ಮಾಡುವ ವಿಚಾರವನ್ನೂ ಕೂಡ ತಂದಿದ್ದಾರೆ. ಇದೆಲ್ಲವನ್ನೂ ನೋಡಿದ ಮೇಲೆ, ಮಾನ್ಯ ಅಧ್ಯಕ್ಷರೇ, ಸಂವಿಧಾನದ ವಿರುದ್ಧ ಈ ವಿಧೇಯಕಕ್ಕೆ ಸದನ ಒಪ್ಪಿಗೆ ಕೊಟ್ಟು ಇದನ್ನು ಪಾಸ್ ಮಾಡಿಕೊಡುತ್ತೀರಿ ಎನ್ನುವುದಾದರೆ ಇದು ಸರಿಯಲ್ಲ. ತಮಗೆ ಕೆಟ್ಟ ಹೆಸರು ಬರಬಾರದು ಎಂಬ ಉದ್ದೇಶದಿಂದ ನಾನು ಈ ಮಾತನ್ನು ಹೇಳುತ್ತಿದ್ದೇನೆ. ಅವರಿಗೆ ಬೇಕಾದರೆ ಕೆಟ್ಟ ಹೆಸರು ಬರಲಿ. ಅವರು ಯಾವಾಗಲೂ ಕೆಟ್ಟ ಹೆಸರನ್ನು ತೆಗೆದುಕೊಳ್ಳುವುದಕ್ಕೋಸ್ಕರವೇ ಅಲ್ಲಿ ಕುಳಿತಿದ್ದಾರೆ. ಆದರೆ ತಮ್ಮ ಕಾಲದಲ್ಲಿ ಇಂಥ ಒಂದು ಕಾನೂನು ಪಾಸ್ ಆಯಿತು ಎನ್ನುವ ಹಾಗೆ ಆಗಬಾರದು.

ಅಧ್ಯಕ್ಷರು : ನನಗೆ ಸ್ನೇಹಿತರ ಹಾಗೂ ವಿಶ್ವಾಸಿಗರ ಸಂಖ್ಯೆ ದಿನೇ ದಿನೇ ಜಾಸ್ತಿ ಯಾಗುತ್ತಾ, ಜಾಸ್ತಿಯಾಗುತ್ತಾ ಮುಜುಗರ ಹೆಚ್ಚಾಗುತ್ತಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಎಂದೂ ಕೂಡ ನಿಮಗೆ ಮುಜುಗರ ತರುವುದಿಲ್ಲ. ಆದರೆ ಮಂತ್ರಿಗಳು ಇಂಥ ಕಾನೂನು ತಂದು ನಿಮಗೆ ಮುಜುಗರ ತರುತ್ತಿದ್ದಾರೆಯೇ ಹೊರತು ನಾವಲ್ಲ.

ಅಧ್ಯಕ್ಷರು : ಈಗ ಧರಣಿಯಲ್ಲಿ ಹಿರಿಯ ನಾಯಕರುಗಳಾದ ವೀರಪ್ಪಮೊಯ್ಲಿಯವರು, ಘೋರ್ಪಡೆಯವರು, ಕಾಗೋಡು ತಿಮ್ಮಪ್ಪನವರು ಮತ್ತು ವಿರೋಧ ಪಕ್ಷದ ನಾಯಕರಾದ ನೀವುಗಳೆಲ್ಲರೂ ಇದ್ದೀರಿ. ನೀವೆಲ್ಲರೂ ಅತ್ಯಂತ ಹಿರಿಯರಾಗಿದ್ದು ಅನುಭವ ಹೊಂದಿದವರಾಗಿದ್ದೀರಿ. ಇಂಥ ಅನೇಕ ಸನ್ನಿವೇಶಗಳು ಈ ಹಿಂದೆ ಸದನದಲ್ಲಿ ನಡೆದಿರುವುದನ್ನು ತಾವು ನೋಡಿದ್ದೀರಿ. ಇಂಥ ಸನ್ನಿವೇಶಗಳಲ್ಲಿ ಸಭಾಧ್ಯಕ್ಷರ ಪಾತ್ರ ಎಷ್ಟು ಸೀಮಿತವಾಗಿರುತ್ತದೆ ಎನ್ನುವ ಅರಿವು ತಮಗೆಲ್ಲರಿಗೂ ತಿಳಿದೇ ಇರುತ್ತದೆ. ಸಭೆಯನ್ನು ನಿಯಮಾನುಸಾರ ನಡೆಸಿಕೊಂಡು ಹೋಗುವ ಜವಾಬ್ದಾರಿ ಜೊತೆಗೆ ಕೆಲವು ಸೀಮಿತವಾದ ಜವಾಬ್ದಾರಿಗಳಷ್ಟೇ ನನಗೆ ಇರುತ್ತದೆ. ಸರ್ಕಾರದವರೂ ಕೂಡ ಈಗಾಗಲೇ ತಮ್ಮ ಇಚ್ಛೆಯನ್ನು ಮತ್ತು ಉದ್ದೇಶವನ್ನು ಸಮರ್ಥವಾಗಿ ತಮಗೆ ಹೇಳಿದ್ದಾರೆ. ಅದಕ್ಕೆ ತಾವೂ ಕೂಡ ತಮ್ಮ ವಾದವನ್ನು ಮಂಡಿಸಿದ್ದೀರಿ. ಸಂಖ್ಯಾಬಲದ ದೃಷ್ಟಿಯನ್ನು ಗಮನಕ್ಕೆ ತೆಗೆದುಕೊಂಡು ಈ ಬಿಲ್ ಪಾಸ್ ಮಾಡಬಹುದು. ಆದರೆ ನಾನು ನಿಮ್ಮನ್ನು ಧರಣಿಯಲ್ಲಿರಿಸಿ ಪಾಸ್ ಮಾಡುವುದು ಸರಿಯಲ್ಲವೆಂದು ನನಗನ್ನಿಸುತ್ತಿರುವುದರಿಂದ ನಾನು ನಿಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಸಭೆಯನ್ನು ಗೌರವಯುತವಾಗಿ ನಡೆಸಿಕೊಂಡು ಹೋಗಬೇಕು. ನನಗೂ ಕೂಡ ಅವರಲ್ಲಿ ಒಂದು ನಂಬಿಕೆ ಇದೆ. ಬಹುಶಃ ಈ ಒಂದು ಕಾನ್‌ಟಿನ್‌ಜೆನ್ಸಿ ಏನು ಅರೈಸ್ ಆಗಿದೆ, ಕಾನ್ಸ್‌ಟ್ಯುಟ್ಯೂಷನಲ್ ರಿಸ್ಟ್ರಿಕ್ಷನ್ಸ್ ಇರುವುದರಿಂದ ಈ ಬಾಡೀಸ್ ಎಕ್ಸ್‌ಟೆಂಡ್ ಮಾಡುವುದಕ್ಕಾಗುವುದಿಲ್ಲವೆನ್ನುವ ಉದ್ದೇಶದಿಂದ ಅವರು

ಈ ಶೆಲ್ಟರ್ ತೆಗೆದುಕೊಂಡಿರಬಹುದು, ಆದಕಾರಣ ಅದನ್ನು ಅವರು ದುರುಪಯೋಗಮಾಡಿಕೊಳ್ಳುವುದಿಲ್ಲ ಎನ್ನುವ ವಿಶ್ವಾಸ ಅವರ ಮೇಲೆ ನನಗೆ ಇದೆ. ಆದುದರಿಂದ ತಾವೆಲ್ಲರೂ ತಮ್ಮ ಸ್ಥಾನಗಳಿಗೆ ಹೋದರೆ ನಾವು ಗೌರವಯುತವಾಗಿ ಈ ಬಿಲ್‌ನ್ನು ಪಾಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಆ ಉದ್ದೇಶ ಇಲ್ಲದಿದ್ದರೆ ಈ ತಿದ್ದುಪಡಿಯನ್ನು ತರುತ್ತಿರಲಿಲ್ಲ. ಅದರ ಬದಲು ಹಿಂದೆ ಸೆಕ್ಷನ್ 8(ಎ)ನಲ್ಲಿ ಏನು ಇತ್ತೋ ಅದನ್ನೇ ಅನುಸರಿಸಬಹುದಾಗಿತ್ತು. ಆದರೆ ಈಗ ಬಿಲ್ ತಂದು ಅವರ ಕಡೆಯವರನ್ನು ನಾಮಿನೇಟ್ ಮಾಡಿಕೊಳ್ಳುವುದಕ್ಕೇ ಆಗಿದೆ.

ಅಧ್ಯಕ್ಷರು : ಈಗಾಗಲೇ ನಾಮಿನೇಟ್ ಮಾಡಿದ್ದೇವೆ ಎಂದು ಹೇಳುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಈ ಅಮೆಂಡ್‌ಮೆಂಟ್ ಕಾನ್‌ಸ್ಟಿಟ್ಯುಷನ್‌ಗೆ ವಿರುದ್ಧವಿದೆಯೆಂದು ಹೇಳಿಯೇ ವೀರಪ್ಪಮೊಯ್ಲಿಯವರು ಮತ್ತು ಹಿರಿಯರಾದ ಘೋರ್ಪಡೆಯವರು ಮೊದಲ ಬಾರಿಗೆ ಧರಣಿಯಲ್ಲಿದ್ದಾರೆ.

ಅಧ್ಯಕ್ಷರು : ನಾವು ಆ ಕಾರಣದಿಂದಲೇ ನಿಮ್ಮ ವಿನಂತಿ ಮಾಡಿಕೊಳ್ಳುತ್ತಿರುವುದು. ಎಂದೂ ಧರಣಿಗೆ ಬರೆದಿರುವ ಹಿರಿಯರಾದ ಘೋರ್ಪಡೆಯವರು ಮತ್ತು ಇನ್ನಿತರರು ಇಂದು ಧರಣಿಯಲ್ಲಿರುವುದರಿಂದಲೇ ನಾವು ವಿನಂತಿ ಮಾಡಿಕೊಳ್ಳುತ್ತಿರುವುದು. ಮಾಮೂಲಾಗಿ ನಮ್ಮ ಸ್ನೇಹಿತರುಗಳಂಥವರು ಧರಣಿಗೆ ಬಂದರೆ ಈಗ ಬೇಡ ಆಮೇಲೆ ಧರಣಿಗೆ ಬನ್ನಿ ಎಂದು ಹೇಳಬಹುದಾಗಿತ್ತು. ಆದಕಾರಣ ನಾನು ಮನವಿ ಮಾಡುವುದೇನೆಂದರೆ ನಿಮ್ಮ ಧರಣಿಯನ್ನು ಹಿಂತೆಗೆದುಕೊಳ್ಳುವ ನಿಟ್ಟಿನಲ್ಲಿ ಮತ್ತೊಮ್ಮೆ ಆಲೋಚನೆ ಮಾಡಿ. ತಾವೆಲ್ಲರೂ ತಮ್ಮ ತಮ್ಮ ಸ್ಥಾನಗಳಿಗೆ ಹೋಗಬೇಕೆಂದು ಮನವಿ ಮಾಡಿಕೊಳ್ಳುತ್ತಿದ್ದೇನೆ.

SRI M.P. PRAKASH : I seek the leave of the House. I beg of them. Let them heed the advice of the Hon'ble Speaker and also assurance given by me and by my government on the floor of the House.

ಅಧ್ಯಕ್ಷರು : ಅವರೂ ಕೂಡ ಮನವಿ ಮಾಡುತ್ತಿದ್ದಾರೆ. ದಯವಿಟ್ಟು ತಮ್ಮ ಸ್ಥಾನಗಳಿಗೆ ಹೋಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನಾವು ನಿಮ್ಮ ಮಾತಿಗೆ ಗೌರವ ಕೊಡುತ್ತೇವೆ. ಆದರೆ ಈ ಬಿಲ್ ಸರಿಯಿಲ್ಲ. ಆದರೂ ಅವರು ಬಿಲ್ ಪಾಸ್ ಮಾಡಿಸಿಕೊಳ್ಳುವುದಿದ್ದರೆ ಮಾಡಿಸಿಕೊಳ್ಳಲಿ. ಆದರೆ ನಮ್ಮದು ಮಾತ್ರ ಅದಕ್ಕೆ ಪ್ರೊಟೆಸ್ಟ್ ಇದ್ದೇ ಇದೆ. ಅದನ್ನು ನಾವು ಮಾಡುತ್ತೇವೆ.

ಅಧ್ಯಕ್ಷರು : ಧರಣಿ ನಡೆಯುತ್ತಿದ್ದರೂ ಕೂಡ ಬಿಲ್ ಪಾಸ್ ಮಾಡುವ ಸಲುವಾಗಿ ನಾನು ಮತಕ್ಕೆ ಹಾಕಬಹುದು. ಆದರೆ ನನಗೆ ಎಲ್ಲೋ ಒಂದು ಕಡೆ ಮನಸ್ಸು ಒಪ್ಪುತ್ತಿಲ್ಲ. ಈ ರಾಜ್ಯದ ಅಧಿಕಾರದಲ್ಲಿ ಅತ್ಯಂತ ಜವಾಬ್ದಾರಿ ಸ್ಥಾನಗಳಲ್ಲಿದ್ದಂಥ ನಾಯಕರುಗಳಾದ ತಮ್ಮೆಲ್ಲರನ್ನೂ ಧರಣಿಯಲ್ಲಿರಿಸಿ ಕೇವಲ ಮೆಜಾರಿಟಿ ಇದೆ, ಎನ್ನುವ ಕಾರಣಕ್ಕೆ ಈ ಬಿಲ್‌ನ್ನು ಪಾಸ್ ಮಾಡಿಸಲು ನನ್ನ ಮನಸ್ಸು ಒಪ್ಪುತ್ತಿಲ್ಲ. ಆದುದರಿಂದ ನಾನು ಮತ್ತೊಮ್ಮೆ ಮನವಿ ತಮ್ಮಲ್ಲಿ ಮಾಡಿಕೊಳ್ಳುತ್ತಿದ್ದೇನೆ.

ದಯವಿಟ್ಟು ಧರಣಿ ಹಿಂತೆಗೆದುಕೊಂಡು ತಮ್ಮ ಸ್ಥಾನಗಳಿಗೆ ಹೋಗಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ, ತಮಗೆ ಅಗೌರವ ತೋರಿಸಬೇಕೆನ್ನುವ ಉದ್ದೇಶ ನಮಗ್ಯಾರಿಗೂ ಇಲ್ಲ. ನೀವು ಯಾವಾಗ ಏನು ಹೇಳಿದರೂ ಅದನ್ನು ಶಿರಸಾವಹಿಸಿ ಮಾಡಿಕೊಂಡು ಬಂದಿದ್ದೇವೆ. ಈ ಹಿಂದೆ ಸದನದಲ್ಲಿ ನಮಗೆ ತೊಂದರೆಯಾದಾಗ, ಘರ್ಷಣೆಯಾದಾಗ, ಮಾತಿನ ಚಕಮಕಿಯಾದಾಗ, ತಾವು ನಮ್ಮನ್ನು ಕರೆದಾಗ ನಿಮ್ಮ ನಿಲುವಿನಿಂದ ನಮಗೆ ತೊಂದರೆಯಾದರೂ ಕೂಡ ಅದನ್ನು ಸಹಿಸಿಕೊಂಡು ತಮ್ಮ ಮಾತನ್ನು ಒಪ್ಪಿಕೊಂಡೇ ಬಂದಿದ್ದೇವೆ. ಆದರೆ ಇದರಲ್ಲಿ ಇವರು ಕಾನೂನನ್ನು ಸಂವಿಧಾನದ ವಿರುದ್ಧವಾಗಿ ತಿದ್ದುಪಡಿಯನ್ನು ತಂದು ಕೇವಲ ತಮಗೆ ಮೆಜಾರಿಟಿ ಇರುವುದರಿಂದ ಇದನ್ನು ಹೇಗೆ ಬೇಕಾದರೂ ಪಾಸ್ ಮಾಡಿಸಿಕೊಳ್ಳಬಹುದು ಎನ್ನುವ ಉದ್ದೇಶವನ್ನು ಅವರು ಇಟ್ಟುಕೊಂಡಿರುವುದರಿಂದಲೇ ನಾವು ಅವರ ವಿರುದ್ಧವಾಗಿ ಇಂದು ಪ್ರತಿಭಟನೆಯನ್ನು ಮಾಡುತ್ತಿದ್ದೇವೆಯೇ ಹೊರತು ತಮಗೆ ಮತ್ತು ತಮ್ಮ ಮಾತಿಗೆ ಬೆಲೆ ಕೊಡಬಾರದು ಎನ್ನುವ ಉದ್ದೇಶ ಖಂಡಿತವಾಗಿಯೂ ನಮಗಿಲ್ಲ. ಆದುದರಿಂದ ನಾವು ಸರ್ಕಾರದ ಧೋರಣೆ ವಿರುದ್ಧ ಪ್ರತಿಭಟಿಸುವ ಸಲುವಾಗಿ ಧರಣಿ ಮಾಡುತ್ತಿರುವುದರಿಂದ ತಾವು ದಯವಿಟ್ಟು ನಮ್ಮನ್ನು ಕ್ಷಮಿಸಬೇಕು.

(ಮತ್ತೆ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆಯವರು ಸದನದ ಬಾವಿಗೆ ಬಂದರು)

ಅಧ್ಯಕ್ಷರು : ಮಾನ್ಯ ವಿರೋಧ ಪಕ್ಷದ ನಾಯಕರು ಹಾಗೂ ಇನ್ನಿತರ ಮುಖಂಡರುಗಳಾದ ತಾವು ತಮ್ಮ ತಾತ್ವಿಕ ನಿಲುವನ್ನು ಸಾಬೀತು ಮಾಡುವ ದೃಷ್ಟಿಯಿಂದ ಪ್ರತಿಭಟನೆ ವ್ಯಕ್ತಪಡಿಸಲು ಸದನದ ಬಾವಿಗೆ ಬಂದಿದ್ದೀರಿ. ಈ ಹಿಂದಿನ ಅನೇಕ ಸನ್ನಿವೇಶಗಳಲ್ಲಿ ಸದನದ ಬಾವಿಯಲ್ಲಿ ವಿರೋಧ ಪಕ್ಷದವರಿದ್ದರೂ ಕೂಡ ಹಿಂದಿನ ಅನೇಕ ಸಭಾಧ್ಯಕ್ಷರು ಕೊಟ್ಟಿರುವ ತೀರ್ಪನ್ನು ಅನುಸರಿಸಿಯೇ ನಾನು ಹೌಸ್ ಈಸ್ ಇನ್ ಆರ್ಡರ್ ಎಂದು ಹೇಳಬೇಕಾಗಿದೆ. ಇದನ್ನು ಬಿಟ್ಟರೆ ನನಗೆ ಬೇರೆ ಯಾವ ಮಾರ್ಗವೂ ಇಲ್ಲದಿರುವುದರಿಂದ ಹಾಗೂ ಅನಿವಾರ್ಯವಾಗಿ ಸಂವಿಧಾನಬದ್ಧವಾಗಿ ನನ್ನ ಮೇಲೆ ಇರತಕ್ಕಂಥ ಹೊಣೆಯನ್ನು ನಿರ್ವಹಿಸುವ ದೃಷ್ಟಿಯಿಂದ ನಾನು ಈ ಪ್ರರ್ಯಾಲೋಚನ ಪ್ರಸ್ತಾವವನ್ನು ಸಭೆಯ ಮತಕ್ಕೆ ಹಾಕುತ್ತಿದ್ದೇನೆ.

ಅಧ್ಯಕ್ಷರು : ಪ್ರಸ್ತಾವ ಏನೆಂದರೆ,

"1999ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು ಖಂಡ 2ರಿಂದ 5ರವರೆಗೆ

ಅಧ್ಯಕ್ಷರು: "ಖಂಡ 2 ರಿಂದ 5ರವರೆಗೆ, ಎರಡೂ ಸೇರಿದಂತೆ, ಈ ವಿಧೇಯಕದ ಅಂಗವಾಗಿರುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2 ರಿಂದ 5ರವರೆಗೆ, ಎರಡೂ ಸೇರಿದಂತೆ, ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

<u>ಖಂಡ 1 ಇತ್ಯಾದಿ</u>

ಅಧ್ಯಕ್ಷರು : ಪ್ರಸ್ತಾವ ಏನೆಂದರೆ

"ಮೊದಲನೆಯ ಖಂಡ, ಹೆಸರು ಮತ್ತು ಅವತರಣಿಕೆಗಳು ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ"

<u>ಪ್ರಸ್ತಾವ ಅಂಗೀಕರಿಸಲ್ಪಟ್ಟಿತು</u>

(ಮೊದಲನೆಯ ಖಂಡ, ದೀರ್ಘ ಶೀರ್ಷಿಕೆ, ಪ್ರಸ್ತಾವನೆ ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆಗಳನ್ನು ವಿಧೇಯಕಕ್ಕೆ ಸೇರಿಸಲ್ಪಟ್ಟಿತು)

<u>ಪ್ರಸ್ತಾವ ಅಂಗೀಕಾರ</u>

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಸಚಿವರು) : ಮಾನ್ಯ ಅಧ್ಯಕ್ಷರೆ "1999ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಅಂಗೀಕರಿಸುವುದು" ಎಂದು ಕೋರುತ್ತೇನೆ.

ಅಧ್ಯಕ್ಷರೆ : ಪ್ರಸ್ತಾವ ಏನೆಂದರೆ

"1999ರ ಕರ್ನಾಟಕ ಪಂಚಾಯತ್ ರಾಜ್ (ತಿದ್ದುಪಡಿ) ವಿಧೇಯಕವನ್ನು ಈ ಸಭೆಯು ಅಂಗೀಕರಿಸುತ್ತದೆ"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಹಾಗೂ ವಿಧೇಯಕಕ್ಕೆ ಒಪ್ಪಿಗೆ ನೀಡಲಾಯಿತು

ಅಧ್ಯಕ್ಷರು : ಈಗ ಬಿ.ಡಿ.ಎ. ಬಿಲ್‌ನ್ನು ತೆಗೆದುಕೊಳ್ಳೋಣ.

ಶ್ರೀ ಜೆ. ಸಿ. ಮಾಧುಸ್ವಾಮಿ : ಅಧ್ಯಕ್ಷರೆ, ನಿನ್ನೆ ಕಾನೂನು ಮಂತ್ರಿಗಳಾದ ಎಂ.ಸಿ. ನಾಣಯ್ಯನವರೇ, ಸದನದಲ್ಲಿ ಈ ಬಿಲ್‌ನ್ನು ಜೂನ್‌ನಲ್ಲಿ ಮಂಡಿಸುವುದಾಗಿ ಹೇಳಿದ್ದಾರೆ. ಈ ಬಿಲ್ ಪಾಸ್ ಮಾಡಿಸುವುದು ಅಷ್ಟೇನೂ ತುರ್ತಲ್ಲ.

ಅಧ್ಯಕ್ಷರು : ಸದನ ಕಲಾಪ ಸಮಿತಿ ಸಭೆಯಲ್ಲಿ ವಿರೋಧ ಪಕ್ಷದ ನಾಯಕರು ಹಾಗೂ ಇತರ ಮುಖಂಡರು ಬಿಲ್ ಪಾಸ್ ಮಾಡಿಸಲು ಒಪ್ಪಿಕೊಂಡಿದ್ದಾರೆ.

ಶ್ರೀ ಜೆ. ಸಿ. ಮಧುಸ್ವಾಮಿ : ಸನ್ಮಾನ್ಯ ಕಾನೂನು ಸಚಿವರು ಈ ಬಿಲ್‌ನ್ನು ಜೂನ್‌ನಲ್ಲಿ ರೀ-ಇಂಟ್ರಡ್ಯೂಸ್ ಮಾಡುವುದಾಗಿ ಮಾತು ಕೊಟ್ಟಿದ್ದಾರೆ. ಇದನ್ನು ಸದನದಲ್ಲಿಯೇ ಹೇಳಿದ್ದಾರೆ. ಹೀಗೆ ಹೇಳಿರುವಾಗ ಸಭೆಯ ಗೌರವ ಏನಾಗಬೇಕು? ಇನ್ನು ಇದರಲ್ಲಿ ತೀರ್ಮಾನ ಮಾಡುವುದು ನಿಮಗೆ ಬಿಟ್ಟಿದ್ದು.